ಸರ್ಕಾರಿ ಉರ್ದು ಪ್ರೌಢಶಾಲೆ(RMSA) ಅರಳಿಹಳ್ಳಿ ಭದ್ರಾವತಿ ತಾಲ್ಲೂಕು

# ದ್ವಿತೀಯ ಭಾಷೆ ಕನ್ನಡದಲ್ಲಿ

## ಗರಿಷ್ಠ ಅಂಕಗಳನ್ನು ಗಳಿಸುವ ಮಾರ್ಗದರ್ಶಿ

# ಹೊಂಗಿರಣ

## ಒಂಬತ್ತನೆಯ ತರಗತಿ

# 9

(ಇದು ಹೊಸ ಪಠ್ಯ ಪುಸ್ತಕದ ಅನುಸಾರವಾಗಿದೆ.)

ಪರಶುರಾಮ್ ಎನ್ ಎಂ.ಎ., ಎಂ.ಎಡ್.

ಕನ್ನಡ ಭಾಷಾ ಶಿಕ್ಷಕರು

ಸರ್ಕಾರಿ ಉರ್ದು ಪ್ರೌಢಶಾಲೆ(RMSA)ಅರಳಿಹಳ್ಳಿ ಭದ್ರಾವತಿ ತಾಲ್ಲೂಕು

9731436839

ಪರಶುರಾಮ್ ಎನ್

# ಪರಿವಿಡಿ


| ಕ್ರ.ಸಂ. | ಪಾಠದ ಹೆಸರು | ಪುಟ ಸಂಖ್ಯೆ |
|---|---|---|
| | **ಗದ್ಯಭಾಗ** | |
| 1 | ಅವರೇ ರಾಜರತ್ನಂ! | 3– 7 |
| 2 | ಅರಳಿಕಟ್ಟೆ | 7–10 |
| 3 | ಜೇನು ಕುರುಬರ ತಾಯಿಯೂ ಕಾಡು ಆನೆಯ ಮಗನೂ | 11–15 |
| 4 | ಬಸ್ಸು ಪ್ರಯಾಣದ ಸುಖ ದುಃಖಗಳು | 15–19 |
| 5 | ಉರುಸುಗಳಲ್ಲಿ ಭಾವೈಕ್ಯತೆ | 19–22 |
| 6 | ಪಾಂಡಿತ್ಯದ ಡಿ.ಎಲ್. ನರಸಿಂಹಾಚಾರ್ | 23–27 |
| 7 | ಐನ್‌ಸ್ಟೀನ್ ಮತ್ತು ದೇವರು | 27–31 |
| 8 | ಭೀಷ್ಮ ಪ್ರತಿಜ್ಞೆ | 31–35 |
| | **ಪದ್ಯಭಾಗ** | |
| 1 | ಬೆಳಗು ಜಾವ | 36–38 |
| 2 | ಅಟ್ಟ ಹತ್ತ ಬೇಡ | 38–40 |
| 3 | ಅವರು ಮತ್ತು ನಾವು | 40–42 |
| 4 | ತೊಟ್ಟಿಲು ತೂಗುವ ಹಾಡು | 42–45 |
| 5 | ಮನೆಗೆಲಸದ ಹೆಣ್ಣು ಮಗಳು | 45–47 |
| 6 | ಹೊನ್ನೆ ಮರದ ನೆರಳು | 47–50 |
| 7 | ವಚನಗಳು | 50–52 |
| 8 | ಆಚಾರವಿಲ್ಲದ ನಾಲಗೆ | 53–55 |
| | **ಪೂರಕ ಓದು** | |
| 1 | ಕುವೆಂಪು ಅವರ ವಿಶ್ವಮಾನವ ಸಂದೇಶ | 56–57 |
| 2 | ನೀರಿನ ಮಹತ್ವ ಮತ್ತು ಮಾಲಿನ್ಯ | 57–58 |
| 3 | ಸರ್ ಎಂ. ವಿಶ್ವೇಶ್ವರಯ್ಯ | 58 |
| | **ರಚನೆ** | |
| 1 | ಗಾದೆಗಳ ವಿಸ್ತರಣೆ | 58–59 |
| 2 | ಪ್ರಬಂಧ ರಚನೆ | 59–61 |
| 3 | ಪತ್ರಲೇಖನ | 62–64 |
| | | |
| 1 | ಅಪರಿಚಿತ ಗದ್ಯ | 65 |
| 2 | ಗ್ರಂಥಋಣ | 66 |

# 1. ಅವರೇ ರಾಜರತ್ನಂ ! – ಕೆ. ಪಿ. ಪೂರ್ಣಚಂದ್ರ ತೇಜಸ್ವಿ

**ಕೃತಿಕಾರರ ಪರಿಚಯ :**

- **ಕೆ.ಪಿ. ಪೂರ್ಣಚಂದ್ರ ತೇಜಸ್ವಿ** ಅವರು 1938 ರಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳ್ಳಿಯಲ್ಲಿ ಜನಿಸಿದರು.
- ಇವರು ಹುಲಿಯೂರಿನ ಸರಹದ್ದು, ನಿಗೂಢ ಮನುಷ್ಯರು, ಜುಗಾರಿ ಕ್ರಾಸ್, ಚಿದಂಬರ ರಹಸ್ಯ, ಅಲೆಮಾರಿಯ ಅಂಡಮಾನ್ ಮತ್ತು ಮಹಾನದಿ ನೈಲ್ , ಅಬಚೂರಿನ ಪೋಸ್ಟಾಫೀಸು ಮತ್ತು 'ಕರ್ವಾಲೋ' ಮುಂತಾದ ಕೃತಿಗಳನ್ನು ಬರೆದಿದ್ದಾರೆ.
- ಶ್ರೀಯುತರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪಂಪ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ಲಭಿಸಿವೆ.
- 'ಅವರೇ ರಾಜರತ್ನಂ!' ಗದ್ಯ ಭಾಗವನ್ನು ತೇಜಸ್ವಿ ಅವರ **'ಅಣ್ಣನ ನೆನಪು'** ಕೃತಿಯಿಂದ ಆರಿಸಲಾಗಿದೆ.

**1.ಪದಗಳ ಅರ್ಥ :**

**ಅಂಗಲಾಚು** – ಬೇಡು **ಅಪ್ರತಿಭ** – ದಿಗ್ಭ್ರಮೆ **ಕಿರುಚು** – ಜೋರಾಗಿ ಕೂಗು
**ಚಾಡಿ** –ಇಲ್ಲದ್ದನ್ನು ಹೇಳು **ಜೋರುಮಾಡು** – ದಬಾಯಿಸು **ಧೋತ್ರ** – ಪಂಚೆ
**ಬಗಲು** – ಪಕ್ಕೆ; ಕಂಕುಳು. **ಮೂರ್ಖತನ** – ದಡ್ಡತನ **ಸೋಮಾರಿ** – ಮೈಗಳ್ಳ; ಆಲಸಿ.
**ಶಿರಸಾವಹಿಸು** – ಹೇಳಿದಂತೆ ಮಾಡು **ಸಾಮೂಹಿಕ** – ಒಟ್ಟು **ಛೀಮಾರಿ ಹಾಕು** – ತಿರಸ್ಕಾರ; ಧಿಕ್ಕರಿಸು; ಅಪಮಾನಿಸು.

**2. ಪ್ರಶ್ನೆಗಳು :**

**ಅ) ಬಿಟ್ಟ ಸ್ಥಳಗಳನ್ನು ನೀಡಿರುವ ನಾಲ್ಕು ಆಯ್ಕೆಗಳಿಂದ ಸೂಕ್ತವಾದುದನ್ನು ಆಯ್ದು ಬರೆಯಿರಿ.**

1. ಅವರೇ ರಾಜರತ್ನ! ಗದ್ಯಭಾಗದ ಆಕರ ಕೃತಿ ______________
ಅ) ಅಣ್ಣನ ಕನಸು <u>ಬ) ಅಣ್ಣನ ನೆನಪು</u> ಕ) ಅಣ್ಣನ ಮನಸು ಡ) ಅಣ್ಣನ ಸೊಗಸು
2. ತೇಜಸ್ವಿ ಅವರು ರಾಜರತ್ನಂ ಅವರನ್ನು ______________ ಎಂದು ಭಾವಿಸಿದ್ದರು.
ಅ) ಕವಿ ಬ) <u>ಭಿಕ್ಷುಕ</u> ಕ) ಗೆಳೆಯ ಡ) ಸನ್ಯಾಸಿ
3. ತೇಜಸ್ವಿಯವರು ಬಾಲ್ಯದಲ್ಲಿ ಕವಿತೆಗಳನ್ನು ______________ ಎಂದು ಭಾವಿಸಿದ್ದರು.
ಅ) ಕವಿಸೃಷ್ಟಿ ಬ) ಮಾಯಾಸೃಷ್ಟಿ ಕ) <u>ಸಹಜಸೃಷ್ಟಿ</u> ಡ) ಮಕ್ಕಳಸೃಷ್ಟಿ
4. ಕುವೆಂಪು ಅವರ ಪ್ರಕಾರ ಭಿಕ್ಷೆ ನೀಡುವುದು ಭಿಕ್ಷುಕರನ್ನು ______________
ಅ) ಅವಮಾನಿಸಿದಂತೆ ಬ) ತಿರಸ್ಕರಿಸಿದಂತೆ ಕ) <u>ಪ್ರೋತ್ಸಾಹಿಸಿದಂತೆ</u> ಡ) ಗೌರವಿಸಿದಂತೆ

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಕುವೆಂಪು ಅವರು ಭಿಕ್ಷೆ ಹಾಕುವುದನ್ನು ಏಕೆ ವಿರೋಧಿಸುತ್ತಿದ್ದರು?
ಕುವೆಂಪುರವರು ಭಿಕ್ಷುಕರಿಗೆ ಭಿಕ್ಷೆ ಹಾಕುವುದು ಅವರನ್ನು ಪ್ರೋತ್ಸಾಹಿಸಿದ ಹಾಗೆ ಎಂದು ವಿರೋಧಿಸುತ್ತಿದ್ದರು.
2.ಕುವೆಂಪು ಅವರನ್ನು ಮನೆಯವರೆಲ್ಲ ಏನೆಂದು ಕರೆಯುತ್ತಿದ್ದರು?
ಕುವೆಂಪು ಅವರನ್ನು ಮನೆಯವರೆಲ್ಲ ಅಣ್ಣ ಕರೆಯುತ್ತಿದ್ದರು.
3. ಕುವೆಂಪು ಅವರ ಮಕ್ಕಳು ಭಿಕ್ಷುಕನೆಂದು ಭಾವಿಸಿದ ಕವಿಯ ಹೆಸರೇನು?
ಕುವೆಂಪು ಅವರ ಮಕ್ಕಳು ಭಿಕ್ಷುಕನೆಂದು ಭಾವಿಸಿದ ಕವಿಯ ಹೆಸರು ರಾಜರತ್ನಂ.
4. ಕುವೆಂಪು ಅವರ ಮಕ್ಕಳು ಚಿಕ್ಕವರಿರುವಾಗ ಕವಿತೆಗಳನ್ನು ಏನೆಂದು ತಿಳಿದಿದ್ದರು?
ಕವಿತೆಗಳು ಸಹ ಹುಡುಗರು, ಮಕ್ಕಳು, ಮರ ಗಿಡ ಇರುವಂತೆ ಪ್ರಪಂಚದಲ್ಲಿರುವ ವಸ್ತುಗಳು ಎಂದು ತಿಳಿದಿದ್ದರು.
5. ಕುವೆಂಪು ಅವರ ಹೆಂಡತಿ ಮಕ್ಕಳ ಹೆಸರೇನು?
ಕುವೆಂಪು ಅವರ ಹೆಂಡತಿ ಹೆಸರು ಹೇಮಾವತಿ. ಹಾಗೂ ಅವರ ಮಕ್ಕಳ ಹೆಸರು ಕೆ.ಪಿ. ಪೂರ್ಣಚಂದ್ರ ತೇಜಸ್ವಿ, ಇಂದುಕ, ತಾರಿಣಿ ಮತ್ತು ಚೈತ್ರ.
6. ರಾಜರತ್ನಂ ಅವರು ಪುಟ್ಟಪ್ಪನವರನ್ನು ಏನೆಂದು ತಮಾಷೆ ಮಾಡಿದರು?
ರಾಜರತ್ನಂ ಅವರು "ಏನು ಪುಟ್ಟಪ್ಪಾ! ಮನೆಗೆ ಬಂದವರನ್ನೆಲ್ಲ ಮುಂದೆ ಕಳಿಸಿಬಿಡಿ ಎಂದು ಹೇಳಿದ್ದೀರಾ?" ಎಂದು ತಮಾಷೆ ಮಾಡಿದರು.

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಕುವೆಂಪು ಅವರಿಗೆ ಭಿಕ್ಷುಕರ ಬಗ್ಗೆ ಇದ್ದ ಅಭಿಪ್ರಾಯವೇನು?

ಭಿಕ್ಷಕ್ಕೆ ಬರುವವರೆಲ್ಲ ಸಾಧಾರಣವಾಗಿ ಮೋಸಗಾರರು, ಅಥವಾ ಕದಿಯಲು ಏನಾದರೂ ಇದೆಯೆ ಎಂದು ನೋಡಿಕೊಂಡು ಹೋಗಲು ಬರುವ ಕಳ್ಳರು, ಇಲ್ಲವೇ ದುಡಿದು ತಿನ್ನಲು ಇಷ್ಟವಿಲ್ಲದ ಸೋಮಾರಿಗಳು. ಆದ್ದರಿಂದ ಅವರಿಗೆ ಭಿಕ್ಷೆ ಹಾಕಿ ಪ್ರೋತ್ಸಾಹಿಸಬೇಡಿ ಎಂದು ಹೇಳುತ್ತಿದ್ದರು.

2.ಕುವೆಂಪು ತಮ್ಮ ಮಕ್ಕಳಿಗೆ ರಾಜರತ್ನಂ ಅವರನ್ನು ಹೇಗೆ ಪರಿಚಯಿಸಿದರು?

ಕುವೆಂಪು ಮಕ್ಕಳ ಕಡೆ ತಿರುಗಿ "ಇವರು ಯಾರು ಗೊತ್ತಾ?" ಎಂದು ಕೇಳಿದರು. ನಮಗೇನು ಗೊತ್ತು. ನಮಗೆ ಗೊತ್ತಿದ್ದರೆ ನಾವ್ಯಾಕೆ ಮುಂದೆ ಹೋಗು ಎಂದು ಹೇಳುತ್ತಿದ್ದೆವು. ನಮ್ಮ ಪಿಳಿಪಿಳಿ ಕಣ್ಣುಗಳನ್ನು ನೋಡಿ "ನಿಮ್ಮ ಪುಸ್ತಕದಲ್ಲಿ ಬಣ್ಣದ ತಗಡಿನ ತುತ್ತೂರಿ, ಕಾಸಿಗೆ ಕೊಂಡನು ಕಸ್ತೂರಿ ಓದಿದ್ದೀರಲ್ಲಾ. ಇವರೇ ಅದನ್ನು ಬರೆದವರು." ಎಂದು ತಮ್ಮ ಮಕ್ಕಳಿಗೆ ರಾಜರತ್ನಂ ಅವರನ್ನು ಪರಿಚಯಿಸಿದರು.

3.ರಾಜರತ್ನಂ ಅವರ ವೇಷಭೂಷಣಗಳು ಹೇಗಿದ್ದವು?

ರಾಜರತ್ನಂ ಅವರ ವೇಷಭೂಷಣಗಳೆಂದರೆ, ಬಿಳಿಯ ಅಡ್ಡ ಪಂಚೆ ಹಾಗೂ ಬಿಳಿಯ ಅಂಗಿ, ಮೈಮೇಲೆ ನಸು ಕಂದು ಧೋತ್ರ, ಅವರ ಬಗಲಲ್ಲೊಂದು ದೊಡ್ಡ ಜೋಳಿಗೆಯಂಥ ಚೀಲ ಇತ್ತು.

4. ರಾಜರತ್ನಂ ಬಗ್ಗೆ ಮಕ್ಕಳು ಕುವೆಂಪು ಅವರಲ್ಲಿ ಏನೆಂದು ಚಾಡಿ ಹೇಳಿದರು?

ರಾಜರತ್ನಂ ಬಗ್ಗೆ ಮಕ್ಕಳು ಕುವೆಂಪುರವರ ಬಳಿ ಹೋಗಿ "ಯಾವನೊ ಒಬ್ಬ ಮುಂದೆ ಹೋಗು ಅಂದರೂ ಹೋಗದೆ ನಿಂತೇ ಇದ್ದಾನೆ" ಎಂದು ಚಾಡಿ ಹೇಳಿದರು.

5. ಕವಿತೆಯ ಜೊತೆಗೆ ಕವಿಯ ಹೆಸರನ್ನೂ ಏಕೆ ನೆನಪಲ್ಲಿಡಬೇಕು?

ಕವಿತೆಗಳನ್ನು ಕವಿಗಳು ಬರೆಯುತ್ತಾರೆ. ಯಾವ ಕವಿ ಯಾವ ಕವಿತೆಯನ್ನು ಬರೆದಿದ್ದಾರೆ ಎಂಬುದು ನಮಗೆ ತಿಳಿಯಬೇಕಾದರೆ, ಕವಿತೆಯ ಜೊತೆಗೆ ಕವಿಯ ಹೆಸರನ್ನೂ ನೆನಪಲ್ಲಿಡಬೇಕು.

6. ಕುವೆಂಪು ಅವರು ರಾಜರತ್ನಂ ಅವರನ್ನು ಮನೆಯ ಒಳಕ್ಕೆ ಹೇಗೆ ಬರಮಾಡಿಕೊಂಡರು?

ಕುವೆಂಪುರವರು ಮನೆಯಿಂದ ಹೊರಬಂದು ರಾಜರತ್ನಂ ನೋಡಿ, ಅವರ ಗುರುತು ಹಿಡಿದು "ಓಹ್ಹೊ ಬನ್ನಿ ಬನ್ನಿ" ಎಂದೆನ್ನುತ್ತಾ ಅವರೇ ಸರಸರ ಮುಂದುವರೆದು ಗೇಟು ತೆಗೆದು ದಟ್ಟಿಪಂಚೆಯ ಮನುಷ್ಯನನ್ನು ಕರೆದುಕೊಂಡು ಬಂದರು.

7. ಕುವೆಂಪು ಅವರ ಮಕ್ಕಳನ್ನು ಕಂಡಾಗಲೆಲ್ಲಾ ರಾಜರತ್ನಂ ಏನೆಂದು ತಮಾಷೆ ಮಾಡುತ್ತಿದ್ದರು?

ರಾಜರತ್ನಂ ಆಮೇಲೆ ಯಾವಾಗಲಾದರೂ ಮನೆಗೆ ಬಂದಾಗ ಮಕ್ಕಳನ್ನು ಕಂಡರೆ "ಏನ್ರಪ್ಪಾ ಒಳಗೆ ಬರಬಹುದೋ, ಮುಂದೆ ಹೋಗಬೇಕೋ?" ಎಂದು ತಮಾಷೆ ಮಾಡುತ್ತಿದ್ದರು.

**ಈ) ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಕುವೆಂಪು ಅವರು ಭಿಕ್ಷೆ ನೀಡಿ ಯಾವ ರೀತಿ ಮೋಸಕ್ಕೆ ಒಳಗಾಗಿದ್ದರು?

ಕುವೆಂಪುರವರು ಭಿಕ್ಷುಕರಿಗೆ ಭಿಕ್ಷೆ ಹಾಕುವುದು ಅವರನ್ನು ಪ್ರೋತ್ಸಾಹಿಸಿದ ಹಾಗೆ ಎಂದು ವಿರೋಧಿಸುತ್ತಿದ್ದರು. ಅವರು ಆಶ್ರಮದಲ್ಲಿದ್ದಾಗ ಒಬ್ಬ ಹೆಳವನಿಗೆ ಮೂರುಕಾಸು, ಆರುಕಾಸು ಭಿಕ್ಷೆ ಹಾಕುತ್ತಿದ್ದರಂತೆ. ಆಗಲೂ ಆಶ್ರಮದ ಸ್ವಾಮಿಗಳಾದ ಸಿದ್ಧೇಶ್ವರಾನಂದರು ಭಿಕ್ಷಾವೃತ್ತಿಗೆ ಉತ್ತೇಜನ ನೀಡುವುದಕ್ಕೆ ಬದ್ಧ ವಿರೋಧಿಗಳಾಗಿದ್ದರು. ಒಮ್ಮೆ ಅಣ್ಣ ಆ ಹೆಳವನಿಗೆ ಭಿಕ್ಷೆ ನೀಡುತ್ತಿದ್ದಾಗ ಆಕಸ್ಮಿಕವಾಗಿ ಸಿದ್ಧೇಶ್ವರಾನಂದರು ಅಲ್ಲಿಗೆ ಬಂದರು. ಕೈಕಾಲೆಲ್ಲಾ ಸೊಟ್ಟ ಮಾಡಿಕೊಂಡು ಸ್ವಾಮೀ ಎಂದು ಕರುಣಾಜನಕವಾಗಿ ಅಂಗಲಾಚುತ್ತಿದ್ದ ಆ ಹೆಳವ, ಸಿದ್ಧೇಶ್ವರಾನಂದರನ್ನು ನೋಡಿದ ಕೂಡಲೇ ಸಟ್ಟನೆ ಕೈಕಾಲುಗಳನ್ನು ನೆಟ್ಟಗೆ ಮಾಡಿಕೊಂಡು ವೇಗವಾಗಿ ಆಶ್ರಮದ ಆವರಣದಿಂದ ಆಚೆಗೆ ಓಡಿಹೋದನಂತೆ. ಸಿದ್ಧೇಶ್ವರಾನಂದರು ಅಣ್ಣನ ಮೂರ್ಖತನಕ್ಕೆ ಸರಿಯಾಗಿ ಛೀಮಾರಿ ಮಾಡಿದರು. ಅಣ್ಣನಿಗೆ ದುಡ್ಡು ಕಳಕೊಂಡಿದ್ದಕ್ಕಿಂತ ಹೆಚ್ಚಾಗಿ ಇಷ್ಟು ದಿನ ಮೋಸಹೋದೆನಲ್ಲಾ ಎಂಬುದು ಹೆಚ್ಚು ಬೇಸರದ ಸಂಗತಿಯಾಗಿತ್ತು.

2.ಕುವೆಂಪು ಅವರ ಮಕ್ಕಳು ರಾಜರತ್ನಂ ಅವರನ್ನು ಭಿಕ್ಷುಕನೆಂದು ಏಕೆ ಭಾವಿಸಿದರು? ಅದು ಉಂಟು ಮಾಡಿದ ಫಜೀತಿ ಏನು?

ಒಂದು ಸಾರಿ ಬಿಳಿಯ ಅಡ್ಡ ಪಂಚೆ ಹಾಗೂ ಬಿಳಿಯ ಅಂಗಿ, ಮೈಮೇಲೆ ನಸು ಕಂದು ಧೋತ್ರ ಹೊದ್ದವರೊಬ್ಬರು ನಮ್ಮ ಮನೆ ಬಾಗಿಲು ತೆರೆಯಲು ಸಾಹಸ ಪಡುತ್ತಿದ್ದುದನ್ನು ನೋಡಿದೆವು. ಅವರ ಬಗಲಲ್ಲೊಂದು ದೊಡ್ಡ ಜೋಳಿಗೆಯಂಥ ಚೀಲ ಇತ್ತು. ಮನೆಯ ಚಿಕ್ಕ ಗೇಟನ್ನು ಕೊಂಚ ಎತ್ತಿ ಅಗುಳಿ ತೆರೆಯಬೇಕಾಗಿದ್ದರಿಂದ ಹೊರಗಿನಿಂದ ತೆಗೆಯುವುದು ಕಷ್ಟ ಇತ್ತು. ಅವರನ್ನು ನೋಡಿದ ಚೈತ್ರ "ಮುಂದೆ ಹೋಗಪ್ಪಾ" ಎಂದು ಕೂಗಿದ. ಆದರೂ ಆ ವ್ಯಕ್ತಿ ತಮ್ಮ ಗೇಟು ತೆಗೆಯುವ ಪ್ರಯತ್ನ ಮುಂದುವರೆಸಿದ್ದನ್ನು ನೋಡಿ ನಾವೆಲ್ಲರೂ ಸಾಮೂಹಿಕವಾಗಿ ಮುಂದೆ ಹೋಗಪ್ಪಾ ಎಂದು ಕಿರುಚಿದೆವು. ಆಮೇಲೂ ಅವರು ನಿಂತೆ ಇದ್ದುದನ್ನು ನೋಡಿ ನಾವು ಅಣ್ಣನಿಗೆ ಚಾಡಿ ಹೇಳಲು ಒಳಗೆ ಓಡಿದೆವು. ಬಂದ ವ್ಯಕ್ತಿಯೇನೂ ಭಿಕ್ಷುಕರ ರೀತಿ ಕೊಳಕು ಬಟ್ಟೆಯಲ್ಲಿ ಭಿಕ್ಷಾಪಾತ್ರೆ ಹಿಡಿದವರಲ್ಲ. ಆದರೆ ಅನೇಕ ದಾಸಯ್ಯಗಳೂ, ಮಾರಿ ಭಕ್ತರೂ, ಎಂತೆಂಥವಕ್ಕೋ ಚಂದಾ ವಸೂಲಿ ಮಾಡಲು ಬರುವವರು ಟ್ರಿಮ್ಮಾಗಿಯೇ ಬಟ್ಟೆ ಹಾಕಿಕೊಂಡು ಭಿಕ್ಷಾಟನೆಗೆ ಬರುತ್ತಿದ್ದುದರಿಂದ ನಾವು ನಮಗೆ ಗುರುತು ಪರಿಚಯ ಇಲ್ಲದೆ ಮನೆಯೊಳಗೆ ಬರುವವರನ್ನೆಲ್ಲಾ ಮುಂದೆ ಕಳಿಸಬೇಕಾದ

ಭಿಕ್ಷದವರೆಂದೇ ತೀರ್ಮಾನಿಸಿ ಕೂಗುತ್ತಿದ್ದೆವು. ಅಣ್ಣನ ಬಳಿ ಹೋಗಿ “ಯಾವನೊ ಒಬ್ಬ ಮುಂದೆ ಹೋಗು ಅಂದರೂ ಹೋಗದೆ ನಿಂತೇ ಇದ್ದಾನೆ” ಎಂದು ಚಾಡಿ ಹೇಳಿದೆವು. ಅಣ್ಣ ಹೊರಬಂದು ನೋಡಿದವರೇ ಅವರ ಗುರುತು ಹಿಡಿದು “ಓಹ್ಹೊ ಬನ್ನಿ ಬನ್ನಿ” ಎಂದೆನ್ನುತ್ತಾ ಅವರೇ ಸರಸರ ಮುಂದುವರೆದು ಗೇಟು ತೆಗೆದು ದಟ್ಟಿಪಂಚೆಯ ಮನುಷ್ಯನನ್ನು ಕರೆದುಕೊಂಡು ಬಂದರು. ಮುಂದೆ ಹೋಗು ಎಂದು ಹೇಳಿದ ಮನುಷ್ಯನಿಗೆ ಸಿಕ್ಕ ಮರ್ಯಾದೆಯನ್ನು ನೋಡಿ ನಾವು ಅಪ್ರತಿಭರಾಗಿ ನಿಂತಿದ್ದೆವು. ಬಂದಾತ “ಏನು ಪುಟ್ಟಪ್ಪಾ! ಮನೆಗೆ ಬಂದವರನ್ನೆಲ್ಲ ಮುಂದೆ ಕಳಿಸಿಬಿಡಿ ಎಂದು ಹೇಳಿದ್ದೀರಾ?” ಎಂದು ತಮಾಷೆಯಾಗಿ ಕೇಳಿದರು.

**ಉ) ಸಂದರ್ಭದೊಡನೆ ವಿವರಿಸಿರಿ.**

1. “ಯಾವನೊ ಒಬ್ಬ ಮುಂದೆ ಹೋಗು ಅಂದರೂ ಹೋಗದೆ ನಿಂತೇ ಇದ್ದಾನೆ”

ಈ ವಾಕ್ಯವನ್ನು ಕೆ.ಪಿ.ಪೂರ್ಣತೇಜಸ್ವಿ ಅವರು ಬರೆದಿರುವ ‘ಅಣ್ಣನ ನೆನಪು’ ಎಂಬ ಕೃತಿಯಿಂದ ಆಯ್ದ ‘ಅವರೇ ರಾಜರತ್ನಂ’ ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಕುವೆಂಪುರವರ ಮಕ್ಕಳು ಕುವೆಂಪುರವರಿಗೆ ಹೇಳಿದರು. ರಾಜರತ್ನಂ ಅವರು ಕುವೆಂಪುರವರ ಮನೆಗೆ ಬಂದು ಗೇಟು ತೆಗೆಯಲು ಸಾಹಸ ಪಡುತ್ತಿದ್ದನ್ನು ನೋಡಿದ ಮಕ್ಕಳು ರಾಜರತ್ನಂರವರನ್ನು ಭಿಕ್ಷುಕನೆಂದು ಭಾವಿಸಿ “ಮುಂದೆ ಹೋಗಪ್ಪಾ” ಎಂದು ಹೇಳಿದರು. ಆದರೂ ಕೂಡ ರಾಜರತ್ನಂರವರು ಗೇಟನ್ನು ತೆಗೆಯಲು ಮತ್ತೆ ಪ್ರಯತ್ನಿಸುತ್ತದ್ದನ್ನು ಕಂಡು ಕುವೆಂಪುರವರ ಮಕ್ಕಳು ಕುವೆಂಪುರ ಬಳಿ ಹೋಗಿ ಈ ಮೇಲಿನ ಮಾತನ್ನು ಹೇಳಿದರು.

2. “ನಿಮ್ಮ ಪುಸ್ತಕದಲ್ಲಿ ಬಣ್ಣದ ತಗಡಿನ ತುತ್ತೂರಿ, ಕಾಸಿಗೆ ಕೊಂಡನು ಕಸ್ತೂರಿ ಓದಿದ್ದೀರಲ್ಲಾ. ಇವರೇ ಅದನ್ನು ಬರೆದವರು”

ಈ ವಾಕ್ಯವನ್ನು ಕೆ.ಪಿ.ಪೂರ್ಣತೇಜಸ್ವಿ ಅವರು ಬರೆದಿರುವ ‘ಅಣ್ಣನ ನೆನಪು’ ಎಂಬ ಕೃತಿಯಿಂದ ಆಯ್ದ ‘ಅವರೇ ರಾಜರತ್ನಂ’ ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಕುವೆಂಪುರವರು ಅವರ ಮಕ್ಕಳಿಗೆ ಹೇಳಿದ್ದಾರೆ. ಮಕ್ಕಳ ಕಡೆ ತಿರುಗಿ “ನಿಮ್ಮ ಪುಸ್ತಕದಲ್ಲಿ ಬಣ್ಣದ ತಗಡಿನ ತುತ್ತೂರಿ, ಕಾಸಿಗೆ ಕೊಂಡನು ಕಸ್ತೂರಿ ಓದಿದ್ದೀರಲ್ಲಾ. ಇವರೇ ಅದನ್ನು ಬರೆದವರು.” ಎಂದು ರಾಜರತ್ನಂರವರನ್ನು ಪರಿಚಯಿಸುವಾಗ ಈ ಮೇಲಿನ ಮಾತು ಬಂದಿದೆ.

3.“ಏನ್ರಪ್ಪಾ ಒಳಗೆ ಬರಬಹುದೋ, ಮುಂದೆ ಹೋಗಬೇಕೋ?”

ಈ ವಾಕ್ಯವನ್ನು ಕೆ.ಪಿ.ಪೂರ್ಣತೇಜಸ್ವಿ ಅವರು ಬರೆದಿರುವ ‘ಅಣ್ಣನ ನೆನಪು’ ಎಂಬ ಕೃತಿಯಿಂದ ಆಯ್ದ ‘ಅವರೇ ರಾಜರತ್ನಂ’ ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ರಾಜರತ್ನಂರವರು ಕುವೆಂಪುರವರ ಮಕ್ಕಳಿಗೆ ಹೇಳಿದರು. ಕುವೆಂಪುರವರ ಮಕ್ಕಳು ಒಂದು ಬಾರಿ ರಾಜರತ್ನಂರವರು ಮನೆಗೆ ಬಂದಾಗ “ಮುಂದೆ ಹೋಗಪ್ಪಾ” ಎಂದು ಹೇಳಿದರು. ರಾಜರತ್ನಂರವರು ಪರಿಚಯವಾದ ನಂತರ ಅವರು ಅನೇಕ ಬಾರಿ ಕುವೆಂಪುರವರ ಮನೆಗೆ ಬಂದಾಗ ಈ ಮೇಲಿನ ಮಾತನ್ನು ತಮಾಷೆಯಾಗಿ ಹೇಳುತ್ತಿದ್ದರು.

**೩. ಭಾಷಾಭ್ಯಾಸ**

**ಅ) ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ.**

1. ಅಪ್ಪ, ಅಣ್ಣ, ತಮ್ಮ, ಸ್ನೇಹಿತ. = ಸ್ನೇಹಿತ
2. ಮನೆಯನ್ನು, ಕರುವನ್ನು, ಏನನ್ನು, ಶಾಲೆಯನ್ನು.= ಏನನ್ನು
3. ಬಾಗಿಲು, ಕಿಟಕಿ, ಜೋಳಿಗೆ, ಅಟ್ಟ. = ಜೋಳಿಗೆ
4. ಸರಸರ, ಬನ್ನಿಬನ್ನಿ, ಸಟ್ಟನೆ, ಪಿಳಿಪಿಳಿ. = ಸಟ್ಟನೆ
5. ಕಣ್ಣು, ದೇಹ, ಕಿವಿ, ಮೂಗು. = ದೇಹ

**ಆ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.**

1 .ಶಿರಸಾವಹಿಸಿ: ನಾನು ಗುರುಹಿರಿಯರು ಹೇಳಿದ ಮಾತನ್ನು ಶಿರಸಾವಹಿಸಿ ಮಾಡುತ್ತೇನೆ.
2. ಆಕಸ್ಮಿಕ : ನಾನು ದಾರಿಯಲ್ಲಿ ಹೋಗುತ್ತಿದ್ದಾಗ ಆಕಸ್ಮಿಕವಾಗಿ ಕಾಲು ಜಾರಿ ಬಿದ್ದೆನು.
3. ಛೀಮಾರಿ : ನನ್ನ ಸೋಮಾರಿತನವನ್ನು ನೋಡಿ ನಮ್ಮ ತಂದೆಯವರು ನನಗೆ ಛೀಮಾರಿ ಹಾಕಿದರು.
4.ಪ್ರೋತ್ಸಾಹ: ಶಾಲೆಯಲ್ಲಿ ನಮಗೆ ಪ್ರೋತ್ಸಾಹದಾಯಕ ಯೋಜನೆಗಳು ದೊರೆಯುತ್ತಿವೆ.
5. ಕನಿಕರ: ದುರ್ಬಲರಿಗೆ ಕನಿಕರ ತೋರಿಸಬೇಕು.
6. ಅಂಗಲಾಚು: ಪ್ರವಾಸಕ್ಕೆ ಕಳಿಸಿಕೊಡಬೇಕೆಂದು ನಮ್ಮ ತಂದೆಯನ್ನು ಅಂಗಲಾಚಿದೆನು.

**ಇ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.**

ಕರುಣೆ x ನಿಷ್ಕರುಣೆ          ಸಾಧಾರಣ x ಅಸಾಧಾರಣ

ಕಷ್ಟ x ಸುಖ ಪ್ರೋತ್ಸಾಹಿಸು x ಕಡೆಗಣಿಸು

**ಈ) ಕೆಳಗಿನ ಪದಗಳಿಗೆ ಬಹುವಚನ ರೂಪಗಳನ್ನು ಬರೆಯಿರಿ.**

ಭಿಕ್ಷುಕ– ಭಿಕ್ಷುಕರು ಚೀಲ– ಚೀಲಗಳು ಸೋಮಾರಿ– ಸೋಮಾರಿಗಳು

ಬಾಗಿಲು– ಬಾಗಿಲುಗಳು ಮಗು– ಮಕ್ಕಳು ಕವಿತೆ– ಕವಿತೆಗಳು

**ಉ) ಕೆಳಗಿನ ಪದಗಳ ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ ಬರೆಯಿರಿ.**

1. ಮನೆಯಿಂದ= ಇಂದ – ಚತಿರ್ಥಿ ವಿಭಕ್ತಿ ಪ್ರತ್ಯಯ
3, ಊಟವನ್ನು= ಅನ್ನು – ದ್ವಿತೀಯ ವಿಭಕ್ತಿ ಪ್ರತ್ಯಯ
4. ಪುಸ್ತಕದ = ಅ – ಷಷ್ಠೀ ವಿಭಕ್ತಿ ಪ್ರತ್ಯಯ
5. ದಾರಿಯಲ್ಲಿ = ಅಲ್ಲಿ – ಸಪ್ತಮಿ ವಿಭಕ್ತಿ ಪ್ರತ್ಯಯ

## 4. ಸೈದ್ಧಾಂತಿಕ ವ್ಯಾಕರಣ :

*** ಸಂಧಿಗಳು**

ಎರಡು ಅಕ್ಷರಗಳು ಕಾಲವಿಳಂಬವಿಲ್ಲದಂತೆ ಕೂಡುವುದಕ್ಕೆ 'ಸಂಧಿ' ಎಂದು ಹೆಸರು.

**ಸಂಸ್ಕೃತ ಸಂಧಿಗಳು :**

**ಸಂಸ್ಕೃತ ಸ್ವರಸಂಧಿಗಳು :**

**1.ಸವರ್ಣದೀರ್ಘಸಂಧಿ :**

| ಉದಾ : ಪೂರ್ವಪದ | + ಉತ್ತರಪದ | = ಸಂಧಿಪದ | |
|---|---|---|---|
| ದೇವ | + ಆಲಯ | = ದೇವಾಲಯ | (ಅ + ಆ = ಆ) |
| ಮಹಾ | + ಅನುಭಾವ | = ಮಹಾನುಭಾವ | (ಆ + ಅ = ಆ) |
| ಗಿರಿ | + ಇಂದ್ರ | = ಗಿರೀಂದ್ರ | (ಇ + ಇ = ಈ) |
| ಗುರು | +ಉಪದೇಶ | = ಗುರೂಪದೇಶ | (ಉ + ಉ = ಊ) |

**2. ಗುಣಸಂಧಿ :.**

| ಉದಾ : ಪೂರ್ವಪದ | + ಉತ್ತರಪದ | = ಸಂಧಿಪದ | |
|---|---|---|---|
| ದೇವ | + ಈಶ | = ದೇವೇಶ | (ಅ + ಈ = ಏ) |
| ಮಹಾ | + ಉತ್ಸವ | = ಮಹೋತ್ಸವ | (ಆ + ಉ = ಓ) |
| ಮಹಾ | + ಋಷಿ | = ಮಹರ್ಷಿ | (ಆ + ಋ = ಅರ್) |

**3. ವೃದ್ಧಿಸಂಧಿ :**

| ಉದಾ : ಪೂರ್ವಪದ | + ಉತ್ತರಪದ | = ಸಂಧಿಪದ | |
|---|---|---|---|
| ಏಕ | + ಏಕ | = ಏಕೈಕ | (ಅ + ಏ = ಐ) |
| ಭಾವ | + ಐಕ್ಯ | = ಭಾವೈಕ್ಯ | (ಅ + ಐ = ಐ) |
| ಜಲ | + ಓಘ | = ಜಲೌಘ | (ಅ + ಓ = ಔ) |
| ವನ | + ಔಷಧ | = ವನೌಷಧ | (ಅ + ಔ = ಔ) |

**4. ಯಣ್‌ಸಂಧಿ :**

| ಉದಾ : ಪೂರ್ವಪದ | + ಉತ್ತರಪದ | = ಸಂಧಿಪದ |
|---|---|---|
| ಅತಿ | + ಉಕ್ತಿ | = ಅತ್ಯುಕ್ತಿ |
| ಮನು | + ಅಂತರ | = ಮನ್ವಂತರ |
| ಪಿತೃ | + ಆರ್ಜಿತ | = ಪಿತ್ರಾರ್ಜಿತ |

**ಸಂಸ್ಕೃತ ವ್ಯಂಜನ ಸಂಧಿಗಳು :**

**5. ಜಶ್ತ್ವಸಂಧಿ :**

| ಉದಾ : ಪೂರ್ವಪದ | + ಉತ್ತರಪದ | = ಸಂಧಿಪದ |
|---|---|---|
| ವಾಕ್ | + ದೇವಿ | = ವಾಗ್ದೇವಿ |
| ಅಚ್ | + ಅಂತ | = ಅಜಂತ |
| ಷಟ್ | + ಆನನ | = ಷಡಾನನ |
| ಸತ್ | + ಆನಂದ | = ಸದಾನಂದ |
| ಅಪ್ | + ಧಿ | = ಅಬ್ಧಿ |

6. ಶ್ಚುತ್ವಸಂಧಿ :

ಉದಾ : ಪೂರ್ವಪದ + ಉತ್ತರಪದ = ಸಂಧಿಪದ

ಮನಸ್ + ಶುದ್ಧಿ = ಮನಶ್ಶುದ್ಧಿ
ಸತ್ + ಚಿತ್ರ = ಸಚ್ಚಿತ್ರ
ಜಗತ್ + ಜ್ಯೋತಿ = ಜಗಜ್ಜ್ಯೋತಿ

7. ಅನುನಾಸಿಕಸಂಧಿ :

ಉದಾ : ಪೂರ್ವಪದ + ಉತ್ತರಪದ = ಸಂಧಿಪದ

ದಿಕ್ + ನಾಗ = ದಿಙ್ನಾಗ
ಷಟ್ + ಮಾಸ = ಷಣ್ಮಾಸ
ಚಿತ್ + ಮೂಲ = ಚಿನ್ಮೂಲ

## 2. ಅರಳಿಕಟ್ಟೆ – ಬಿ. ಜಿ. ಎಲ್. ಸ್ವಾಮಿ

**ಕೃತಿಕಾರರ ಪರಿಚಯ :**

* **ಬಿ.ಜಿ.ಎಲ್. ಸ್ವಾಮಿ** ಅವರ ಪೂರ್ಣ ಹೆಸರು ಬೆಂಗಳೂರು ಗುಂಡಪ್ಪ ಲಕ್ಷ್ಮೀನಾರಾಯಣ ಸ್ವಾಮಿ. ಇವರು 1916 ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು.

* ಇವರು ದೌರ್ಗಂಧಿಕಾಪಹರಣ, ಶಾಸನಗಳಲ್ಲಿ ಗಿಡಮರಗಳು, ನಮ್ಮ ಹೊಟ್ಟೆಯಲ್ಲಿ ದಕ್ಷಿಣ ಅಮೆರಿಕ, ಹಸುರು ಹೊನ್ನು' 'ಪಂಚಕಲಶಗೋಪುರ', 'ಕಾಲೇಜುರಂಗ', 'ಕಾಲೇಜು ತರಂಗ', 'ತಮಿಳು ತಲೆಗಳ ನಡುವೆ' ಮುಂತಾದ ಕೃತಿಗಳನ್ನು ಬರೆದಿದ್ದಾರೆ.

* ಇವರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ದೊರೆತಿವೆ.

* ಪ್ರಸ್ತುತ **'ಅರಳಿ ಕಟ್ಟೆ'** ಗದ್ಯ ಭಾಗವನ್ನು ಬಿ.ಜಿ.ಎಲ್.ಸ್ವಾಮಿ ಅವರ **'ಹಸುರು ಹೊನ್ನು'** ಕೃತಿಯಿಂದ ಆರಿಸಲಾಗಿದೆ.

**ಅಭ್ಯಾಸ**

**I. ಪದಗಳ ಅರ್ಥ :**

**ಆದರ** – ಪ್ರೀತಿ; ಗೌರವ.
**ಉದ್ಧರಣೆ** – ತೀರ್ಥದ ಸಣ್ಣ ಚಮಚ
**ಕಾಪು** – ಕಾಯುವಿಕೆ; ಕಾವಲು; ರಕ್ಷಣೆ.
**ಕೃಶ** – ಬಡಕಲು; ಅಶಕ್ತ.
**ಪ್ರತಿಷ್ಠೆ** – ಸ್ಥಾಪನೆ
**ರಿಟೈರ್** (ಇಂಗ್ಲಿಷ್) – ನಿವೃತ್ತಿ
**ಸತ್ರ** – ಛತ್ರ
**ಸಾಷ್ಟಾಂಗ ಬೀಳು** – ದೀರ್ಘದಂಡ ನಮಸ್ಕಾರ ಮಾಡು.
**ಉತ್ಕಟ** – ಪ್ರಬಲ
**ಉದ್ಯುಕ್ತ** – ಕೆಲಸದಲ್ಲಿ ತೊಡಗಿದ; ಪ್ರಯತ್ನಿಸಿದ.
**ಕೃತಕೃತ್ಯ** – ಸಾರ್ಥಕ; ಧನ್ಯ; ಇಚ್ಛೆಪೂರ್ತಿಗೊಂಡ.
**ಕಾರ್ಪೋರೇಷನ್**(ಇಂಗ್ಲಿಷ್) – ನಗರ ಪಾಲಿಕೆ
**ವಿಘ್ನ** – ಅಡಚಣೆ
**ವೃದ್ಧ** – ವಯಸ್ಸಾದ ವ್ಯಕ್ತಿ; ಮುದುಕ.
**ಸರ್ಕಾರ** (ಹಿಂದಿ) – ಆಡಳಿತ ನಡೆಸುವ ವ್ಯವಸ್ಥೆ.

**2. ಪ್ರಶ್ನೆಗಳು :**

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಶೇಷಪ್ಪನವರಿಗೆ ಜೀವನದಲ್ಲಿದ್ದ ಉತ್ಕಟ ಆಸೆ ಯಾವುದು?
ಶೇಷಪ್ಪನವರಿಗೆ ಜೀವನದಲ್ಲಿದ್ದ ಉತ್ಕಟ ಆಸೆ ಅಶ್ವತ್ಥ ಪ್ರತಿಷ್ಠೆ, ಪ್ರತಿಷ್ಠೆಯಾದ ಮರಕ್ಕೊಂದು ಕಟ್ಟೆ ಕಟ್ಟುವುದು.
2. ಶೇಷಪ್ಪನವರು ಜೀವನೋಪಾಯಕ್ಕೆ ಏನು ಮಾಡುತ್ತಿದ್ದರು?
ಶೇಷಪ್ಪನವರು ಜೀವನೋಪಾಯಕ್ಕೆ ನಿತ್ಯ ಭಿಕ್ಷೆ ಬೇಡುತ್ತಿದ್ದರು.
3. ಶೇಷಪ್ಪನವರು ಅಶ್ವತ್ಥ ಕಟ್ಟೆಯನ್ನು ಕಟ್ಟಲು ಗುರುತಿಸಿದ ಸ್ಥಳ ಯಾವುದು?
ಶೇಷಪ್ಪನವರು ಅಶ್ವತ್ಥ ಕಟ್ಟೆಯನ್ನು ಕಟ್ಟಲು ಗುರುತಿಸಿದ ಸ್ಥಳ ಬೆಂಗಳೂರಿನ ಬಸವನಗುಡಿಯಲ್ಲಿರುವ ಮಲ್ಲಿಕಾರ್ಜುನಸ್ವಾಮಿ ಗುಡಿಯ ಮುಂಭಾಗ.
4. 'ಅರಳಿಕಟ್ಟೆ' ಗದ್ಯ ಭಾಗದ ಆಕರ ಗ್ರಂಥ ಯಾವುದು?
ಅರಳಿಕಟ್ಟೆ ಗದ್ಯ ಭಾಗದ ಆಕರ ಗ್ರಂಥ 'ಹಸುರು ಹೊನ್ನು'
5. ಬಿ.ಜಿ.ಎಲ್. ಸ್ವಾಮಿಯವರ ಪೂರ್ಣ ಹೆಸರೇನು?
**ಬಿ.ಜಿ.ಎಲ್. ಸ್ವಾಮಿ** ಅವರ ಪೂರ್ಣ ಹೆಸರು ಬೆಂಗಳೂರು ಗುಂಡಪ್ಪ ಲಕ್ಷ್ಮೀನಾರಾಯಣ ಸ್ವಾಮಿ.

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಶೇಷಪ್ಪನವರ ದೇಹಾರೋಗ್ಯದ ಸ್ಥಿತಿ ಹೇಗಿತ್ತು?

ಶೇಷಪ್ಪನವರ ವಯಸ್ಸು ಸಮಾರು 75–80 ಇರಬಹುದು. ಕೃಶವಾದ ದೇಹ, ಕುಳಿಬಿದ್ದ ಕಣ್ಣು, ದೃಷ್ಟಿಮಾಂದ್ಯ, ಕಿವಿಯಂತೂ ಎಷ್ಟೋ ವರ್ಷಗಳ ಹಿಂದೆಯೇ ತನ್ನ ಕಾರ್ಯದಿಂದ ರಿಟೈರ್ ಆಗಿಬಿಟ್ಟಿತ್ತು. ಕೈಯಲ್ಲಿ ಕೋಲು ಹಿಡಿಯದೆ ಒಂದು ಹೆಜ್ಜೆಯನ್ನೂ ಇಡುವಂತಿರಲಿಲ್ಲ. ನಿತ್ಯ ಭಿಕ್ಷೆಯಿಂದ ಜೀವನ ನಡೆಸುತ್ತಿದ್ದರು.

2. ಶೇಷಪ್ಪನವರು ತಮ್ಮ ಆಸೆ ನೆರವೇರಿದುದರಿಂದ ಕೃತಜ್ಞತೆಯನ್ನು ಹೇಗೆ ಸಲ್ಲಿಸಿದರು?

ಶೇಷಪ್ಪನವರು ಕೈಲಿ ಹಿಡಿದು ತಂದಿದ್ದ ತಾಮ್ರದ ಪಂಚಪಾತ್ರೆ, ಉದ್ದರಣೆ, ಒಂದು ಬಾಳೆಹಣ್ಣು, ಎರಡು ಸೇವಂತಿಗೆ ಹೂವು, ಒಂದು ಅನಂತವಸ್ತ್ರ, ಇವುಗಳನ್ನು ಲೇಖಕರ ಸೋದರತ್ತೆಯ ಕೈಲಿಟ್ಟು "ಇವುಗಳನ್ನು ಯಜಮಾನರಿಗೆ ತಲುಪಿಸಿಬಿಡಿ. ಕಾರ್ಯ ನನ್ನ ಉದ್ದೇಶಕ್ಕೆ ತಕ್ಕಂತೆ ನೆರವೇರಿತು. ನನ್ನ ಋಣ ತೀರಿತು. ಯಜಮಾನರ ನೆರವಿಲ್ಲದೆ ಹೋಗಿದ್ದಿದ್ದರೆ ನನ್ನ ಋಣದ ಗಂಟನ್ನು ಹೊತ್ತುಕೊಂಡೇ ಕಣ್ಮುಚ್ಚಬೇಕಾಗಿದ್ದಿತು. ಇನ್ನೊಂದು ಸಲ ಬಂದು ಯಜಮಾನರಿಗೆ ಸಾಷ್ಟಾಂಗ ಬೀಳುತ್ತೇನೆ. ದಯವಿಟ್ಟು ತಿಳಿಸಿಬಿಡಿ" ಎಂದು ಕೃತಜ್ಞತೆಯನ್ನು ಸಲ್ಲಿಸಿದರು.

3. ಶೇಷಪ್ಪನವರ ಆಸೆಯನ್ನು ಗಮನಿಸಿದ ಲೇಖಕರಿಗೆ ಬಾಲ್ಯದಲ್ಲಿ ಅನಿಸಿದ್ದೇನು?

ಲೇಖಕರ ಬಾಲ್ಯದ ಬುದ್ಧಿಗೆ "ಈ ಮುದುಕ ಯಾಚನೆಯಿಂದ ಜನರನ್ನು ತೊಂದರೆಗೀಡುಮಾಡಿ, ಮರ ನೆಟ್ಟು ಜಗುಲಿ ಕಟ್ಟಿಸದೆ ಹೋಗಿದ್ದರೆ ಯಾರು ಅಳುತ್ತಿದ್ದರು?" ಎನ್ನಿಸಿದ್ದೇನೋ ನಿಜ. ಕಾಲಕ್ರಮೇಣದಲ್ಲಿ ಶೇಷಪ್ಪನಂಥ ಮಹಾನುಭಾವರಿಗೆಲ್ಲ ಮನಸ್ಸಿನಲ್ಲಿಯೇ ಎಷ್ಟೋ ಸಲ ಮಣಿದಿದ್ದೇನೆ. ಕೃತಜ್ಞತೆ ಅರ್ಪಿಸಿದ್ದೇನೆ.

4. ಅಶ್ವತ್ಥಕಟ್ಟೆ ಜನರಿಗೆ ಹೇಗೆ ಉಪಯುಕ್ತವಾಗಿದೆ?

ಹಳ್ಳಿಯ ಸಾರ್ವಜನಿಕ ಸಮಾರಂಭಗಳು ಅಶ್ವತ್ಥ ಮರದಡಿಯಲ್ಲಿ ನಡೆಯುತ್ತವೆ. ಪಂಚಾಯಿತಿಗಳಿಗೆ ಅಶ್ವತ್ಥಮರ ಛಾವಣೆ, ಕಟ್ಟೆಯೇ ನೆಲಹಾಸು; ಮದುವೆ ಮುಂಜಿಗಳಿಗೆ ಪ್ರಶಸ್ತವಾದ, ಪವಿತ್ರವಾದ ಕಲ್ಯಾಣ ಮಂಟಪ; ಪ್ರವಾಸಿಗಳಿಗೂ ಯಾತ್ರಾರ್ಥಿಗಳಿಗೂ ಆದರವೀಯುವ ಸತ್ರ; ಮಕ್ಕಳ ಆಟ, ಓಟ, ಪಾಠಗಳಿಗೆ ಕಾಪು: ಹಿರಿಯರ ಗಾಳಿ ಸೇವನೆಗೂ ವಿಚಾರ ವಿನಿಮಯಕ್ಕೂ ಒಪ್ಪುವ ಆಶ್ರಯ. ಬೀದಿ ಮಾತಿಗೂ ಕಾಡು ಹರಟೆಗೂ ಕೀಟಲೆ ಕೋಟಲೆಗಳಿಗೂ ಮಾತೃಸ್ಥಾನವಾಗಿಯೂ ರೂಪುಗೊಂಡಿದೆ

5. ಲೇಖಕರು ಶೇಷಪ್ಪನವರಿಗೆ ಕೃತಜ್ಞತೆ ಅರ್ಪಿಸಿದ್ದು ಏಕೆ?

ತಮ್ಮ ಸ್ವಧರ್ಮ ದೃಷ್ಟಿಯಲ್ಲಿ ಸರಿಯೆಂದು ಪ್ರೇರಿತವಾದ ಯಾವುದೋ ಒಂದು ಉದ್ದೇಶವನ್ನು ಕಂಡುಕೊಂಡು, ಅದನ್ನು ತನ್ನ ಋಣ ತೀರಿಸುವ ಕರ್ತವ್ಯವೆಂದು ಬಗೆದು, ತದೇಕ ಚಿತ್ತತೆಯಿಂದ ಅದರ ಸಾಧನೆಯಲ್ಲಿ ತೊಡಗಿ, ಪೂರೈಸಿ, ಕೃತಕೃತ್ಯರಾದವರು ಮಹಾನುಭಾವರು ಎಂದು ನನ್ನ ತಿಳುವಳಿಕೆ. ಇಂಥವರ ಸತತವಾದ ನಿಷ್ಠೆಯಿಂದಲೇ ಬೀದಿಗೊಂದು, ಹಳ್ಳಿಗೊಂದು ಅಶ್ವತ್ಥಕಟ್ಟೆ ತಲೆಯೆತ್ತಿವೆ.

**ಇ) ಕೆಳಗಿನ ಪ್ರಶ್ನೆಗಳಿಗೆ ಏಳು–ಎಂಟು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಶೇಷಪ್ಪನವರ ವ್ಯಕ್ತಿತ್ವದ ವಿಶೇಷತೆಗಳೇನು?

ಲೇಖಕರ ಚಿಕ್ಕಂದಿನಲ್ಲಿ ಅವರ ಮನೆಗೊಬ್ಬ ವೃದ್ಧರು ಬರುತ್ತಿದ್ದರು. ವಯಸ್ಸು 75–80 ಇರಬಹುದು; ಕೃಶವಾದ ದೇಹ, ಕುಳಿಬಿದ್ದ ಕಣ್ಣು, ದೃಷ್ಟಿಮಾಂದ್ಯ, ಕಿವಿಯಂತೂ ಎಷ್ಟೋ ವರ್ಷಗಳ ಹಿಂದೆಯೇ ತನ್ನ ಕಾರ್ಯದಿಂದ ರಿಟೈರ್ ಆಗಿಬಿಟ್ಟಿತ್ತು. ಕೈಯಲ್ಲಿ ಕೋಲು ಹಿಡಿಯದೆ ಒಂದು ಹೆಜ್ಜೆಯನ್ನೂ ಇಡುವಂತಿರಲಿಲ್ಲ. ನಿತ್ಯ ಭಿಕ್ಷೆಯಿಂದ ಜೀವನ. ಇಳಿ ವಯಸ್ಸಿನಲ್ಲಿ ಇವರನ್ನು ನೋಡಿಕೊಳ್ಳುವವರಾರೂ ಇರಲಿಲ್ಲ. ಶೇಷಪ್ಪ ಎಂದೇನೋ ಹೆಸರು. ಈತನಿಗಿದ್ದದ್ದು ಒಂದೇ ಒಂದು ಆಸೆ, ಉತ್ಕಟವಾದ ಆಸೆ. ಕಣ್ಣುಮುಚ್ಚುವುದರೊಳಗಾಗಿ ನೆರವೇರಿಸಬೇಕೆಂಬ ಆಸೆ. ಅಶ್ವತ್ಥ ಪ್ರತಿಷ್ಠೆ, ಪ್ರತಿಷ್ಠೆಯಾದ ಮರಕ್ಕೊಂದು ಕಟ್ಟೆ ಕಟ್ಟುವುದು. ಈ ಎರಡು ಕರ್ತವ್ಯಗಳ ಹೊರೆ ಅವರ ಹೆಗಲ ಮೇಲೆ ಭಾರವಾಗಿ ಹೇರಿಕೊಂಡಿದ್ದು ಬಹಳ ತೊಂದರೆ ಕೊಡುತ್ತಿದ್ದವಂತೆ.. ಕೊನೆಗೊಂದು ದಿನ ವಿಘ್ನಗಳು ನಿವಾರಣೆಯಾಗಿ ಕಾರ್ಯ ಕೈಗೂಡಿತು.

2. ಶೇಷಪ್ಪನವರಿಗೂ ಲೇಖಕರ ಸೋದರತ್ತೆಗೂ ಯಾವ ರೀತಿಯ ಸಂಭಾಷಣೆ ನಡೆಯಿತು?

ಶೇಷಪ್ಪನವರು ಕೈಲಿ ಹಿಡಿದು ತಂದಿದ್ದ ತಾಮ್ರದ ಪಂಚಪಾತ್ರೆ, ಉದ್ದರಣೆ, ಒಂದು ಬಾಳೆಹಣ್ಣು, ಎರಡು ಸೇವಂತಿಗೆ ಹೂ, ಒಂದು 'ಅನಂತ ವಸ್ತ್ರ' ಇವುಗಳನ್ನು ನನ್ನ ಸೋದರತ್ತೆಯವರ ಕೈಲಿಟ್ಟು "ಇವುಗಳನ್ನು ಯಜಮಾನರಿಗೆ ತಲುಪಿಸಿಬಿಡಿ. ಕಾರ್ಯ ನನ್ನ ಉದ್ದೇಶಕ್ಕೆ ತಕ್ಕಂತೆ ನೆರವೇರಿತು. ನನ್ನ ಋಣ ತೀರಿತು. ಯಜಮಾನರ ನೆರವಿಲ್ಲದೆ ಹೋಗಿದ್ದಿದ್ದರೆ ನನ್ನ ಋಣದ ಗಂಟನ್ನು ಹೊತ್ತುಕೊಂಡೇ ಕಣ್ಮುಚ್ಚಬೇಕಾಗಿದ್ದಿತು. ಈಗ ನನಗೆ ಯಾವ ಭಯವೂ ಇಲ್ಲ. ನಿಶ್ಚಿಂತೆಯಿಂದ ಮುಂದನ್ನು ಎದುರು ನೋಡುತ್ತಿದ್ದೇನೆ. ಇನ್ನೊಂದು ಸಲ ಬಂದು ಯಜಮಾನರಿಗೆ ಸಾಷ್ಟಾಂಗ ಬೀಳುತ್ತೇನೆ. ದಯವಿಟ್ಟು ತಿಳಿಸಿಬಿಡಿ" ಎಂದು ಹೊರಡಲು ಉದ್ಯುಕ್ತರಾದರು. ಸೋದರತ್ತೆ "ಒಂದಿಷ್ಟು ಹಾಲು ಕುಡಿದು ಹೋಗಬೇಕು" ಎಂದರು. "ಇಲ್ಲಮ್ಮ, ಇವತ್ತು ನಾಲ್ಕು ಜನಕ್ಕೆ ಭೋಜನ ಬಡಿಸಬೇಕು. ಅವರದಾದ ಬಳಿಕವೇ ನನ್ನದು. ನಾಲ್ಕೈದು ಮನೆಗಳಿಗೆ ಹೋಗಿ ಭಿಕ್ಷೆ ತೆಗೆದುಕೊಳ್ಳಬೇಕು. ಆಮೇಲೆ ಅಡುಗೆ ಮಾಡಬೇಕು. ಅನ್ನಶಾಂತಿಗೆ ಬರುವವರನ್ನು ನಾನು ಕಾಯಿಸಬಾರದಮ್ಮ." "ಅಕ್ಕಿ ಬೇಳೆ ಸಾಮಗ್ರಿಗಳನ್ನು ನಮ್ಮ ಮನೆಯಿಂದಲೇ ಕೊಡುತ್ತೇನೆ." "ಬೇಡಮ್ಮ, ನಾಲ್ಕು ಬಾಗಿಲಲ್ಲಿ ನಿಂತು ಯಾಚಿಸುವುದು ನನಗೆ ರಕ್ತಗತವಾಗಿಬಿಟ್ಟಿದೆ. ಇಂದೇಕೆ ಅದನ್ನು ತಪ್ಪಿಸಲಿ?" ಎಂದು ಹೊರಟುಹೋದರು.

**ಈ) ಸಂದರ್ಭದೊಡನೆ ಸ್ವಾರಸ್ಯವನ್ನು ವಿವರಿಸಿರಿ.**

1. "ಇವುಗಳನ್ನು ಯಜಮಾನರಿಗೆ ತಲುಪಿಸಿಬಿಡಿ."

ಈ ವಾಕ್ಯವನ್ನು ಬಿ.ಜಿ.ಎಲ್. ಸ್ವಾಮಿ ಅವರು ಬರೆದಿರುವ 'ಹಸುರು ಹೊನ್ನು' ಎಂಬ ಕೃತಿಯಿಂದ ಆಯ್ದ 'ಅರಳಿಕಟ್ಟೆ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಶೇಷಪ್ಪನವರು ಲೇಖಕರ ಸೋದರತ್ತೆಗೆ ಹೇಳಿದ್ದಾರೆ. ಅಶ್ವತ್ಥ ಪ್ರತಿಷ್ಠೆ ಕಾರ್ಯ ಮುಗಿದ ನಂತರ ತಾಮ್ರದ ಪಂಚಪಾತ್ರೆ, ಉದ್ದರಣೆ, ಒಂದು ಬಾಳೆಹಣ್ಣು, ಎರಡು ಸೇವಂತಿಗೆ ಹೂ, ಒಂದು 'ಅನಂತ ವಸ್ತ್ರ' ಇವುಗಳನ್ನು ಲೇಖಕರ ಸೋದರತ್ತೆಯವರ ಕೈಲಿಟ್ಟು ಈ ಮೇಲಿನ ಮಾತನ್ನು ಹೇಳಿದ್ದಾರೆ.

2. "ಒಂದಿಷ್ಟು ಹಾಲು ಕುಡಿದು ಹೋಗಬೇಕು."

ಈ ವಾಕ್ಯವನ್ನು ಬಿ.ಜಿ.ಎಲ್. ಸ್ವಾಮಿ ಅವರು ಬರೆದಿರುವ 'ಹಸುರು ಹೊನ್ನು' ಎಂಬ ಕೃತಿಯಿಂದ ಆಯ್ದ 'ಅರಳಿಕಟ್ಟೆ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಲೇಖಕರ ಸೋದರತ್ತೆ ಶೇಷಪ್ಪನವರಿಗೆ ಹೇಳಿದ್ದಾರೆ. ಕಾರ್ಯ ನನ್ನ ಉದ್ದೇಶಕ್ಕೆ ತಕ್ಕಂತೆ ನೆರವೇರಿತು. ನನ್ನ ಋಣ ತೀರಿತು. ಯಜಮಾನರ ನೆರವಿಲ್ಲದೆ ಹೋಗಿದ್ದಿದ್ದರೆ ನನ್ನ ಋಣದ ಗಂಟನ್ನು ಹೊತ್ತುಕೊಂಡೇ ಕಣ್ಮುಚ್ಚಬೇಕಾಗಿದ್ದಿತು. ಈಗ ನನಗೆ ಯಾವ ಭಯವೂ ಇಲ್ಲ. ನಿಶ್ಚಿಂತೆಯಿಂದ ಮುಂದನ್ನು ಎದುರು ನೋಡುತ್ತಿದ್ದೇನೆ. ಇನ್ನೊಂದು ಸಲ ಬಂದು ಯಜಮಾನರಿಗೆ ಸಾಷ್ಟಾಂಗ ಬೀಳುತ್ತೇನೆ. ದಯವಿಟ್ಟು ತಿಳಿಸಿಬಿಡಿ" ಎಂದು ಹೊರಡಲು ಉದ್ಯುಕ್ತರಾದಾಗ ಈ ಮೇಲಿನ ಮಾತು ಬಂದಿದೆ.

3. "ಅಕ್ಕಿ ಬೇಳೆ ಸಾಮಗ್ರಿಗಳನ್ನು ನಮ್ಮ ಮನೆಯಿಂದಲೇ ಕೊಡುತ್ತೇನೆ."

ಈ ವಾಕ್ಯವನ್ನು ಬಿ.ಜಿ.ಎಲ್. ಸ್ವಾಮಿ ಅವರು ಬರೆದಿರುವ 'ಹಸುರು ಹೊನ್ನು' ಎಂಬ ಕೃತಿಯಿಂದ ಆಯ್ದ 'ಅರಳಿಕಟ್ಟೆ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಲೇಖಕರ ಸೋದರತ್ತೆ ಶೇಷಪ್ಪನವರಿಗೆ ಹೇಳಿದ್ದಾರೆ. "ಇಲ್ಲಮ್ಮ, ಇವತ್ತು ನಾಲ್ಕು ಜನಕ್ಕೆ ಭೋಜನ ಬಡಿಸಬೇಕು. ಅವರದಾದ ಬಳಿಕವೇ ನನ್ನದು. ನಾಲ್ಕೈದು ಮನೆಗಳಿಗೆ ಹೋಗಿ ಭಿಕ್ಷೆ ತೆಗೆದುಕೊಳ್ಳಬೇಕು. ಆಮೇಲೆ ಅಡುಗೆ ಮಾಡಬೇಕು. ಅನ್ನಶಾಂತಿಗೆ ಬರುವವರನ್ನು ನಾನು ಕಾಯಿಸಬಾರದಮ್ಮ." ಎಂದು ಹೇಳುವಾಗ ಈ ಮೇಲಿನ ಮಾತು ಬಂದಿದೆ.

ಶೇಷಪ್ಪನವರು ಲೇಖಕರ ಮನೆಗೆ ಬಂದಾಗ ಇವರಿಬ್ಬರ ಸಂಭಾಷಣೆ ಸಂದರ್ಭದಲ್ಲಿ ಈ ಮೇಲಿನ ಮಾತು ವ್ಯಕ್ತವಾಗಿದೆ.

4. "ಅಶ್ವತ್ಥ ಬರಿಯ ಮರವಲ್ಲ."

ಈ ವಾಕ್ಯವನ್ನು ಬಿ.ಜಿ.ಎಲ್. ಸ್ವಾಮಿ ಅವರು ಬರೆದಿರುವ 'ಹಸುರು ಹೊನ್ನು' ಎಂಬ ಕೃತಿಯಿಂದ ಆಯ್ದ 'ಅರಳಿಕಟ್ಟೆ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಲೇಖಕರು ಹೇಳಿದ್ದಾರೆ. ಮಾನವನ ಒಡನಾಡಿಯಾಗಿ ಅಶ್ವತ್ಥಮರ ಅನಾದಿಕಾಲದಿಂದಲೂ ಉಪಯೋಗದಲ್ಲಿದೆ. ಬಹು ಉಪಯುಕ್ತವಾದ ಅರಳಿಮರವನ್ನು ನೆಟ್ಟು ಬದುಕಿನ ಸಾರ್ಥಕತೆಯನ್ನು ಕಂಡುಕೊಂಡ ಹೃದಯ ಶ್ರೀಮಂತಿಕೆ ಮೆರೆದ ಕಡುಬಡತನದ ಶೇಷಪ್ಪನ ಯಶೋಗಾಥೆನ್ನು ಸ್ಮರಿಸಿದ್ದಾರೆ.

**3. ಭಾಷಾಭ್ಯಾಸ :**

**ಅ) ಕೆಳಗಿನ ಪದಗಳಿಗೆ ತತ್ಸಮ-ತದ್ಭವ ರೂಪಗಳನ್ನು ಬರೆಯಿರಿ.**

ನಿತ್ಯ-ನಿಚ್ಚ, ಕಾರ್ಯ- ಕಜ್ಜ, ಸಂಸ್ಥಾ-ಸಂತೆ, ಸ್ಥಾನ-ತಾಣ, ರಕ್ತ-ರಕುತ, ಭಿಕ್ಷೆ- ಬಿಕ್ಕೆ.

**ಆ) ಕೆಳಗಿನ ಪದಗಳಿಗೆ ವಿರುದ್ಧಾರ್ಥ ಬರೆಯಿರಿ.**

ಇಳಿx ಹತ್ತು, ಆಸೆx ನಿರಾಸೆ, ಕೃತಜ್ಞತೆ x ಕೃತಘ್ನತೆ, ಭಾರ x ಹಗುರ, ಭಯx ನಿರ್ಭಯ, ನಿಶ್ಚಿಂತೆ x ಚಿಂತೆ.

**ಇ) ಕೆಳಗೆ ನೀಡಿರುವ ಪದಗಳನ್ನು ಮಾದರಿಯಂತೆ ವಿಭಿನ್ನಾರ್ಥಗಳಲ್ಲಿ ವಾಕ್ಯಗಳನ್ನು ರಚಿಸಿರಿ.**

**ಮಾದರಿ :** ತಂದೆ – * ನಾನು ಈ ಪುಸ್ತಕವನ್ನು ಅಂಗಡಿಯಿಂದ ತಂದೆ.

* ನನ್ನ ತಂದೆ ಬೆಂಗಳೂರಿಗೆ ಹೋಗಿದ್ದಾರೆ.
* ತೊರೆ: ನನ್ನನ್ನು ತಂದೆ ತಾಯಿಗಳು ತೊರೆದಿದ್ದಾರೆ.
* ತೊರೆ: ಮಳೆ ಬಂದಾಗ ಕೆರೆತೊರೆಗಳು ತುಂಬುತ್ತವೆ.
* ಮಡಿ : ನಾವು ಯಾವಾಗಲೂ ಮಡಿಯಾಗಿರಬೇಕು.
* ಮಡಿ: ನಮ್ಮ ಊರಿನಲ್ಲಿ ಒಂದು ಅಜ್ಜ ಮಡಿದು ಹೋಯಿತು.
* ಕಳೆ: ನನ್ನ ಪೆನ್ಸಿಲ್ ಕಳೆದು ಹೋಯಿತು.
* ಕಳೆ : ನಮ್ಮ ತೋಟದ ತುಂಬಾ ಕಳೆ ಬೆಳೆದಿದೆ.
* ಮುಗಿ: ನಾವು ಮನೆಗೆ ತಂದ ತರಕಾರಿ ಮುಗಿದು ಹೋಯಿತು.
* ಮುಗಿ : ನಾವು ದೇವರಿಗೆ ಕೈ ಮುಗಿಯುತ್ತೇವೆ.

ಈ) ಕೆಳಗಿನ ಪದಗಳನ್ನು ಬಿಡಿಸಿ, ಸಂಧಿ ಹೆಸರಿಸಿ.

1. ಮನೆಗೊಬ್ಬ = ಮನೆಗೆ + ಒಬ್ಬ – ಲೋಪಸಂಧಿ
2. ಕಿವಿಯಂತೂ = ಕಿವಿ + ಅಂತೂ– ಆಗಮಸಂಧಿ
3. ಭಿಕ್ಷೆಯಿಂದ = ಭಿಕ್ಷೆ + ಇಂದ – ಆಗಮಸಂಧಿ
4. ಮರಕ್ಕೊಂದು = ಮರಕ್ಕೆ + ಒಂದು –ಲೋಪಸಂಧಿ
5. ಇದೇಕೆ = ಇದು + ಏಕೆ –ಲೋಪಸಂಧಿ

**4. ಸೈದ್ಧಾಂತಿಕ ವ್ಯಾಕರಣ :**

**ದೇಶೀಯ, ಅನ್ಯದೇಶೀಯ ಪದಗಳು :**

1. ಮೋಟಾರು – ಇಂಗ್ಲಿಷ್ ಭಾಷೆಯ ಶಬ್ದ
2. ಜಬರ್ದಸ್ತ್ – ಹಿಂದಿ ಭಾಷೆಯ ಶಬ್ದ
3. ಜೀವನ, ಮುಖ್ಯ – ಸಂಸ್ಕೃತ ಭಾಷೆಯ ಶಬ್ದಗಳು
4. ಓಡಾಡು, ಗುರಿ, ನಾವು, ತಿಳಿಯಬೇಕು – ಕನ್ನಡ ಭಾಷೆಯ ಶಬ್ದಗಳು.

**1. ದೇಶ್ಯ ಶಬ್ದಗಳು :**

ಕನ್ನಡ ಭಾಷೆಯ ಮೂಲ ಶಬ್ದಗಳನ್ನು ಅಥವಾ ಅಚ್ಚಗನ್ನಡದ ಶಬ್ದಗಳನ್ನು 'ದೇಶ್ಯ ಶಬ್ದಗಳು' ಎನ್ನುತ್ತೇವೆ.
**ಉದಾ :** ಮನೆ, ಹೊಲ, ಮರ, ಗದ್ದೆ, ಆಳು, ಗಿಡ, ತೆಂಕಣ, ಬಡಗಣ, ಮೂಡಣ, ನೇಸರು, ಕಲ್ಲು, ಕಡಿಮೆ, ಹೆಚ್ಚು, ನೀರು, ತಿನ್ನು, ಸಣ್ಣ, ದೊಡ್ಡ, ಸಾರು, ಬೆಣ್ಣೆ, ಮಜ್ಜಿಗೆ, ಹಾಲು, ಮೊಸರು, ತುಪ್ಪ, ಬಾಯಿ, ಕಿವಿ, ಮೂಗು, ಕಾಡು – ಇತ್ಯಾದಿಗಳು

**2. ಅನ್ಯದೇಶ್ಯ ಶಬ್ದಗಳು :**

ಮರಾಠಿ, ಅರಬ್ಬಿ, ಫಾರ್ಸಿ, ಪೋರ್ಚುಗೀಸ್, ಸಂಸ್ಕೃತ, ಇಂಗ್ಲಿಷ್ ಮುಂತಾದ ಭಾಷೆಗಳಿಂದ ಕನ್ನಡಕ್ಕೆ ಬಂದಿರುವ ಶಬ್ದಗಳನ್ನು 'ಅನ್ಯದೇಶ್ಯ ಶಬ್ದಗಳು' ಎಂದು ಕರೆಯುತ್ತಾರೆ.

**ಉದಾ :**

**ಅ) ಸಂಸ್ಕೃತ ಭಾಷೆಯಿಂದ ಬಂದ ಶಬ್ದಗಳು :**

ಭೂಮಿ, ಪೃಥ್ವಿ, ರಾತ್ರಿ, ದಿವಸ, ರಾಮ, ಲಕ್ಷ್ಮಣ, ಪುರಾಣ, ಶಿರ, ಹಸ್ತ, ಪಾದ, ನೇತ್ರ, ಸ್ವರ್ಗ, ಔಷಧ, ಶತ್ರು, ಮಿತ್ರ, ರಾಶಿ, ಅರಣ್ಯ, ಯುದ್ಧ, ಲೇಖನ, ಗ್ರಂಥ, ವಾಕ್ಯ – ಇತ್ಯಾದಿಗಳು.

**ಆ) ಹಿಂದಿ ಭಾಷೆಯಿಂದ ಬಂದ ಶಬ್ದಗಳು :**

ಅರ್ಜಿ, ಕಛೇರಿ, ಕಾರ್ಖಾನೆ, ಚುನಾವಣೆ, ಕಾನೂನು, ಗುಲಾಮ, ರಸ್ತೆ, ಕಾಗದ, ಸಲಾಮು, ದರ್ಬಾರು, ಬಂದೂಕ, ಮಹಲ್, ದವಾಖಾನೆ, ಅಸಲಿ, ನಕಲಿ, ಕುರ್ಚಿ – ಇತ್ಯಾದಿಗಳು

**ಇ) ಇಂಗ್ಲೀಷ್ ಭಾಷೆಯಿಂದ ಬಂದ ಶಬ್ದಗಳು :**

ರೋಡ್, ರೈಲ್, ಬ್ಯಾಂಕ್, ಲಾಯರ್, ಪೋಲೀಸ್, ಕಾಲೇಜ್, ಸ್ಕೂಲ್, ಹೋಟೆಲ್, ಸ್ಕೂಟರ್, ಪೆಟ್ರೋಲ್, ಬುಕ್, ನೋಟ್ಸ್, ಪೇಜ್, ಕಾಫಿ, ಟೀ, ಎಲೆಕ್ಟ್ರಿಕ್, ಸರ್ಕಲ್ – ಇತ್ಯಾದಿಗಳು

**ಈ) ಪೋರ್ಚುಗೀಸ್ ಭಾಷೆಯಿಂದ ಬಂದ ಶಬ್ದಗಳು :**

ಅಲಮಾರು, ಸಾಬೂನು, ಪಾದ್ರಿ, ಮೇಜು – ಇತ್ಯಾದಿಗಳು.

# 3. ಜೇನು ಕುರುಬರ ತಾಯಿಯೂ ಕಾಡು ಆನೆಯ ಮಗನೂ – ಅಬ್ದುಲ್ ರಶೀದ್

**ಕೃತಿಕಾರರ ಪರಿಚಯ :**

- **ಅಬ್ದುಲ್ ರಶೀದ್** ಅವರು 1965 ರಲ್ಲಿ ಕೊಡಗಿನ ಸುಂಟಿಕೊಪ್ಪದಲ್ಲಿ ಜನಿಸಿದರು.
- ಇವರು ಹಾಲು ಕುಡಿದ ಹುಡುಗ, ಪ್ರಾಣಪಕ್ಷಿ, ಈ ತನಕದ ಕಥೆಗಳು, ನನ್ನ ಪಾಡಿಗೆ ನಾನು, ಮಾತಿಗೂ ಆಚೆ, ಅಲೆಮಾರಿಯ ದಿನಚರಿ, ಮೈಸೂರ್ ಪೋಸ್ಟ್, ಹೂವಿನಕೊಲ್ಲಿ ಮುಂತಾದ ಕೃತಿಗಳನ್ನು ರಚಿಸಿದ್ದಾರೆ.
- ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿಯ ಸುವರ್ಣ ಮಹೋತ್ಸವದ ಯುವ ಲೇಖಕ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಲಂಕೇಶ್ ಪ್ರಶಸ್ತಿ ದೊರೆತಿವೆ.
- ಪ್ರಸ್ತುತ ಪಠ್ಯ ಭಾಗವನ್ನು ಇವರ **'ಕಾಲುಚಕ್ರ'** ಕೃತಿಯಿಂದ ಆರಿಸಿದೆ.

**ಅಭ್ಯಾಸ**

**I. ಪದಗಳ ಅರ್ಥ :**

**ಉಮ್ಮಳಿಸು** – ದುಃಖ ಹೆಚ್ಚಾಗು; ಚಿಮ್ಮು.
**ಗಡಸು** – ಒರಟು
**ಕೊಂಚ** – ಸ್ವಲ್ಪ; ತುಸು; ಅಲ್ಪ.
**ತಾಯ್ತನ** – ತಾಯಿಯ ಪ್ರೀತಿ: ಮಾತೃತ್ವ.
**ತುರುಬು** – ತಲೆ ಕೂದಲಿನ ಗಂಟು; ಮುಡಿ.
**ಪುತ್ರ** – ಮಗ; ಸುತ; ತನಯ; ಕುಮಾರ.
**ಮರುಗಿಸು** – ಕನಿಕರಪಡು; ಮನಸ್ಸು ಕರಗು.
**ವ್ರಣ** – ಹುಣ್ಣು; ಗಾಯ.
**ಸೆಳಕು** – ಎಳೆ; ಜಗ್ಗು.
**ಹಂಡೆ** – ನೀರು ತುಂಬುವ ದೊಡ್ಡ ಪಾತ್ರೆ.
**ಹಾಡಿಗೆ** – ಹಳ್ಳಿಗೆ; ಗ್ರಾಮಕ್ಕೆ.
**ಒಡಲು** – ದೇಹ; ಶರೀರ.
**ಕಕ್ಕ** – ಆನೆಯ ಲದ್ದಿ; ಕಕ್ಕಸು; ಪಾಯಖಾನೆ.
**ಘೀಳಿಡು** – ಆನೆಯ ಕೂಗು
**ತೀರಿಹೋಗು** –ಸಾಯುವುದು; ಮರಣ ಹೊಂದು.
**ಪಟ್ಟದಾನೆ** –ರಾಜನ ಸಿಂಹಾಸನ ಹೊರುವ ಆನೆ.
**ಪ್ಲಾಂಟರ್** – ತೋಟದ ಒಡೆಯ
**ಮಾವುತ** – ಆನೆ ನಡೆಸುವವ; ಆನೆ ಪಳಗಿಸುವವ.
**ಸುಪರ್ದಿ** – ಜವಾಬ್ದಾರಿ
**ಸೋಂಕು** – ಅಂಟು ರೋಗ
**ಹರಕೆ** – ಬೇಡಿಕೊಳ್ಳುವಿಕೆ; ಮುಡುಪು; ಸಂಕಲ್ಪ.
**ಹುಡಿ** – ಮಣ್ಣು

**2. ಪ್ರಶ್ನೆಗಳು :**

**ಅ) ಬಿಟ್ಟ ಸ್ಥಳವನ್ನು ನೀಡಿರುವ ನಾಲ್ಕು ಆಯ್ಕೆಯ ಉತ್ತರಗಳಿಂದ ಸರಿಯಾದುದನ್ನು ಆಯ್ದು ತುಂಬಿರಿ.**

1. ಜೇನುಕುರುಬರ ತಾಯಿ ಗೀತಾ ಸಾಕಿದ ಆನೆ ಮಗನ ಹೆಸರು ________
ಅ) ಲಂಬೋದರ ಆ) ರಾಜೇಂದ್ರ ಇ) ಶಿವ ಈ) ಹಾಡಿ
2. ಜೇನುಕುರುಬರ ಗೀತಾ ತನ್ನ ಮಕ್ಕಳನ್ನು ಪ್ರೀತಿಯಿಂದ ______ ಎಂದು ಬೈಯುತ್ತಿದ್ದಳು.
ಅ) ಜಾಣಮಕ್ಕಳು ಆ) ಹಾಳಾದಮಕ್ಕಳು ಇ) ಮುದ್ದಿನಮಕ್ಕಳು ಈ) ಕಳ್ಳಮಕ್ಕಳು
3. ಗೀತಾಳ ಗಂಡನು ಮಾಡುತ್ತಿದ್ದ ಕಸುಬು ________
ಅ) ಮಾವುತ ಆ) ಕೂಲಿ ಇ) ರೈತ ಈ) ದನಗಾಯಿ
4. ಗೀತಾ ಮತ್ತು ಆಕೆಯ ಗಂಡ ಸಾಕುತ್ತಿದ್ದ ಮೊದಲ ಆನೆಯ ಹೆಸರು ________
ಅ) ಲಂಬೋದರ ಆ) ರಾಜೇಂದ್ರ ಇ) ಶಿವ ಈ) ಶಂಕರ
5. ಜೇನುಕುರುಬರ ದೇವರ ಹೆಸರು ________
ಅ) ಮಾರಮ್ಮ ಆ) ಸೀತಾಳಮ್ಮ ಇ) ಅಮ್ಮಾಳಮ್ಮ ಈ) ದೇವೀರಮ್ಮ

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಜೇನು ಕುರುಬರ ಗೀತಾ ಸಾಕುತ್ತಿದ್ದ ಗಂಡು ಆನೆಯ ತಾಯಿ ತೀರಿದ್ದು ಏಕೆ?
ಜೇನು ಕುರುಬರ ಗೀತಾ ಸಾಕುತ್ತಿದ್ದ ಗಂಡು ಆನೆಯ ತಾಯಿ ಮನುಷ್ಯರ ಗುಂಡೇಟಿನಿಂದ ತೀರಿಹೋಯಿತು.
2. ಜೇನು ಕುರುಬರ ತಾಯಿ ಆನೆಗೆ ಬೈದಾಗ ಯಾವ ರೀತಿ ಮರುಗುತ್ತಿದ್ದಳು?
ಜೇನು ಕುರುಬರ ತಾಯಿ ಆನೆಗೆ ಬೈದಾಗ "ಅಯ್ಯೋ ನಿನ್ನ ಬೈದೆನಾ ಕೂಸೇ, ರಾಜಾ" ಅಂತ ಮಮ್ಮಲ ಮರುಗುತ್ತಾಳೆ.
3. ಗೀತಾ ಮರಿ ಆನೆಗೆ ಯಾವ ರೀತಿ ಗದರಿ ಬುದ್ಧಿ ಹೇಳುತ್ತಿದ್ದಳು?
"ನಾನು ನಿನ್ನ ಅಮ್ಮ, ನೀನು ನನ್ನ ಮಾತು ಕೇಳೋಕು ಹಠ ಮಾಡಿದರೆ ಸೌದೆ ಸೋಟನಿಂದ ಬಾರಿಸಿಯೇ ಬಿಡುವೆ" ಎಂದು ಗದರಿ ಬುದ್ಧಿ ಹೇಳುತ್ತಿದ್ದಳು.
4. ಆನೆ ಕಣ್ಣಲ್ಲಿ ನೀರು ಬರುತ್ತಿರುವುದಕ್ಕೆ ಗೀತಾ ನೀಡಿದ ಪ್ರತಿಕ್ರಿಯೆ ಏನು?
"ಸೋಂಕೂ ಅಲ್ಲ, ಗೀಂಕೂ ಅಲ್ಲ ಅದಕ್ಕೆ ಅದರ ತಾಯಿಯ ನೆನಪು ಆಗಿರಬೇಕು ಸಾಹೇಬರೇ" ಎಂದು ಗೀತಾ ಪ್ರತಿಕ್ರೀಯೆ ನೀಡಿದಳು.

5. ಜೇನು ಕುರುಬರ ಗೀತಾಳ ಮಗನೊಬ್ಬ ಸಾಹುಕಾರರ ಅಂಗಡಿಗೆ ಏಕೆ ಹೋಗುತ್ತಿದ್ದನು?
ಗೀತಾಳ ಮಗ ಮೊಬೈಲಿನ ಬ್ಯಾಟರಿ ಚಾರ್ಜ್ ಮಾಡಿಸಿಕೊಂಡು ಬರಲು ಕರೆಂಟಿರುವ ಸಾಹುಕಾರರೊಬ್ಬರ ಅಂಗಡಿಗೆ ಹೋಗುತ್ತಿದ್ದನು.
6. ಆನೆ ಮರಿಗೆ 'ಶಿವ' ಎಂದು ಹೆಸರಿಟ್ಟವರು ಯಾರು?
ಆನೆ ಮರಿಗೆ 'ಶಿವ' ಅಂತ ಹೆಸರಿಟ್ಟವರು ಫಾರೆಸ್ಟಿನ ರೇಂಜರು ಸಾಹೇಬರು.
7. ಆನೆ ಶಿವನ ಬಗ್ಗೆ ಗೀತಾ ಯಾವ ಆಸೆ ಇಟ್ಟುಕೊಂಡಿದ್ದಾಳೆ?
"ಆನೆ ಶಿವ ಬದುಕಿ ದೊಡ್ಡ ಪಟ್ಟದಾನೆಯಾದರೆ ಸಾಕು" ಎಂಬ ಆಸೆ ಇಟ್ಟುಕೊಂಡಿದ್ದಳು.

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**
1. ಗೀತಾ ಅಮ್ಮಾಳಮ್ಮನಲ್ಲಿ ಆನೆ ಶಿವನ ಬಗ್ಗೆ ಏನೆಂದು ಬೇಡಿಕೊಂಡಿದ್ದಳು?
ಆನೆ ಶಿವನಿಗಾಗಿ ಗೀತಾ, ಜೇನುಕುರುಬರ ದೇವರು ಅಮ್ಮಾಳಮ್ಮನ ಬಳಿ ಹರಕೆ ಹಾಕಿಕೊಂಡಿರುವ ಗುಟ್ಟು. ಇಲ್ಲೇ ಕಾವೇರಿ ನದಿಯ ತೀರದಲ್ಲಿ ಕಾಡಿನೊಳಗಡೆ ಅಮ್ಮಾಳಮ್ಮ ದೇವತೆ ಇರುವಳು. ಅವಳು ಒಳ್ಳೆಯವರಿಗೆ ಒಳ್ಳೆಯ ದೇವರು. ಕೆಟ್ಟವರಿಗೆ ತೀರಾ ಕೆಟ್ಟವಳು. ಅವಳ ಬಳಿ ಇವಳು ಒಬ್ಬಳೇ ಹೋಗಿ ಈ ಆನೆಮಗನನ್ನು ಬದುಕಿಸಿ ದೊಡ್ಡವನನ್ನಾಗಿ ಮಾಡಲು ಬಿಡು. ದೊಡ್ಡದೊಂದು ಹರಕೆ ತೀರಿಸುವೆನು ಎಂದು ಬೇಡಿಕೊಂಡಿದ್ದಳು.
2. ಆನೆ ಲಂಬೋದರ ತೀರಿಕೊಂಡದ್ದು ಹೇಗೆ?
ಆನೆ ಲಂಬೋದರ ಕಾಡೊಳಗಿದ್ದ ಒಂದು ದೊಡ್ಡ ರೌಡಿ ಆನೆಯಾಗಿತ್ತು. ಪ್ಲಾಂಟರನೊಬ್ಬ ಅದರ ಒಡಲೊಳಕ್ಕೆ ಹಲವು ಕಾಡುತೂಸುಗಳನ್ನು ತೂರಿಸಿಬಿಟ್ಟಿದ್ದ. ಆಮೇಲೆ ಅದನ್ನು ಹಿಡಿದು ಪಳಗಿಸಿ ಇವರಿಬ್ಬರ ಸುಪರ್ದಿಗೆ ವಹಿಸಿದ್ದರು. ಸಾಯುವವರೆಗೆ ಹೊಟ್ಟೆಯೊಳಗಿದ್ದ ಕಾಡುತೂಸುಗಳಿಂದಾಗಿ ನರಳುತ್ತಾ ಬದುಕಿದ್ದ ಲಂಬೋದರ ಒಂದು ದಿನ ತಾನೂ ವ್ರಣದಿಂದಾಗಿ ತೀರಿಹೋಗಿತ್ತು.
3. ಆನೆ ಲಂಬೋದರ ತೀರಿದಾಗ ಗೀತಾ ಯಾವ ರೀತಿ ದುಃಖಿಸಿದಳು?
ಆನೆ ಲಂಬೋದರ ತೀರಿಹೋದಾಗ ಗೀತಾ ತಲೆಯ ಮೇಲೆ ಮಣ್ಣೆರಚಿ ಹುಚ್ಚಿಯಂತೆ ಅತ್ತಿದ್ದಳು. "ದೇವರೇ, ಈ ಕೆಟ್ಟ ಮನುಷ್ಯರಿಂದ ಆನೆಗಳನ್ನೂ ಕಾಡು ಕುರುಬರನ್ನೂ ಕಾಪಾಡು" ಎಂದು ಅಲ್ಲಿ ನೆರೆದವರಿಗೆಲ್ಲ ಹಿಡಿ ಹಿಡಿ ಶಾಪ ಹಾಕಿದ್ದಳು. "ನೀವು ಚೆನ್ನಾಗಿ ನೋಡಿಕೊಂಡಿಲ್ಲ, ಅದಕ್ಕಾಗಿ ಲಂಬೋದರ ಸತ್ತುಹೋದ" ಅಂತ ಯಾರೋ ಬೈದಿದ್ದರಂತೆ. ಅದಕ್ಕಾಗಿ ಅವಳಿಗೆ ಅವತ್ತು ದುಃಖ ಇನ್ನೂ ಉಮ್ಮಳಿಸಿತ್ತು.

**ಈ) ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**
1. ಜೇನು ಕುರುಬರ ತಾಯಿ ಆನೆ ಮಗನನ್ನು ಹೇಗೆ ಸಾಕುತ್ತಿದ್ದಳು?
ಜೇನು ಕುರುಬರ ಗೀತಾ ಈ ಆನೆ ಮಗನನ್ನು ಸಾಕುತ್ತಿದ್ದಾಳೆ. ಆಕೆ ತನ್ನ ಈ ತಾಯ್ತನವನ್ನು ಎಷ್ಟು ಗಂಭೀರವೂ ಸಹಜವಾಗಿಯೂ ತೆಗೆದುಕೊಂಡಿದ್ದಾಳೆಂದರೆ ಆಕೆಯ ಕಣ್ಣಿಗೆ ರಾತ್ರಿಯಿಡೀ ನಿದ್ದೆ ಹತ್ತುವುದಿಲ್ಲ. ಆನೆ ಮಗನಿಗೆ ಹಸುವಿನ ಹಾಲು ಕಾಯಿಸಿ ಕುಡಿಸಲಿಕ್ಕೆ ಎರಡು ಸಲ ಏಳುತ್ತಾಳೆ. ಒಂದು ಸಲ ಅದರ ಕಕ್ಕ ಬಳಿದು ತೆಗೆಯಲಿಕ್ಕೆ ಏಳುತ್ತಾಳೆ. ಹಗಲೂ ಅಷ್ಟೇ. ಕಣ್ಣುರೆಪ್ಪೆ ಮುಚ್ಚದೆ ಶಿವನ ಚಲನವಲನಗಳನ್ನು ಕಾಯುತ್ತಿರುತ್ತಾಳೆ. ನಡೆಯುವಾಗ ಅದು ಮುಗ್ಗರಿಸಿದರೆ ಇವಳ ಕರುಳು ದಸಕ್ಕೆನ್ನುತ್ತದೆ. ಅದು ಧೂಳಲ್ಲಿ ಆಟವಾಡಿ ಸೊಂಡಿಲು ಮಣ್ಣು ಮಾಡಿಕೊಂಡರೆ ಜೇನು ಕುರುಬರ ಭಾಷೆಯಲ್ಲಿ ಅದನ್ನು ಬೈದು ತನ್ನ ಹರಿದ ಶರಟಿನ ತುದಿಯಿಂದ ಅದನ್ನು ಒರೆಸಿ ಉಜ್ಜಿ ಶುಚಿ ಮಾಡುತ್ತಾಳೆ. ಹಂಡೆಯಲ್ಲಿ ಬಿಸಿ ನೀರು ಕಾಸಿ, ದಿನಕ್ಕೆರಡು ಬಾರಿ ಸ್ನಾನ ಮಾಡಿಸುತ್ತಾಳೆ. ಹಾಲಲ್ಲಿ ರಾಗಿ ಹುಡಿ ಬೆರಸಿ, ಅಂಬಲಿ ಮಾಡಿ ಕುಡಿಸಿ ಅದೇನಾದರೂ ಕುಡಿಯಲಾಗದೆ ಉಗಿದರೆ ಕೆಟ್ಟದಾಗಿ ಬೈಯ್ಯುತ್ತಾಳೆ. ಬೈದಾದ ನಂತರ "ಅಯ್ಯೋ ನಿನ್ನ ಬೈದೆನಾ ಕೂಸೇ, ರಾಜಾ" ಅಂತ ಮಮ್ಮಲ ಮರುಗುತ್ತಾಳೆ.
2. ಮರಿ ಆನೆ ಗೀತಾಳಿಗೆ ಮಾಡುತ್ತಿದ್ದ ಕೀಟಲೆಗಳಾವುವು?
ಈ ತುಂಟ ಆನೆ ಮರಿಯೂ ಅಷ್ಟೇ, ಗೀತಾಳನ್ನು ಮರುಗಿಸಲೆಂದೇ ಬೇಕಾದಷ್ಟು ಕೀಟಲೆಗಳನ್ನೂ ಮಾಡುತ್ತದೆ. ಬೇಕು ಬೇಕೆಂತಲೇ ತನ್ನ ಸೊಂಡಿಲಿನಿಂದ ಆಕೆಯ ಬಿಗಿದು ಕಟ್ಟಿದ ತುರುಬನ್ನು ಎಳೆಯುವುದು, ಬಿಸಿಲಲ್ಲಿ ಒಣಗಲು ಹಾಕಿದ ಆಕೆಯ ಹರಿದ ಬಟ್ಟೆಗಳ ಮೇಲೆ ತನ್ನ ಪಾದದ ಚಿತ್ರಗಳನ್ನು ಬಿಡಿಸುವುದು ಇತ್ಯಾದಿ ಮಾಡುತ್ತಾನೆ. ಆಗ ಆಕೆ ಸಿಟ್ಟಿನಿಂದ ಅದರ ಕಿವಿ ಹಿಂಡಿ ಬುದ್ಧಿ ಹೇಳಿ, ಅದರ ಕಿವಿ ಹಿಡಿದು ಎಳೆದುಕೊಂಡು ಆಟದ ಸೆರೆಮನೆಯಂತಹ ಬಿದಿರು ತಡಿಕೆಯ ಅಂಗಳದೊಳಕ್ಕೆ ಸೇರಿಸಿ ಬೈದುಬಿಡುತ್ತಾಳೆ. "ನಾನು ನಿನ್ನ ಅಮ್ಮ, ನೀನು ನನ್ನ ಮಾತು ಕೇಳೋಕು ಹಠ ಮಾಡಿದರೆ ಸೌದೆ ಸೋಟಿನಿಂದ ಬಾರಿಸಿಯೇ ಬಿಡುವೆ" ಎಂದು ಗದರುತ್ತಾಳೆ.
ಶಿವನೂ ಅಷ್ಟೇ, ತಾನು ಆನೆ ಮರಿಯೆಂಬುದ ಮರೆತು ವಿಧೇಯ ಮಗುವಂತೆ ಅಳಲು ತೊಡಗುತ್ತದೆ. ಆದರೆ ಅದರ ಅಳು ಪುಟ್ಟ ಆನೆಯೊಂದು ಘೀಳಿಡುವಂತೆ ಕೇಳುತ್ತದೆ. ಮೂರೂವರೆ ತಿಂಗಳ ಆನೆ ಮರಿ ಘೀಳಿಡುವ ಸದ್ದು, ಆ ಸದ್ದು ಮಾತ್ರ ಸಾಕು ನಮಗೆ ಇದೆಲ್ಲ ಸಹಜವಾಗಿಲ್ಲ ಅಂತ ಅನಿಸಲಿಕ್ಕೆ.

**ಉ) ಸಂದರ್ಭದೊಡನೆ ವಿವರಿಸಿರಿ.**

1. ಅದು ಮುಗ್ಗರಿಸಿದರೆ ಇವಳ ಕರುಳು ದಸಕ್ಕೆನ್ನುತ್ತದೆ.
ಈ ವಾಕ್ಯವನ್ನು **ಅಬ್ದುಲ್ ರಶೀದ್** ಅವರು ಬರೆದಿರುವ 'ಕಾಲುಚಕ್ರ' ಎಂಬ ಕೃತಿಯಿಂದ ಆಯ್ದ **'ಜೇನು ಕುರುಬರ ತಾಯಿಯೂ ಕಾಡು ಆನೆಯ ಮಗನೂ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಈ ಮಾತನ್ನು ಲೇಖಕರು ಹೇಳಿದ್ದಾರೆ. ಜೇನು ಕುರುಬರ ಗೀತಾ ಈ ಆನೆ ಮಗನನ್ನು ಸಾಕುತ್ತಿದ್ದಾಳೆ. ಆಕೆ ತನ್ನ ಈ ತಾಯ್ತನವನ್ನು ಎಷ್ಟು ಗಂಭೀರವೂ ಸಹಜವಾಗಿಯೂ ತೆಗೆದುಕೊಂಡಿದ್ದಾಳೆ.ಆ ಆನೆಮರಿ ನಡೆಯುವಾಗ ಮುಗ್ಗರಿಸಿದರೆ ಇವಳಿಗೆ ಬೇಸರವಾಗುತ್ತದೆ ಎಂದು ಹೇಳುವಾಗ ಈ ಮೇಲಿನ ಮಾತು ವ್ಯಕ್ತವಾಗಿದೆ.

2. "ಗೀತಾ ನೋಡು ಶಿವನ ಕಣ್ಣಲ್ಲಿ ನೀರು ಬರುತ್ತಿದೆ"
ಈ ವಾಕ್ಯವನ್ನು **ಅಬ್ದುಲ್ ರಶೀದ್** ಅವರು ಬರೆದಿರುವ 'ಕಾಲುಚಕ್ರ' ಎಂಬ ಕೃತಿಯಿಂದ ಆಯ್ದ **'ಜೇನು ಕುರುಬರ ತಾಯಿಯೂ ಕಾಡು ಆನೆಯ ಮಗನೂ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಈ ಮಾತನ್ನು ಸಾಹೇಬರು ಜೇನು ಕುರುಬರ ಗೀತಾಳಿಗೆ ಹೇಳಿದ್ದಾರೆ. ಏನಾದರೂ ಸೋಂಕು, ಗೀಂಕು ತಗುಲಿರಬೇಕು" ಎಂದಾಗ. "ಸೋಂಕೂ ಅಲ್ಲ, ಗೀಂಕೂ ಅಲ್ಲ ಅದಕ್ಕೆ ಅದರ ತಾಯಿಯ ನೆನಪು ಆಗಿರಬೇಕು ಸಾಹೇಬರೇ" ಆಕೆ ಅನ್ನುತ್ತಾಳೆ.ಆನೆ ಶಿವನ ಕಣ್ಣಲ್ಲಿ ನೀರು ಬರುವ ಸಂದರ್ಭಲ್ಲಿ ಈ ಮೇಲಿನ ಮಾತು ಬಂದಿದೆ.

3. "ದೇವರೇ, ಈ ಕೆಟ್ಟ ಮನುಷ್ಯರಿಂದ ಆನೆಗಳನ್ನೂ ಕಾಡುಕುರುಬರನ್ನೂ ಕಾಪಾಡು."
ಈ ವಾಕ್ಯವನ್ನು **ಅಬ್ದುಲ್ ರಶೀದ್** ಅವರು ಬರೆದಿರುವ 'ಕಾಲುಚಕ್ರ' ಎಂಬ ಕೃತಿಯಿಂದ ಆಯ್ದ **'ಜೇನು ಕುರುಬರ ತಾಯಿಯೂ ಕಾಡು ಆನೆಯ ಮಗನೂ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಆನೆ ಲಂಬೋದರ ತೀರಿಹೋದಾಗ ಜೇನು ಕುರುಬರ ಗೀತಾ ಈ ಮಾತನ್ನು ಹೇಳಿದ್ದಾಳೆ. ಗೀತಾ ತಲೆಯ ಮೇಲೆ ಮಣ್ಣೆರೆಚಿ ಹುಚ್ಚಿಯಂತೆ ಅಳುತ್ತಾ ಅಲ್ಲಿ ನೆರೆದವರಿಗೆಲ್ಲ ಹಿಡಿ ಹಿಡಿ ಶಾಪ ಹಾಕಿದ ಸಂದರ್ಭದಲ್ಲಿ ಈ ಮೇಲಿನ ಮಾತು ವ್ಯಕ್ತವಾಗಿದೆ.

4. "ಈ ಶಿವನನ್ನು ಬೆಳೆಸಿ ದೊಡ್ಡ ಪಟ್ಟದಾನೆ ಮಾಡಿಯೇ ತಾನು ಜೀವ ಬಿಡುವುದು."
ಈ ವಾಕ್ಯವನ್ನು **ಅಬ್ದುಲ್ ರಶೀದ್** ಅವರು ಬರೆದಿರುವ 'ಕಾಲುಚಕ್ರ' ಎಂಬ ಕೃತಿಯಿಂದ ಆಯ್ದ **'ಜೇನು ಕುರುಬರ ತಾಯಿಯೂ ಕಾಡು ಆನೆಯ ಮಗನೂ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಜೇನು ಕುರುಬರ ಗೀತಾ ಆನೆ ಶಿವನನ್ನು ಈ ಮಾತನ್ನು ಹೇಳಿದ್ದಾಳೆ. ಗೀತಾ ಮತ್ತು ಅವಳ ಗಂಡ ಮೊದಲು ಸಾಕುತ್ತಿದ್ದ ಆನೆಗಳನ್ನು ಕಳೆದುಕೊಂಡು ಬೇಸರದಲ್ಲಿದ್ದಾಗ, ತನ್ನ ತುರುಬನ್ನು ಎಳೆಯಲು ಬಂದ ಶಿವನ ಸೊಂಡಿಲಿಗೆ ಮುತ್ತಿಟ್ಟು, "ಎನ್ನ ಜೀವ ಹೋದರೂ ಸರಿಯೇ, ಎಂದು ಕಣ್ಣೀರು ಹಾಕಿ ಪ್ರೀತಿಯಿಂದ ನಕ್ಕಾಗ ಈ ಮೇಲಿನ ಮಾತು ವ್ಯಕ್ತವಾಗಿದೆ..

**3. ಭಾಷಾಭ್ಯಾಸ :**

**ಅ) ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**

ಆನೆ– ಗಜ, ಕರಿ. ಪುತ್ರ–ಮಗ, ಸುತ. ಕಾಡು–ಅರಣ್ಯ.ವನ. ತಾಯಿ–ಅಮ್ಮ, ಅವ್ವ.

**ಆ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.**

1. ಸುಪರ್ದಿ: ಪ್ರತಿ ದಿನ ಮನೆಗೆಲಸ ಮಾಡುವುದು ನನ್ನ ಸುಪರ್ದಿಯಾಗಿದೆ.
2. ಉಮ್ಮಳಿಸು: ನಮ್ಮ ಅಮ್ಮ ನನ್ನನ್ನು ಬಿಟ್ಟು ಊರಿಗೆ ಹೋದಾಗ ನನಗೆ ದುಃಖ ಉಮ್ಮಳಿಸಿತ್ತು.
3. ಹರಕೆ : ನನ್ನ ಕೆಲಸ ಈಡೇರಲಿ ಎಂದು ನಾನು ದೇವರಿಗೆ ಹರಕೆ ಮಾಡಿಕೊಂಡಿದ್ದೇನೆ.
4. ತಾಯ್ತನ : ತಾಯಿಯ ತಾಯ್ತನ ಅಮೂಲ್ಯವಾದುದು.

**ಇ) ಕೆಳಗಿನ ಪದಗಳಿಗೆ ವಿರುದ್ಧಾರ್ಥ ಬರೆಯಿರಿ.**

ಕಷ್ಟ x ಸುಲಭ, ಕೆಟ್ಟವ x ಒಳ್ಳೆಯವ, ದುಃಖ x ಸುಖ, ಸಹಜ x ಅಸಹಜ,
ಹಗಲು x ರಾತ್ರಿ, ವಿಧೇಯ x ಅವಿಧೆಯ

**ಈ) ಕೆಳಗಿನ ಪದಗಳನ್ನು ಬಿಡಿಸಿ ಸಂಧಿ ಹೆಸರು ತಿಳಿಸಿರಿ.**

1. ಹೆಣ್ಣಾನೆ = ಹೆಣ್ಣು + ಆನೆ – ಲೋಪಸಂಧಿ,
2. ಗುಂಡೇಟು= ಗುಂಡು + ಏಟು– ಲೋಪಸಂಧಿ,
3. ಇನ್ನೊಬ್ಬ = ಇನ್ನು + ಒಬ್ಬ – ಲೋಪಸಂಧಿ,
4. ಮೀಯಲು= ಮೀ + ಅಲು – ಆಗಮಸಂಧಿ,
5. ರಾಜೇಂದ್ರ= ರಾಜ + ಇಂದ್ರ – ಗುಣಸಂಧಿ,
6. ಪಟ್ಟದಾನೆ= ಪಟ್ಟದ + ಆನೆ –ಲೋಪಸಂಧಿ,

7. ಮಣ್ಣೆರಚಿ= ಮಣ್ಣು + ಎರಚಿ _ಲೋಪಸಂಧಿ,
8. ನನಗೊಂದು= ನನಗೆ + ಒಂದು–ಲೋಪಸಂಧಿ

**ಉ) ಕೆಳಗಿನ ಅನ್ಯದೇಶೀಯ ಪದಗಳಿಗೆ ಕನ್ನಡದ ಸಮಾನಾಂತರ ಪದಗಳನ್ನು ಬರೆಯಿರಿ.**

ಶರಟು–ಅಂಗಿ, ಸಾಹೇಬ– ಅಧಿಕಾರಿ, ಹಾಸ್ಟೆಲ್– ವಿದ್ಯಾರ್ಥಿನಿಲಯ
ಪ್ಲಾಂಟರ್– ತೋಟದ ಒಡೆಯ, ಕರೆಂಟ್– ವಿದ್ಯುತ್, ಫಾರೆಸ್ಟ್– ಅರಣ್ಯ

**ಊ) ಕೆಳಗಿನ ಪದಗಳಿಗೆ ತತ್ಸಮ–ತದ್ಭವ ರೂಪಗಳನ್ನು ಬರೆಯಿರಿ.**

ಶುಚಿ–ಸುಚಿ, ಮನುಷ್ಯ– ಮನುಜ ಸ್ನಾನ – ಸಾನ ಸೌದೆ– ಸದೆ

**ಋ) ಕೆಳಗೆ ನೀಡಿರುವ ಪದಗಳಲ್ಲಿರುವ ದ್ವಿರುಕ್ತಿ ಹಾಗೂ ಜೋಡುನುಡಿಗಳನ್ನು ವಿಂಗಡಿಸಿ ಬರೆಯಿರಿ.**

**ದ್ವಿರುಕ್ತಿ ಪದಗಳು :** ಉಂಡೂ ಉಂಡೂ, ಹಿಡಿ ಹಿಡಿ, ಆಡಿ ಆಡಿ.
**ಜೋಡುನುಡಿ ಪದಗಳು :** ಸೋಂಕು ಗೀಂಕು

**4. ಸೈದ್ಧಾಂತಿಕ ವ್ಯಾಕರಣ :**

**ನಾಮಪದದ :**

1)**ವಸ್ತುವಾಚಕ ಅಥವಾ ನಾಮವಾಚಕ:** ಯಾವುದೇ ವಸ್ತು, ವ್ಯಕ್ತಿ, ಪ್ರಾಣಿ, ಹಾಗೂ ಸ್ಥಳಗಳಿಗೆ ಇರುವ ಹೆಸರುಗಳು

ಎ) **ರೂಢನಾಮ** –– ಅನಾದಿಕಾಲದಿಂದ ರೂಢಿಯಾಗಿ ಬಂದಿರುವ ಸಾಮಾನ್ಯ ಹೆಸರುಗಳು

**ಉದಾ:** ಹೆಂಗಸು, ಗಂಡಸು, ಹುಡುಗ, ಹುಡುಗಿ, ಮಕ್ಕಳು, ಜನರು, ನದಿ, ಬೆಟ್ಟ, ಸಮುದ್ರ, ಕೆರೆ, ಹಳ್ಳ, ಹಳ್ಳಿ, ಗಿಡ, ಮರ, ಹೊಳೆ, ಮುದುಕ, ಮುದುಕಿ, ಹೆಣ್ಣು ಎಲೆ, ಅಡಿಕೆ, ಹಸು ಎಮ್ಮೆ ಬಳ್ಳಿ ಇತ್ಯಾದಿ

ಬಿ) **ಅಂಕಿತನಾಮ** –– ವ್ಯವಹಾರಕ್ಕಾಗಿ ಇಟ್ಟುಕೊಂಡಿರುವ ಹೆಸರುಗಳು

**ಉದಾ:** ಗಣೇಶ, ಕಾವೇರಿ, ಗಂಗಾ, ಬೆಂಗಳೂರು, ಧಾರವಾಡ, ಬೆಳಗಾವಿ, ಕರ್ನಾಟಕ ಇತ್ಯಾದಿ

ಸಿ) **ಅನ್ವರ್ಥನಾಮ** –– ವಸ್ತುವಿನ ರೂಪ ಹಾಗೂ ವ್ಯಕ್ತಿಯ ಗುಣಲಕ್ಷಣಗಳನ್ನು ಆಧರಿಸಿ ಅರ್ಥಕ್ಕೆ ಅನುಸಾರ ನೀಡುವ ಹೆಸರುಗಳು

**ಉದಾ:** ಜಾಣ, ಕವಿ, ಕುರುಡ, ಮೂಗ, ಕಿವುಡ, ದಡ್ಡ, ಸಾಧು, ಜಿಪುಣ, ಚಾಲಕ ಇತ್ಯಾದಿ

2.**ಗುಣವಾಚಕ:** ಗುಣ ಸ್ವಭಾವಗಳನ್ನು ತಿಳಿಸುವುದು ಗುಣವಾಚಕ

ಉದಾ:

| ವಿಶೇಷಣ | ವಿಶೇಷ್ಯ |
|---|---|
| ಸಿಹಿ | ಹಣ್ಣು |
| ದೊಡ್ಡ | ನದಿ |
| ಒಳ್ಳೆಯ | ಹುಡುಗಿ |

3.**ಸಂಖ್ಯಾವಾಚಕ:** ಸಂಖ್ಯೆಯನ್ನು ಹೇಳುವುದು ಸಂಖ್ಯಾವಾಚಕ

ಉದಾ: ಎರಡು, ಮೂರು, ಐದು, ಹತು,ಸಾವಿರ, ಲಕ್ಷ, ಕೋಟಿ– ಇತ್ಯಾದಿ

4.**ಸಂಖ್ಯೇಯವಾಚಕ:** ಇಬ್ಬರು, ಎರಡನೆಯ, ಮೂವರು, ಮೂರನೆಯ, ಮೂರರಿಂದ, ಐವರು, ಐದನೆಯ

5.**ಭಾವನಾಮ** :– ವಸ್ತುಗಳ ಮತ್ತು ಕ್ರಿಯೆಯ ಭಾವವನ್ನು ತಿಳಿಸುವ ಶಬ್ದ

ಉದಾ: ಬಿಳಿಯದರ ಭಾವ –ಬಿಳುಪು ಕರಿಯದರ ಭಾವ –– ಕಪ್ಪು

ಆಡುವುದರ ಭಾವ –ಆಟ ನೋಡುವುದರ ಭಾವ –ನೋಟ

6.**ಪರಿಮಾಣ ವಾಚಕ** :– ವಸ್ತುಗಳ ಸಾಮಾನ್ಯ ಅಳತೆ, ಪರಿಮಾಣ ಗಾತ್ರಗಳನ್ನು ಹೇಳುವುದು

ಉದಾ: ಪರಿಮಾಣ – ಹಲವು, ಕೆಲವು. ಗಾತ್ರ – ಅಷ್ಟು, ಇಷ್ಟು. ಅಳತೆ – ಅಷ್ಟು, ಇಷ್ಟು.

**7.ಪ್ರಕಾರ ವಾಚಕ** :- ವಸ್ತುಗಳ ಸ್ಥಿತಿ ಅಥವಾ ರೀತಿಗಳನ್ನು ತಿಳಿಸುವ ಶಬ್ದ

ಉದಾ: ಅಂಥ, ಅಂಥದು, ಅಂತಹುದು, ಇಂಥ, ಇಂಥದು, ಎಂತಹ, ಅಂಥವನು – ಇತ್ಯಾದಿ

**8.ದಿಗ್ವಾಚಕಗಳು** :- ದಿಕ್ಕುಗಳ ಹೆಸರನ್ನು ಸೂಚಿಸುವ ಶಬ್ದಗಳು

ಉದಾ: ಮೂಡಣ, ಪಡುವಣ, ತೆಂಕಣ, ಬಡಗಣ, ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಆಗ್ನೇಯ, ಈಶಾನ್ಯ, ಆಚೆ, ಈಚೆ.

**9.ಸರ್ವನಾಮ** : ನಾಮ ಪದಗಳ ಬದಲಾಗಿ ಬಳಸುವ ಪದ

ಉದಾ: ಅವನು, ಅವಳು, ಅದು, ಇದು, ಅವರು, ಇವರು, ಇವುಗಳಿಂದ, ಅದಕ್ಕೆ – ಇತ್ಯಾದಿ

1. **ಪುರುಷಾರ್ಥಕ ಸರ್ವನಾಮಗಳು: ಇವುಗಳಲ್ಲಿ ಮೂರು ವಿಧ**
   ಎ) ಉತ್ತಮ ಪುರುಷ --- ನಾನು, ನಾವು
   ಬಿ) ಮಧ್ಯಮ ಪುರುಷ ---- ನೀನು, ನೀವು,ತಾವು
   ಸಿ) ಪ್ರಥಮ ಪುರುಷ --- ಅವನು, ಅವಳು, ಅವರು, ಅದು, ಅವು, ಇದು, ಇವು.

2. **ಆತ್ಮಾರ್ಥಕ ಸರ್ವನಾಮ** :- ತಾನು, ತಾವು, ತನ್ನ, ತಮ್ಮ

3.**ಪ್ರಶ್ನಾರ್ಥಕ ಸರ್ವನಾಮ** :- ಪ್ರಶ್ನೆಯಿಂದ ಕೂಡಿದ ಸರ್ವನಾಮ
ಉದಾ: ಏಕೆ? ಏನು? ಯಾರು? ಯಾವುವು? ಯಾವಳು? ಹೇಗೆ? ಯಾವುದು

## 4. ಬಸ್ಸು ಪ್ರಯಾಣದ ಸುಖ ದುಃಖಗಳು – ವೀರೇಂದ್ರ ಸಿಂಪಿ

**ಕೃತಿಕಾರರ ಪರಿಚಯ :**

- **ವೀರೇಂದ್ರ ಸಿಂಪಿ** ಅವರು ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಚಡಚಣದಲ್ಲಿ 1938 ರಲ್ಲಿ ಜನಿಸಿದರು.
- ಇವರು ಕಾಗದದ ಚೂರು, ಭಾವ ಮೈದುನ, ಸ್ವಚ್ಛಂದ ಮನದ ಸುಳಿದಾಟ, ಪರಿಸರ ಸ್ಪಂದನ, ಭಾವ ಮೈದುನ ಮುಂತಾದ ಕೃತಿಗಳನ್ನು ರಚಿಸಿದ್ದಾರೆ.
- ಶ್ರೀಯುತರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.
- ಪ್ರಸ್ತುತ 'ಬಸ್ಸು ಪ್ರಯಾಣದ ಸುಖ ದುಃಖಗಳು' ಪ್ರಬಂಧವನ್ನು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ **'ಆಯ್ದ ಲಲಿತ ಪ್ರಬಂಧಗಳು'** ಕೃತಿಯಿಂದ ಆರಿಸಲಾಗಿದೆ.

**ಅಭ್ಯಾಸ**

**I. ಪದಗಳ ಅರ್ಥ :**

**ಅಲೆ** – ತಿರುಗಾಡು; ಸುತ್ತಾಡು.
**ಅಧೋಗತಿ** – ಸರ್ವನಾಶ; ದುರ್ಗತಿ; ಪತನ.
**ಉದಾತ್ತ** – ಶ್ರೇಷ್ಠ
**ಉಪಾಸಕ** – ಆರಾಧಕ; ಭಕ್ತ.
**ಏಕತಾನತೆ** – ಒಂದೇ ರಾಗ; ಹೇಳಿದ್ದನ್ನೇ ಹೇಳು.
**ಕೂಪಮಂಡೂಕ** – ಬಾವಿಯೊಳಗಿನ ಕಪ್ಪೆ.
**ಚಿವಡಾ** – ಅವಲಕ್ಕಿಯ ತಿನಿಸು
**ತಪಶ್ಚರ್ಯ** – ವ್ರತ ನಿಯಮಗಳಿಂದ ದೇಹವನ್ನು ದಂಡಿಸುತ್ತಾ ಧ್ಯಾನ ಮಾಡುವುದು.
**ನಾಗಾಲೋಟ** – ಅತಿವೇಗದ ಓಟ.
**ಪಾರುಗಾಣಿಸು** – ರಕ್ಷಿಸು; ದಾಟಿಸು.
**ಪ್ರಾಪ್ತಿ** – ಗಳಿಕೆ; ಲಾಭ; ಸಿಗುವುದು.
**ವ್ಯವಧಾನ** – ತಾಳ್ಮೆ; ಸಮಾಧಾನ; ಸಹನೆ.
**ಸಾತ್ವಿಕ** – ಒಳ್ಳೆಯವ; ಉತ್ತಮ ಗುಣವುಳ್ಳವನು.
**ಆರ್ತ ಸ್ವರ** – ನೋವಿನ ಧ್ವನಿ; ಸಂಕಟದ ಧ್ವನಿ.
**ಅಧಃಪತನ** – ಸರ್ವನಾಶ; ಕೆಳಗೆ ಬೀಳುವುದು.
**ಉಪಕ್ರಮಿಸು** – ಪ್ರಾರಂಭ; ತೊಡಗುವಿಕೆ.
**ಒರತೆ** – ನೀರಿನ ಬುಗ್ಗೆ; ನೀರು ಜಿನುಗುವಿಕೆ.
**ಕಿಸೆ** – ಜೇಬು
**ಗಂಡಾಂತರ** – ವಿಪತ್ತು; ತೊಂದರೆ.
**ಚುರಮರಿ** – ಮಂಡಕ್ಕಿಯ ತಿನಿಸು
**ತಾಸು** – ಗಂಟೆ; ಸಮಯ
**ದುಗುಡ** – ವ್ಯಸನ; ಚಿಂತೆ; ಆತಂಕ.
**ಡೌಲು** – ಆಡಂಬರ; ಒಣಹೆಮ್ಮೆ; ಬಡಾಯಿ.
**ಪ್ರಯಾಸ** – ಆಯಾಸ; ದಣಿವು; ಶ್ರಮ.
**ಮಣೆ** – ಸೋಲು; ಬಾಗು.
**ಷೋಕಿಲಾಲ** – ಮೋಜು ಮಾಡುವವ
**ಸ್ಥಿತಿವಂತ** – ಸಿರಿವಂತ

**2. ಪ್ರಶ್ನೆಗಳು :**

**ಅ) ಬಿಟ್ಟ ಸ್ಥಳಗಳನ್ನು ನೀಡಿರುವ ನಾಲ್ಕು ಆಯ್ಕೆ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ.**

1. ವೀರೇಂದ್ರ ಸಿಂಪಿ ಅವರಿಗೆ ಪ್ರವಾಸವೆಂದರೆ ________

ಅ) ಪ್ರಯಾಸದ ವಿಷಯ ಆ) ಸುಖಪ್ರಸಂಗ ಇ) ಶೋಕಿಯ ಪ್ರಸಂಗ ಈ) ದುಗುಡದ ಪ್ರಸಂಗ

2. ಬಸ್ಸು ಪ್ರಯಾಣಿಕರ ಚರ್ಚೆಯಲ್ಲಿ ________ ಮುಖ್ಯವಾಗಿರುತ್ತದೆ.

ಅ) ಸಮಸ್ಯೆ ಆ) ಮಾತು ಇ) ವಿಷಯ ಈ) ಅಭಿಪ್ರಾಯ

3. ಲೇಖಕರು ಬಸ್ಸಿನಿಂದ ಲಗುಬಗೆಯಿಂದ ಇಳಿದದ್ದು ________

ಅ) ಚಹಾ ಕುಡಿಯಲು ಆ) ಚುರುಮರಿ ತಿನ್ನಲು ಇ) ಟಿಕೇಟ್ ಪಡೆಯಲು ಈ) ದಾರಿ ತಪ್ಪಿದುದಕ್ಕೆ

4. ಲೇಖಕರು ಲಾರಿಯ ಡ್ರಾಯವ್ಹರನಿಗೆ ಹೆದರಿದುದು ________

ಅ) ರಾತ್ರಿ ಆದುದಕ್ಕೆ ಆ) ಕೈಲಿ ವಾಚು ಇದ್ದುದರಿಂದ ಇ) ಊರು ದೂರ ಇದ್ದುದರಿಂದ ಈ) ಪ್ರಾಣ ಭಯದಿಂದ

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ವೀರೇಂದ್ರ ಸಿಂಪಿಯವರು ತಾವು ಯಾವ ರೀತಿಯ ಪ್ರಯಾಣಿಗರಲ್ಲ ಎಂದಿದ್ದಾರೆ?

ಮನಸ್ಸು ಬಂದತ್ತ ಸ್ವೇಚ್ಛಾಚಾರಿಯಾಗಿ ಅಲೆಯುವಷ್ಟು ಸ್ಥಿತಿವಂತನೂ ನಾನಲ್ಲ. 'ಪ್ರಯಾಣಕ್ಕಾಗಿ ಪ್ರಯಾಣ' ಎನ್ನುವ ಶೋಕಿಲಾಲನೂ ನಾನಲ್ಲ ಎಂದಿದ್ದಾರೆ.

2. ವೀರೇಂದ್ರ ಸಿಂಪಿ ಅವರು ಪ್ರವಾಸ ಕೈಗೊಳ್ಳುವುದು ಯಾವಾಗ ಎಂದಿದ್ದಾರೆ?

ಜೀವನದಲ್ಲಿ ಸ್ವಾರಸ್ಯ ಕಾಣದಿದ್ದಾಗ ವೀರೇಂದ್ರ ಸಿಂಪಿಯವರು ಪ್ರವಾಸ ಕೈಗೊಳ್ಳುತ್ತಿದ್ದರು.

3. ವೀರೇಂದ್ರ ಸಿಂಪಿ ಅವರು ಪ್ರವಾಸ ಕೈಗೊಳ್ಳುವುದು ಏಕೆ?

ಬಾಳು ಬರಿದಾಗಿ ಕಂಡಾಗ ಏನಾದರೂ ನೆಪಹೂಡಿ ಪ್ರವಾಸ ಕೈಕೊಳ್ಳುತ್ತೇನೆ ಎಂದಿದ್ದಾರೆ.

4. ಲೇಖಕರು ಬಸ್ಸಿಗೆ ಕಾಯುವುದು ಯಾವುದಕ್ಕೆ ಸಮಾನ ಎಂದಿದ್ದಾರೆ?

ಲೇಖಕರು ಬಸ್ಸಿಗಾಗಿ ಕಾಯುವುದೆಂದರೆ ಒಂಟಿಗಾಲಿನ ಮೇಲೆ ನಿಂತು ಶಿವನನ್ನು ಕುರಿತು ತಪಶ್ಚರ್ಯವನ್ನು ಗೈದಂತೆಯೇ ಸೈ, ಎಂದಿದ್ದಾರೆ.

5. ಲೇಖಕರು ಬಸ್ಸು ಏರಿದುದನ್ನು ಯಾವುದಕ್ಕೆ ಹೋಲಿಸುತ್ತಾರೆ?

ಲೇಖಕರು ಬಸ್ಸನ್ನು ಏರಿದುದನ್ನು ಕೊಲಂಬಸ್ ಅಮೇರಿಕೆಯನ್ನು ಪ್ರಥಮ ಬಾರಿ ಕಂಡಂತೆ, ತೇನಸಿಂಗ್ ಎವರೆಸ್ಟನ್ನು ಏರಿ ನಿಂತಂತೆ ಎಂದು ಹೋಲಿಸಿದ್ದಾರೆ.

6. ಲೇಖಕರು ಬಸ್ಸು ನುಗ್ಗಾಟದಲ್ಲಿ ಮೊದಲಿಗನಾಗಬೇಕೆಂದು ಏಕೆ ಬಯಸುತ್ತಾರೆ?

ಬಸ್ಸು ನುಗ್ಗಾಟದಲ್ಲಿ ಸಕ್ಕು ಮೊದಲಿಗನಾಗದಿದ್ದರೂ ಮೊದಲಿಗರಲ್ಲಿ ಓರ್ವನಾಗಬೇಕೆನ್ನುವ ತತ್ವದವರು.

7. ಬಸ್ ಕಂಡಕ್ಟರ್ ಸ್ತ್ರೀ ಪ್ಯಾಸೆಂಜರ್ ಜೊತೆ ಏನೆಂದು ಚರ್ಚಿಸುತ್ತಾನೆ?

ಸ್ತ್ರೀ ಪ್ಯಾಸೆಂಜರೊಂದಿಗೆ ದೊಡ್ಡ ಚರ್ಚೆಯೇ ನಡೆಯುತ್ತದೆ."ಈ ಕೂಸು ನಿಮ್ಮದೇ ಏನ್ರಿ?." "ಹೌದು." "ಎಷ್ಟು ವರ್ಷ ಆಗಿವೆ?." "ಎರಡು ತುಂಬಿ ಮೊನ್ನೆ ಅಮಾವಾಸ್ಯೆಗೆ ಒಂದು ತಿಂಗಳಾಯಿತು." "ಇಲ್ಲ ಮೂರು ವರ್ಷ ಆಗಿವೆ" ಎಂದು ಅರ್ಧ ಟಿಕೇಟನ್ನು ಪಡೆಯಲು ಸೂಚಿಸುವನು.

8. ಲೇಖಕರು ಸಹ ಪ್ರಯಾಣಿಕನೊಂದಿಗೆ ರೊಚ್ಚಿಗೆದ್ದದ್ದು ಏಕೆ?

ಲೇಖಕರು, ಸಹ ಪ್ರಯಾಣಿಕನಿಗೆ ಕರ್ನಾಟಕ ಬಗ್ಗೆ ನಿಮ್ಮ ಅಭಿಪ್ರಾಯವೇನು?" ಎಂದು ಪ್ರಾಂತೀಯ ಅಭಿಮಾನದ ಪ್ರಶ್ನೆ ಕೇಳಿದಾಗ "ಅದೊಂದು ದರಿದ್ರ ನಾಡು" ಎಂದು ಅವನು ಅಭಿಪ್ರಾಯ ಪಟ್ಟಾಗ ಲೇಖಕರು ರೊಚ್ಚಿಗೆದ್ದರು.

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. ವೀರೇಂದ್ರ ಸಿಂಪಿ ಅವರಿಗೆ ತಾವು ಸಂದರ್ಶಿಸಿದ ಸ್ಥಳಗಳ ಬಗ್ಗೆ ಯಾವ ಅಭಿಪ್ರಾಯವಿದೆ?

'ಪ್ರಯಾಣಕ್ಕಾಗಿ ಪ್ರಯಾಣ' ಎನ್ನುವ ಶೋಕಿಲಾಲನೂ ನಾನಲ್ಲ ಎಂದಿದ್ದಾರೆ. ಇಲ್ಲಿಯವರೆಗೆ ಲೇಖಕರು ಸಂದರ್ಶಿಸಿದ ಸ್ಥಳಗಳಾಗಲಿ, ಸುತ್ತುವರಿದು ಅಲೆದಾಡಿದ ನಾಡುಗಳಾಗಲಿ ಕಡಿಮೆಯೆಂದೇ ಹೇಳಬೇಕು. ಪ್ರಸಿದ್ಧ ಪಟ್ಟಣಗಳೆಂದು ನಾಡಿನವರ ಬಾಯಲ್ಲೆಲ್ಲ ನಲಿಯುತ್ತಿರುವ ಸ್ಥಳಗಳು ಲೇಖಕರ ಮಟ್ಟಿಗೆ ನಕಾಶದೊಳಗಿನ ಹೆಸರುಗಳು ಮಾತ್ರ. ಪ್ರವಾಸ ಕಥನಗಳನ್ನು ಅಷ್ಟಿಷ್ಟು ಓದಿದ ಲೇಖಕರು ಆಯಾ ಊರುಗಳನ್ನು ಪ್ರತ್ಯಕ್ಷ ಕಂಡವರಿಗಿಂತ ಚೆನ್ನಾಗಿ ಬಲ್ಲೆ.

2. ವೀರೇಂದ್ರ ಸಿಂಪಿ ಅವರಿಗೆ ಪ್ರಯಾಣದಲ್ಲಿ ಯಾವ ಯಾವ ರೀತಿಯ ಅನುಭವಗಳಾಗಿವೆ?

ವೀರೇಂದ್ರ ಸಿಂಪಿ ಅವರ ಪ್ರವಾಸದ ಕ್ಷೇತ್ರ ಸಣ್ಣದಿರಬಹುದು. ಆದರೆ ಅದರಲ್ಲಿ ಅವರು ಕಂಡ ರಸದ ಒರತೆ ಮಾತ್ರ ದೊಡ್ಡದು. ಜೀವನದಲ್ಲಿ ಕಾಣಸಿಗದ ಸ್ವಾರಸ್ಯ ಅವರಿಗೆ ಪ್ರವಾಸದಲ್ಲಿ ದೊರಕಿದೆ. ಪ್ರವಾಸದಲ್ಲಿ ಅವರು ಅತ್ತಿದ್ದಾರೆ – ನಕ್ಕಿದ್ದಾರೆ. ನಗೆಪಾಟಲು ವ್ಯಕ್ತಿಯೂ ಆಗಿದ್ದಾರೆ. ಹೀರೋ ಆಗಿದ್ದಂತೆ ಝೀರೋ ಕೂಡ ಆದ ಪ್ರಸಂಗಗಳೂ ಇಲ್ಲದಿಲ್ಲ. ಪರೀಕ್ಷೆಗಾಗಿ ಪರೀಕ್ಷಾ ವಿದ್ಯಾರ್ಥಿಯು ಪಟ್ಟ ದುಗುಡವನ್ನೇ ಪ್ರತಿ ಪ್ರವಾಸವೂ ಅವರಿಗಾಗಿ ಹೊತ್ತು ತಂದಿದೆ.

3. ಲೇಖಕರು ಬಸ್ಸಿಗೆ ಕಾಯುವ ಪ್ರಸಂಗಗಳನ್ನು ಯಾವ ರೀತಿ ವರ್ಣಿಸಿದ್ದಾರೆ?

ಬಸ್ಸು ಪಗ್ರಯಾಣದ ಸ್ವರ್ಗ ಸುಖ ಸಿಗಬೇಕಾದರೆ ತಪಶ್ಚರ್ಯವನ್ನಂತೂ ಮಾಡಲೇಬೇಕು.ಅದೆಂದರೆ ಬಸ್ಸಿಗಾಗಿ ಕಾಯುವುದು, ಊಟದ ಮನೆಯಲ್ಲಿ ಒಂದೆರಡು ನಿಮಿಷವಾಗಲಿ-ಕೊನೆಗೆ ಗಳಿಗೆಯಾಗಲಿ ತಾಳಬಹುದು. ಕಾಳುಕಡ್ಡಿಯ ಅಂಗಡಿಯ ಮುಂದೆ ತಾಸುಗಟ್ಟಲೆ ರಣಗುಟ್ಟುತ್ತಿರುವ ಸೂರ್ಯನ ಕೃಪಾ ಛತ್ರದ ಕೆಳಗೆ ಆಶ್ರಯ ಪಡೆಯಬಹುದು. ಬಸ್ಸಿಗಾಗಿ ಕಾಯುವುದೆಂದರೆ ಒಂಟಿಗಾಲಿನ ಮೇಲೆ ನಿಂತು ಶಿವನನ್ನು ಕುರಿತು ತಪಶ್ಚರ್ಯವನ್ನು ಗೈದಂತೆಯೇ ಸೈ ಎಂದು ವರ್ಣಿಸಿದ್ದಾರೆ.

4. ಲೇಖಕರು ಬಸ್ಸು ಏರುವ ಸಂದರ್ಭದಲ್ಲಿ ಯಾವ ರೀತಿಯ ವಾತಾವರಣ ಉಂಟಾಗುತ್ತದೆ ಎಂದಿದ್ದಾರೆ?

ಕೈಯಲ್ಲಿ ಟ್ರಂಕನ್ನು ಹಿಡಿದು ಬಸ್ಸಿನೊಂದಿಗೆ ಸ್ಪರ್ಧೆಕಟ್ಟುವಂತೆ ಓಡುತ್ತೀರಿ, ಧೂಳೆ ನಮಗೆ ಸಿಕ್ಕ ಪ್ರಾಪ್ತಿ. ನೂರು ಸಲ ಮೋಸಗೊಳಿಸಿ ಕೊನೆಗೂ ನಿಮ್ಮ ಬಸ್ಸು ಬಂದೇ ಬರುವುದು ಎಂಬ ಆಸೆ ಉಂಟಾಗುತ್ತದೆ.

5. ಲೇಖಕರು ಬಸ್ಸಿನ ಕಿಟಕಿ ಬಳಿಯ ಆಸನದಲ್ಲಿ ಕೂರಲು ಬಯಸಿದ್ದುದು ಏಕೆ?

ಕಿಟಕಿಯ ಹತ್ತಿರದ ಸ್ಥಳದಲ್ಲಿ ಕುಳಿತರೆ, ಹೊರಗಿನ ಗಾಳಿಯೂ ಬೀಸುತ್ತದೆ. ಒಳಗಿನ ಜನಸಂಪರ್ಕವೂ ತಪ್ಪಿರುವುದಿಲ್ಲ. ಹಾಗೆ ಕಿಟಕಿಯ ಹತ್ತಿರ ಕುಳಿತು ಜನರ ನಡೆನುಡಿಗಳನ್ನು ಗಮನಿಸುವುದು, ಬೇಸರವಾದಾಗ ಹೊರಗಿನ ಪ್ರಕೃತಿಯ ಉಪಾಸಕನಾಗಿ ನಿಲ್ಲುವುದು, ಮಗುದೊಮ್ಮೆ ಮಾತುಕತೆಗಳಲ್ಲಿ ಭಾಗವಹಿಸಿ ಜೋರಾಗಿ ಮಾತನಾಡುವುದು, ಇಡಿಯ ಪ್ರಯಾಣದ ಅವಧಿಯನ್ನು ನಾಟಕದ ಅವಧಿಯೆಂದು ತಿಳಿದು ಪ್ರೇಕ್ಷಕನಾಗಿ ನಿಲ್ಲುವುದು.

6. ಬಸ್ಸಿನಲ್ಲಿ ಯಾವ ಯಾವ ವಿಷಯಗಳ ಮೇಲೆ ಮಾತುಕತೆ ನಡೆಯುತ್ತವೆ?

ಬಹುಕಾಲ ಮೌನದಲ್ಲಿದ್ದು ಬೇಜಾರುಗೊಂಡಾಗ ಒಳ್ಳೆಯ ಮಾತುಗಾರ ಸಿಕ್ಕರೆ ತೀರಿತು. ಮಾತಿನ ಸುರಿಮಳೆ.ಚರ್ಚೆಯ ಗಂಗಾ ಪ್ರವಾಹ, ವಿಷಯ ಮುಖ್ಯವಲ್ಲ. ಮಾತೇ ಮುಖ್ಯ. ಭಾರತದ ವಿದೇಶ ನೀತಿಯಿಂದ ಹಿಡಿದು ಹಳ್ಳಿಯ ಗ್ರಾಮ ಪಂಚಾಯಿತಿಯ ಚುನಾವಣೆಯವರೆಗೆ, ಶಿಕ್ಷಣದ ಅಧೋಗತಿಯಿಂದ ಜನರ ನೈತಿಕ ಅಧಃಪತನದವರೆಗೆ ಮಾತನ್ನು ಜಗ್ಗಿಯಾಡಲಾಗುತ್ತದೆ. ಒಂದು ಸಾರಿ ಎಲ್ಲಿಯೋ ಪ್ರಾರಂಭವಾದ ಮಾತು ಮತ್ತೆಲ್ಲಿಯೋ ಮುಗಿಯುತ್ತದೆ.

**ಈ) ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಲೇಖಕರು ಬಸ್ಸು ಪ್ರಯಾಣದಲ್ಲಿ ನಗೆಗೇಡಾದ ಪ್ರಸಂಗ ಯಾವುದು?

ತೀರಾ ಇತ್ತೀಚಿಗಾದ ಘಟನೆಯಿದು. ರಾತ್ರಿ 9 ಘಂಟೆಯಾಗಿರಬಹುದು. ಬಸ್ಸಿನಿಂದ ಇಳಿಯುತ್ತಲೇ ಮುಂದಿನ ಬಸ್ಸು ಸಿದ್ಧವಾಗಿ ನಿಂತಿತ್ತು. ನನ್ನ ಗಂಟುಗಳನ್ನು ಬಸ್ಸಿನ ಮೇಲೆ ಒಗೆಯಿಸಿ ಇನ್ನೂ ತಡವಿರಬಹುದು ಎನ್ನುವ ದೌಲಿನಲ್ಲಿ ಚಹಾ ಕುಡಿಯುವ ದುರ್ಬುದ್ಧಿಯಿಂದ ಹೋಟೆಲಿಗೆ ಹೋದೆ. ಅಂದು ಬಸ್ ಸ್ಟ್ಯಾಂಡಿನಲ್ಲಿ ಎರಡು ಮೂರು ಬಸ್ಸುಗಳು ಸಾಲಾಗಿ ನಿಂತಿದ್ದವು. ಯಾವುದೋ ಬಸ್ಸಿನಲ್ಲಿ ಏರಿ ಟಿಕೇಟೊಂದನ್ನು ಪಡೆದೆ. ನನಗೆ ಸಂಶಯವೇನೂ ಬರಲಿಲ್ಲ. ಬಸ್ಸು ಇನ್ನೇನು ಹೊರಡಬೇಕು ಎಂದಾಗ ತಿಳಿದುಬಂತು. ನಾನು ಯಾವ ಊರಿಂದ ಬಂದೆನೋ ಅಲ್ಲಿಗೇ ಹೊರಟಿತ್ತು ಆ ಬಸ್ಸು. ಕಂಡಕ್ಟರನಿಗೆ ಹೇಳಿ ಬಸ್ಸಿನಿಂದ ಲಗುಬಗೆಯಿಂದ ಇಳಿದೆ. ಬಸ್ಸಿನ ನಲ್ವತ್ತು ಮುಖಗಳು ನನ್ನನ್ನು ದಿಟ್ಟಿಸಿ ನೋಡುತ್ತಿದ್ದವು, ಅಪಹಾಸ್ಯ ಗೈಯುತ್ತಿದ್ದವು. ನಾನು ತಲೆಯಿಂದ ಬುಡದವರೆಗೂ ಬೆವರಿನಲ್ಲಿ ಮುಳುಗಿಹೋಗಿದ್ದೆ. ಈ ರೀತಿ ಬಸ್ಸಿನಲ್ಲಿ ನಾನು ಹೀರೋ ಆಗಿದ್ದಂತೆ ಝೀರೋ ಕೂಡಾ ಆಗಿ ನಗೆಗೇಡಾದ ಪ್ರಸಂಗಗಳೂ ಇವೆ.

2. ಲೇಖಕರಿಗೆ ಲಾರಿ ಪ್ರಯಾಣದಲ್ಲಿ ಯಾವ ಅನುಭವಗಳಾದವು?

ಲಾರಿಯ ಹಾದಿಯನ್ನು ಕಾದು ನಿಂತಾಗ ಮಧ್ಯರಾತ್ರಿಯಾಗಿತ್ತು. ಲಾರಿಯೊಂದು ಬಂದೇ ಬಂತು, ಲೇಖಕರು ಕುಳಿತುಬಿಟ್ಟರು. ಲಾಯಿಟಿನ ಬೆಳಕಿನಲ್ಲಿ ಲೇಖಕರೂ ಡ್ರಾಯವ್ಹರನೂ ಪರಸ್ಪರ ದಿಟ್ಟಿಸಿ ನೋಡಿಕೊಂಡರು. ಆತನ ನೋಟಕ್ಕೆ ನಡುಗಿಹೋದರು. ಕೈಯಲ್ಲಿ ಹೊಸದಾಗಿ ಕೊಂಡ ವಾಚು ಇತ್ತು. ಕಿಸೆಯಲ್ಲಿ 60-70 ರೂ. ಇದ್ದವು. ಈ ಹಣದ ಆಸೆಗಾಗಿ ಲೇಖಕರನ್ನು ಕಡಿದು ತುಂಡುಮಾಡಿ, ರೋಡ ಬದಿಗೆ ಒಗೆದರೆ ಏನು ಗತಿ? ಹತ್ತು ನಿಮಿಷಕ್ಕೊಮ್ಮೆ ಅವರಡೆ ದೃಷ್ಟಿ ಬೀರುವ ವ್ಯಕ್ತಿಯ ಮೇಲೆ ಅವರ ವಿಶ್ವಾಸ ಹಾರಿತು. ಎದೆ ಡವ ಡವ ಅನ್ನುತ್ತಿತ್ತು. ಅವರು ಇಳಿಯಬೇಕಾದ ಸ್ಥಳ ಬರುವವರೆಗೂ ಜೀವದಲ್ಲಿ ಜೀವವಿರಲಿಲ್ಲ. ಡ್ರಾಯವ್ಹರನು ಅವರನ್ನು ಜೀವಂತ ಬಿಟ್ಟಾಗ ಅವನು ಹೇಳಿದ ಹಣಕ್ಕಿಂತ ಹೆಚ್ಚಿನ ಹಣ ಕೊಟ್ಟರು. "ಸಲಾಂ ಸಾಬ್" ಎನ್ನುವ ಆತನ ನುಡಿಯನ್ನು ಕೇಳುವ ವ್ಯವಧಾನವಿರದೆ ಓಡಿಯೇ ಬಿಟ್ಟಿದ್ದರು.

3. ವೀರೇಂದ್ರ ಸಿಂಪಿ ಅವರಿಗೆ ಬಸ್ಸು ಪ್ರಯಾಣದಲ್ಲಿ ಆದ ಸುಖ ದುಃಖಗಳನ್ನು ಸಂಗ್ರಹಿಸಿ ಬರೆಯಿರಿ.

ಬಸ್ಸು ಪ್ರಯಾಣದ ಸ್ವರ್ಗಸುಖ ಸಿಗಬೇಕಾದರೆ ತಪಶ್ಚರ್ಯವನ್ನಂತೂ ಮಾಡಲೇಬೇಕು. ಅದೆಂದರೆ ಬಸ್ಸಿಗಾಗಿ ಕಾಯುವುದು. ಊಟದ ಮನೆಯಲ್ಲಿ ಒಂದೆರಡು ನಿಮಿಷವಾಗಲಿ-ಕೊನೆಗೆ ಗಳಿಗೆಯಾಗಲಿ ತಾಳಬಹುದು. ಕಾಳುಕಡ್ಡಿಯ ಅಂಗಡಿಯ ಮುಂದೆ ತಾಸುಗಟ್ಟಲೆ ರಣಗುಟ್ಟುತ್ತಿರುವ ಸೂರ್ಯನ ಕೃಪಾ ಛತ್ರದ ಕೆಳಗೆ ಆಶ್ರಯ ಪಡೆಯಬಹುದು. ಲೇಖಕರಾದರೋ ಇಂಥ ಪ್ರಸಂಗಗಳಲ್ಲಿ ಸಾಕಷ್ಟು ನೂಕು ನುಗ್ಗಾಟಗಳಲ್ಲಿ ಸಿಕ್ಕು ಮೊದಲಿಗನಾಗದಿದ್ದರೂ ಮೊದಲಿಗರಲ್ಲಿ ಓರ್ವನಾಗಬೇಕೆನ್ನುವ ತತ್ವದವರು. ಇಷ್ಟು ಗಡಿಬಿಡಿ ಮಾಡಿ ಏರುವುದರಲ್ಲಿ ಒಂದು ಸ್ವಾರ್ಥವಿದೆ. ಅದೇನೆಂದರೆ ಕಿಟಕಿಯ ಹತ್ತಿರದ ಸ್ಥಳ, ಹೊರಗಿನ ಗಾಳಿಯೂ ಬೀಸುತ್ತದೆ. ಒಳಗಿನ ಜನಸಂಪರ್ಕವೂ ತಪ್ಪಿರುವುದಿಲ್ಲ. ಹಾಗೆ ಕಿಟಕಿಯ ಹತ್ತಿರ ಕುಳಿತು ಜನರ ನಡೆನುಡಿಗಳನ್ನು ಗಮನಿಸುವುದು, ಬೇಸರವಾದಾಗ ಹೊರಗಿನ ಪ್ರಕೃತಿಯ ಉಪಾಸಕನಾಗಿ ನಿಲ್ಲುವುದು, ಮಗುದೊಮ್ಮೆ ಮಾತುಕತೆಗಳಲ್ಲಿ ಭಾಗವಹಿಸಿ ಜೋರಾಗಿ ಮಾತನಾಡುವುದು, ಇಡಿಯ ಪ್ರಯಾಣದ ಅವಧಿಯನ್ನು ನಾಟಕದ ಅವಧಿಯೆಂದು ತಿಳಿದು ಪ್ರೇಕ್ಷಕನಾಗಿ ನಿಲ್ಲುವುದು. ಬಸ್ಸು ಪ್ರಯಾಣ ಸ್ಫೂರ್ತಿಯ ಉಗಮವೂ ಆಗಬಹುದು.

ವೀರರ ನಾಡಾದ ಕಲಿಗಳ ನಮ್ಮ ನಾಡಿಗೆ ಅಪಮಾನವೇ ಎಂದು ಕೋಪದಿಂದ ಕುದಿದೆ. ಚರ್ಚೆಯಿಂದ ಗೆದೆಯಲಾಗದೆ, ಇನ್ನು ಮಾರಾಮಾರಿಯಾಗುವ ಸ್ಥಿತಿಯಿತ್ತು. ಹೀಗೆ ಬಸ್ಸು ಪ್ರಯಾಣ ಒಂದೊಂದು ಸಲ ಅನಿರೀಕ್ಷಿತ ಗಂಡಾಂತರಕ್ಕೆ ಈಡೂ ಮಾಡುತ್ತಿರುವುದುಂಟು. ಬಸ್ಸು ಪ್ರಯಾಣವು ಈ ರೀತಿ ಲೇಖಕರ ಅನುಭವದ ವಲಯವನ್ನು ವಿಸ್ತರಿಸಿದೆ. ಜೀವನದಲ್ಲಿ ಆಸಕ್ತಿಯನ್ನು ಹುಟ್ಟಿಸಿದೆ. ಬರಡು ಬಾಳಿನಲ್ಲಿ ಆಶೆಯ ಚಿಗುರನ್ನೂ ಮೂಡಿಸಿದೆ. ಜೀವನದ ಏಕತಾನತೆಯಲ್ಲಿ ವೈವಿಧ್ಯದ ಬಣ್ಣವನ್ನು ತೀಡಿದೆ. ವಿವಿಧ ವ್ಯಕ್ತಿಗಳನ್ನು ನೋಡುವ, ಮಾತನಾಡಿಸುವ ಸಂದರ್ಭವನ್ನು ಒದಗಿಸಿಕೊಟ್ಟು, ಬಿಡದೆ ಅವರನ್ನು ಅಭ್ಯಸಿಸುವಂತೆ ಮಾಡಿದೆ. ಇಂತು ಪ್ರವಾಸವೆಂದರೆ ಲೇಖಕರಿಗೆ ಮೋಜಿನ ವಿಷಯವಾಗಿದೆ.

**ಉ) ಸಂದರ್ಭದೊಡನೆ ವಿವರಿಸಿರಿ.**

1. **"ಈ ಕೂಸು ನಿಮ್ಮದೇ ಏನ್ರೀ?"**

ಈ ವಾಕ್ಯವನ್ನು **ವೀರೇಂದ್ರ ಸಿಂಪಿ** ಅವರು ಬರೆದಿರುವ 'ಆಯ್ದ ಲಲಿತ ಪ್ರಬಂಧಗಳು' ಎಂಬ ಕೃತಿಯಿಂದ ಆಯ್ದ 'ಬಸ್ಸು ಪ್ರಯಾಣದ ಸುಖ ದುಃಖಗಳು' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಈ ಮಾತನ್ನು ಕಂಡಕ್ಟರನು ಪ್ರಯಾಣಿಕರೊಬ್ಬರನ್ನು ಕೇಳಿದರು. ಜನರು ತಮ್ಮ ತಮ್ಮ ಯೋಗ್ಯತಾನುಸಾರ ಸ್ಥಳಗಳನ್ನು ಅಲಂಕರಿಸಿದ ಬಳಿಕ ಟಿಕೇಟ್ ಸಮಾರಂಭ ನಡೆಯುತ್ತದೆ. ಸ್ತ್ರೀ ಪ್ಯಾಸೆಂಜರೊಂದಿಗೆ ದೊಡ್ಡ ಚರ್ಚೆಯೇ ನಡೆಯುತ್ತದೆ ಎಂದು ಹೇಳುವಾಗ ಈ ಮೇಲಿನ ಮಾತು ಬಂದಿದೆ.

2. **"ಕರ್ನಾಟಕದ ಬಗ್ಗೆ ನಿಮ್ಮ ಅಭಿಪ್ರಾಯವೇನು?"**

ಈ ವಾಕ್ಯವನ್ನು **ವೀರೇಂದ್ರ ಸಿಂಪಿ** ಅವರು ಬರೆದಿರುವ 'ಆಯ್ದ ಲಲಿತ ಪ್ರಬಂಧಗಳು' ಎಂಬ ಕೃತಿಯಿಂದ ಆಯ್ದ 'ಬಸ್ಸು ಪ್ರಯಾಣದ ಸುಖ ದುಃಖಗಳು' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಈ ಮಾತನ್ನು ಲೇಖಕರು ಆಂಧ್ರನಾಡಿನ ಮಾತುಗಾರನಿಗೆ ಕೇಳಿದರು. ಒಂದು ಸಾರಿ ಎಲ್ಲಿಯೋ ಪ್ರಾರಂಭವಾದ ಮಾತು ಮತ್ತೆಲ್ಲಿಯೋ ಮುಗಿಯುತ್ತದೆ. ದೇಶದ ಸಮಸ್ಯೆಯ ಮೇಲೆ ನಮ್ಮ ನಮ್ಮ ವೈಯಕ್ತಿಕ ಅಭಿಪ್ರಾಯ ಮಂಡಿಸಿದ ಬಳಿಕ ನಮ್ಮ ಸಮೀಪದ ವಿಷಯವೇ ಬಂತು ನೀವು ದೇಶವೆಲ್ಲ ಸುತ್ತಿದ್ದೀರಿ ಎಂದು ಕೇಳುವಾಗ ಮೇಲಿನ ಮಾತು ಬಂದಿದೆ.

3. ಬಸ್ಸಿನ ನಲ್ವತ್ತು ಮುಖಗಳು ನನ್ನನ್ನು ದಿಟ್ಟಿಸಿ ನೋಡುತ್ತಿದ್ದವು.

ಈ ವಾಕ್ಯವನ್ನು **ವೀರೇಂದ್ರ ಸಿಂಪಿ** ಅವರು ಬರೆದಿರುವ 'ಆಯ್ದ ಲಲಿತ ಪ್ರಬಂಧಗಳು' ಎಂಬ ಕೃತಿಯಿಂದ ಆಯ್ದ 'ಬಸ್ಸು ಪ್ರಯಾಣದ ಸುಖ ದುಃಖಗಳು' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ
ಈ ಮಾತನ್ನು ಲೇಖಕರು ಹೇಳಿದ್ದಾರೆ. ಲೇಖಕರು ಯಾವುದೋ ಬಸ್ಸಿನಲ್ಲಿ ಏರಿ ಟಿಕೇಟೊಂದನ್ನು ಪಡೆದರು. ಬಸ್ಸು ಇನ್ನೇನು ಹೊರಡಬೇಕು ಎಂದಾಗ ತಿಳಿದು ಬಂತು ಅವರು ಯಾವ ಊರಿನಿಂದ ಬಂದರೋ ಅಲ್ಲಿಗೇ ಹೊರಟಿತ್ತು. ಆ ಬಸ್ಸಿನ ಕಂಡಕ್ಟರನಿಗೆ ಹೇಳಿ ಬಸ್ಸಿನಿಂದ ಲಗುಬಗೆಯಿಂದ ಇಳಿಯುವಾಗ ಈ ಮೇಲಿನ ಮಾತು ಬಂದಿದೆ.

**3. ಭಾಷಾಭ್ಯಾಸ :**

**ಅ) ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರು ತಿಳಿಸಿರಿ.**

1. ಸ್ವೇಚ್ಛಾಚಾರ = ಸ್ವೇಚ್ಛಾ + ಆಚಾರ – ಸವರ್ಣದೀರ್ಘಸಂಧಿ
2. ಅಷ್ಟಿಷ್ಟು = ಅಷ್ಟು + ಇಷ್ಟು – ಲೋಪಸಂಧಿ
3. ಯೋಗ್ಯತಾನುಸಾರ=ಯೋಗ್ಯತಾ + ಅನುಸಾರ– ಸವರ್ಣದೀರ್ಘಸಂಧಿ
4. ಮಂಗಳಾರತಿ = ಮಂಗಳ + ಆರತಿ –ಸವರ್ಣದೀರ್ಘಸಂಧಿ

**ಆ) ಕೆಳಗಿನ ಪದಗಳಿಗೆ ವಿರುದ್ಧಾರ್ಥ ಬರೆಯಿರಿ.**

ಪ್ರತ್ಯಕ್ಷ x ಅಪ್ರತ್ಯಕ್ಷ, ಸ್ವರ್ಗ x ನರಕ, ನೀರಸ x ರಸ, ಸ್ವಾರ್ಥ x ನಿಸ್ವಾರ್ಥ, ಅಪಮಾನ xಮಾನ,
ಅನಿರೀಕ್ಷಿತ x ನಿರೀಕ್ಷಿತ, ದುರ್ಬುದ್ಧಿ x ಸುಬುದ್ದಿ, ಆಸಕ್ತಿ x ನಿರಾಸಕ್ತಿ, ಸಾಮಾನ್ಯ x ಅಸಾಮಾನ್ಯ.

**ಇ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.**

1. ಸಾತ್ವಿಕ: ನಾವು ಸಾತ್ವಿಕ ಗುಣವನ್ನು ರೂಢಿಸಿಕೊಳ್ಳಬೇಕು.
2. ಆರ್ತಸ್ವರ: ಗಿಳಿಯು ಆರ್ತಸ್ವರದಿಂದ ಕೂಗಿತು.
3. ಏಕತಾನತೆ : ನಾವು ಹಾಡುವಾಗ ಏಕತಾನತೆ ಬದಲಾಯಿಸಬೇಕು.
4. ಗಂಡಾಂತರ: ಅತಿವೃಷ್ಟಿಯಿಂದ ಬಹಳ ಗಂಡಾತರವಾಯಿತು.
5. ಉಪಾಸಕ : ನಾವು ದೇವರ ಉಪಾಸಕರಾಗಬೇಕು.
6. ಉದಾತ್ತ : ನಾವು ಉದಾತ್ತ ವ್ಯಕ್ತಿಗಳ ಆದರ್ಶಗಳನ್ನು ಪಾಲಿಸಬೇಕು.

**ಈ) ಕೊಟ್ಟಿರುವ ಪದಗಳಿಗೆ ತತ್ಸಮ-ತದ್ಭವ ರೂಪಗಳನ್ನು ಬರೆಯಿರಿ.**

ನಕಾಶ– ನಕಾಸೆ, ಕ್ಷಣ–ಚಣ, ಸ್ಥಾನ–ತಾಣ, ಮೊಗ–ಮುಖ, ಆಶೆ–ಆಸೆ, ಪ್ರಯಾಣ– ಪಯಣ

ಉ) ಕೊಟ್ಟಿರುವ ವಾಕ್ಯಗಳಲ್ಲಿ ಕರ್ತೃ, ಕರ್ಮ ಹಾಗೂ ಕ್ರಿಯಾ ಪದಗಳನ್ನು ಗುರುತಿಸಿರಿ.

| ಕ್ರ.ಸಂ. | ಕರ್ತೃಪದ | ಕರ್ಮಪದ | ಕ್ರೀಯಾಪದ |
|---|---|---|---|
| 1. | ಕಂಡಕ್ಟರನು | ತಲೆಗಳನ್ನು | ಎಣಿಸುತ್ತಾನೆ. |
| 2. | ತೇನಸಿಂಗ್ | ಎವರೆಸ್ಟನ್ನು | ಏರಿದನು. |

ಊ) ಕೊಟ್ಟಿರುವ ಅನ್ಯ ದೇಶೀಯ ಪದಗಳಿಗೆ ಕನ್ನಡದ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಕಂಡಕ್ಟರ್– ನಿರ್ವಾಹಕ, ಡ್ರೈವ್ವರ– ಚಾಲಕ, ಲಾಯಿಟ– ದೀಪ, ಝೀರೋ–ಶೂನ್ಯ, ಹೀರೋ– ನಾಯಕ, ಟಿಕೇಟ್ – ಚೀಟಿ, ಕ್ಯೂ – ಸರದಿ, ಷರ್ಟು– ಅಂಗಿ, ಟ್ರಂಕು– ಪಟ್ಟಿಗೆ, ಪ್ಯಾಸೆಂಜರ್– ಪ್ರಯಾಣಿಕ.

**4. ಸೈದ್ಧಾಂತಿಕ ವ್ಯಾಕರಣ :**

**ವಿಭಕ್ತಿಗಳು ಪ್ರತ್ಯಯಗಳು :**

| ವಿಭಕ್ತಿ ಸೂಚಕ | ವಿಭಕ್ತಿಪ್ರತ್ಯಯ | ಕಾರಕಾರ್ಥ | ನಾಮಪದ |
|---|---|---|---|
| ಪ್ರಥಮಾ | ಉ | ಕರ್ತೃ | ಮರವು |
| ದ್ವಿತೀಯಾ | ಅನ್ನು | ಕರ್ಮ | ಮರವನ್ನು |
| ತೃತೀಯಾ | ಇಂದ | ಕರಣ (ಸಾಧನ) | ಮರದಿಂದ |
| ಚತುರ್ಥೀ | ಕೆ,ಗೆ,ಇಕೆ | ಸಂಪ್ರದಾನ (ಕೊಡುವಿಕೆ) | ಮರಕ್ಕೆ |
| ಪಂಚಮೀ | ದೆಸೆಯಿಂದ | ಅಪಾದಾನ (ಅಗಲುವಿಕೆ) | ಮರದ ದೆಸೆಯಿಂದ |
| ಷಷ್ಠೀ | ಅ | ಸಂಬಂಧ | ಮರದ |
| ಸಪ್ತಮೀ | ಅಲ್ಲಿ | ಅಧಿಕರಣ (ಆಧಾರವಾಗಿರುವುದು) | ಮರದಲ್ಲಿ |

## 5. ಉರುಸುಗಳಲ್ಲಿ ಭಾವೈಕ್ಯತೆ – ದಸ್ತಗೀರ ಅಲ್ಲೀಭಾಯಿ

**ಕೃತಿಕಾರರ ಪರಿಚಯ :**

- **ದಸ್ತಗೀರ ಅಲ್ಲೀಭಾಯಿ** ಅವರು ಧಾರವಾಡ ಜಿಲ್ಲಾ, ನವಲಗುಂದ ತಾಲ್ಲೂಕು, ಸೊಟಕನಾಳ ಗ್ರಾಮದಲ್ಲಿ 1952 ರಲ್ಲಿ ಜನಿಸಿದರು.
- ಇವರು ಸಕಾಲಿಕ, ನನೆ ನೆನೆದು, ದಣಿವು ಕಾಣದ ಪದಗಳು, ಮೊಹರಂ ಪದಗಳು, ಹೆಜ್ಜೆ ಪದಗಳು, ಕಥಾ ಸಂಚಯ, ಉತ್ತರ ಕರ್ನಾಟಕದ ಜನಪದ ಒಡಪುಗಳು – ಮುಂತಾದ ಕೃತಿಗಳನ್ನು ಬರೆದಿದ್ದಾರೆ.
- ಪ್ರಸ್ತುತ ಗದ್ಯ ಭಾಗವನ್ನು **'ಮುಸ್ಲೀಮರ ಹಬ್ಬ ಮತ್ತು ಉರುಸುಗಳು'** ಕೃತಿಯಿಂದ ಆರಿಸಲಾಗಿದೆ.

**ಟಿಪ್ಪಣಿಗಳು :**

1. **ಉರುಸು :** ಮಹಮ್ಮದೀಯ ಸಾಧುಗಳ ಪುಣ್ಯತಿಥಿ ಹಾಗೂ ಜಾತ್ರೆ. ಕರ್ನಾಟಕದ ಪ್ರತಿಯೊಂದು ದರ್ಗಾ (ಗೋರಿ) ಗಳಲ್ಲಿ ಧಾರ್ಮಿಕ ಜಾತ್ರೆ ನಡೆಯುತ್ತದೆ. ಇದು ಎಲ್ಲಾ ಮುಸ್ಲಿಂ ಬಾಂಧವರನ್ನು ಒಗ್ಗೂಡಿಸುವ ಉತ್ಸವವಾಗಿದೆ.

2. **ದರಗಾ :** ಮುಸಲ್ಮಾನ ಸಂತರ ಗೋರಿ ಇರುವ ಪವಿತ್ರ ಸ್ಥಳವಾಗಿದೆ. ಇಲ್ಲಿ ಪ್ರತಿದಿನ ಫಾತೆಹಾ (ಪೂಜೆ) ನಡೆಯುತ್ತದೆ. ಇಲ್ಲಿಗೆ ಅನ್ಯ ಧರ್ಮೀಯರು ತಮ್ಮ ಕಷ್ಟಪರಿಹಾರಗಳಿಗೆ ಹರಕೆ ತೀರಿಸಲು ಬರುತ್ತಾರೆ.

3. **ಕವ್ವಾಲಿ :** ಮುಸ್ಲಿಂ ಧರ್ಮದಲ್ಲಿ ದರಗಾಗಳ ಮುಂದೆ ನಡೆಸುವ ಸಾಂಸ್ಕೃತಿಕ ಕಾರ್ಯಕ್ರಮವಾಗಿದೆ. ಮಹಮ್ಮದೀಯ ಸಾಧು ಸಂತರ ಗೋರಿಗಳ ಎದುರು ಗಂಧದ ಮೆರವಣಿಗೆ ಹೋಗುವ ಸಂದರ್ಭದಲ್ಲಿ ಅತ್ಯಂತ ಭಕ್ತಿ ಭಾವದಿಂದ ಹಾಡುವ ಗೀತೆಗಳು.

**1. ಪದಗಳ ಅರ್ಥ :**

**ಉರುಸು** – ಮಹಮ್ಮದೀಯ ಸಾಧುಗಳ ಪುಣ್ಯತಿಥಿ.
**ಕುಂದಣ** – ಚಿನ್ನದಲ್ಲಿ ಹರಳು ಕೂಡಿಸುವ ಕೆಲಸ
**ಗ್ಯಾರವಿ** – ಇಸ್ಲಾಂ ಮಾಸದ ಹೆಸರು.
**ದರಗಾ** – ಮುಸಲ್ಮಾನ ಸಂತರ ಗೋರಿ ಇರುವ ಪವಿತ್ರ ಸ್ಥಳ.
**ಪುರಾವೆ** – ಸಾಕ್ಷಿ; ರುಜುವಾತು.
**ಮಹಾಪೂರ** – ದೊಡ್ಡ ಪ್ರವಾಹ
**ಫಾತೆಹಾ** – ಮುಸಲ್ಮಾನ ಸಂತರ ಅನುಗ್ರಹಕ್ಕೆ ನಡೆಸುವ ಪೂಜೆ
**ಕವ್ವಾಲಿ** – ಮಹ್ಮದೀಯ ಸಾಧುಗಳ ಮೇಲೆ ಹಾಡುವ ಭಕ್ತಿ ಹಾಗೂ ಶೌರ್ಯಗೀತೆಗಳು
**ಕೂಲಂಕಷ**– ಸಮಗ್ರವಾದ
**ಮಷಾಲ್**– ದೀವಟಿಗೆ; ಪಂಜು.
**ಝಿಯಾರತ್** – ದರ್ಶನ; ಭೇಟಿ.
**ತಬರ್ರುಕ್** – ಪ್ರಸಾದ
**ಭಾವೈಕ್ಯತೆ** – ಒಂದೇ ಭಾವನೆ.
**ಶಾಮೀಲು** – ಒಂದಾಗು
**ಸಂದಲ್** – ಶ್ರೀಗಂಧದ ಮೆರವಣಿಗೆ

**ಅಭ್ಯಾಸ**

**2. ಪ್ರಶ್ನೆಗಳು :**

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಉರುಸುಗಳಲ್ಲಿ ಯಾವ ಧಾರ್ಮಿಕ ಸಂಸ್ಕೃತಿಯ ಮಿಲನವಿದೆ?
ಉರುಸುಗಳಲ್ಲಿ ಹಿಂದೂ ಸಂಸ್ಕೃತಿ ಮತ್ತು ಮುಸ್ಲಿಂ ಸಂಸ್ಕೃತಿಗಳ ಮಧುರ ಮಿಲನವಿದೆ.
2. ಉರುಸುಗಳು ಯಾವುದರ ಹೆಗ್ಗುರುತು?
ಉರುಸುಗಳು ಭಾವೈಕ್ಯದ ಹೆಗ್ಗುರುತು.
3. ಅಜ್ಮೀರ್ ಮತ್ತು ದಿಲ್ಲಿಯ ದರಗಾದ ವಿಶೇಷತೆಗಳೇನು?
ಅಜ್ಮೀರಿನ ಹಖ್ವಾಜಾ ಮೊಯಿನುದ್ದೀನ್ ಚಿಸ್ತಿ, ದಿಲ್ಲಿಯ ಹಶೇಖ ನಿಜಾಮುದ್ದೀನ್ ಔಲಿಯಾರವರ ಉರುಸುಗಳಲ್ಲಿ ಮುಸ್ಲೀಮರಂತೆ ಹಿಂದೂಗಳು ಉತ್ಸಾಹದಿಂದ ಪಾಲ್ಗೊಂಡು ಹರಕೆ ಸಲ್ಲಿಸುವುದು ವಿಶೇಷವಾಗಿದೆ.
4. ಮಕಾನಪುರದ ಉರುಸಿನಲ್ಲಿ ಕೆಂಡ ತುಳಿಯುವ ಸಂಪ್ರದಾಯ ಹೇಗೆ ಆಚರಣೆಗೆ ಬಂದಿತು?
ಮಕಾನಪುರದ ಉರುಸಿನಲ್ಲಿ ಕೆಂಡ ತುಳಿಯುವ ಸಂಪ್ರದಾಯ ಹಿಂದೂ ಸಂಸ್ಕೃತಿಯ ಗಾಢ ಪ್ರಭಾವದಿಂದ ಬಂದುದಾಗಿದೆ.

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಮುಂಬಯಿ ಹಾಜಿಮಲಂಗ ದರಗಾದಲ್ಲಿ ಹಿಂದೂ ಮುಸ್ಲೀಂ ಸೌಹಾರ್ದತೆ ಯಾವ ರೀತಿ ಇದೆ?
ಮುಂಬಯಿಯ ಹಾಜಿಮಲಂಗ ಬಾಬಾ ದರಗಾದ ಆಡಳಿತವನ್ನು ಒಂದು ಬ್ರಾಹ್ಮಣ ಕುಟುಂಬ ನಡೆಸುತ್ತದೆ. ದರಗಾದಲ್ಲಿ ಮುಸ್ಲಿಂ ಸಂಪ್ರದಾಯದ ಝಿಯಾರತ್‌ನಂತೆ ಒಮ್ಮೆ ಫಾತೆಹಾ ನಡೆದರೆ ಇನ್ನೊಂದು ಹೊತ್ತಿನಲ್ಲಿ ಹಿಂದುಗಳು ಲೋಬಾನದ ಹೊಗೆ ಹಾಕಿ ಪೂಜೆ ಮಾಡುತ್ತಾರೆ.
2. ಗುಲಬರ್ಗಾದ ಖ್ವಾಜಾ ಬಂದಾನವಾಜರ ದರಗಾದ ವಿಶೇಷತೆಗಳೇನು?
ಗುಲಬರ್ಗಾದ ಖ್ವಾಜಾ ಬಂದಾನವಾಜರ ದರಗಾ ಧರ್ಮ ಸಮನ್ವಯ ದೃಷ್ಟಿಗೆ ಪುರಾವೆಯಾಗಿದೆ. ಉರುಸಿನ ಹಿಂದಿನ ದಿನ ನಡೆಯುವ ಸಂದಲ್ ಮೆರವಣಿಗೆಯಲ್ಲಿ ಮಷಾಲ್ (ದೀವಟಿಗೆ) ಹಿಡಿಯುವ ಹಕ್ಕು ಹಿಂದು ಭಕ್ತರದಾಗಿದೆ. ಉರುಸಿನ ದಿನ ಹಿಂದುಗಳು ಮುಸ್ಲೀಮರೊಂದಿಗೆ ಶಾಮೀಲಾಗಿ ಭಕ್ತಿ ಭಾವಾವೇಶದಿಂದ ಹರಕೆ ಸಲ್ಲಿಸುವುದನ್ನು ನೋಡಿದಾಗ ಮೈಮನ ಪುಳಕಿತವಾಗದಿರವು.
3. ಮುಳುಬಾಗಿಲ ಪ್ರಾಂತದ ಉರುಸಿನಲ್ಲಿ ಪ್ರದರ್ಶನಗೊಳ್ಳುವ ಕಾರ್ಯಕ್ರಮಗಳಾವುವು?
ಮುಳುಬಾಗಿಲ ಪ್ರಾಂತದ ಹ ಬಾಬಾ ಹೈದರಲಿ ಶಾ ಅವರ ಉರುಸಿನಲ್ಲಿ ಪ್ರದರ್ಶನಗೊಳ್ಳುವ ಕತ್ತಿವರಸೆ, ದೊಣ್ಣೆವರಸೆ, ಕುಸ್ತಿ, ಕವ್ವಾಲಿ ಕಾರ್ಯಕ್ರಮಗಳು ಕೋಮು ಸಾಮರಸ್ಯದ ಪ್ರತೀಕಗಳಾಗಿವೆ. ಗ್ಯಾರವಿ ತಿಂಗಳಿನಲ್ಲಿ ನಡೆಯುವ ಹ ಮೆಹಬೂಬ ಸುಬಹಾನಿಯವರ ಉರುಸಿನಲ್ಲಿ ಜನಪದ ಕಲೆಗಳ ಮಹಾಪೂರವೇ ಹರಿದುಬರುವುದನ್ನು ನೋಡಬಹುದು. ರಿವಾಯಿತ ಪದ ಮತ್ತು ಹೆಜ್ಜೆ ಕುಣಿತ ಸ್ಪರ್ಧೆಗಳು ಹಿಂದೂ ಮುಸ್ಲೀಮರನ್ನು ಒಂದುಗೂಡಿಸುವ ಪ್ರಮುಖ ಕೊಂಡಿಯಾಗಿವೆ.
4. ಇಳಕಲ್ಲಿನ ಮುರ್ತುಜಾ ಖಾದ್ರಿಯವರ ಉರುಸಿನಲ್ಲಿ ಹಿಂದೂ ಭಕ್ತರಿಗೆ ಏನೆಲ್ಲಾ ಗೌರವದ ಸ್ಥಾನಗಳು ಲಭಿಸಿವೆ?
ಇಳಕಲ್ಲಿನ ಮುರ್ತುಜಾ ಖಾದ್ರಿಯವರ ಉರುಸಿಗೆ ಸೇರುವ ಮುನ್ನಾಲ್ಕು ಲಕ್ಷ ಜನರಲ್ಲಿ ಹಿಂದುಗಳ ಸಂಖ್ಯೆ ಹೆಚ್ಚಿನದಾಗಿದೆ. ಉರುಸು ನಡೆಸುವ ದರ್ಗಾ ಸಮಿತಿಯ ಅಧ್ಯಕ್ಷರು, ಸದಸ್ಯರು, ಹಿಂದೂಗಳೇ ಆಗಿರುವುದು ಮತ್ತು ಉರುಸಿನ ದಿನ ಸಲ್ಲಿಸುವ ಗಂಧ ಪುಷ್ಪಾದಿಗಳ ಸೇವೆಯೂ ಗೌಡ, ಕುಲಕರ್ಣಿ, ಚವ್ಹಾಣ ಮನೆತನದವರಾಗಿರುವುದು ಇಲ್ಲಿನ ವೈಶಿಷ್ಟ್ಯವಾಗಿದೆ.

**ಇ) ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಉರುಸುಗಳು ಹಿಂದೂ ಹಾಗೂ ಮುಸಲ್ಮಾನರ ಭಾವೈಕ್ಯತೆಯ ಸಂಕೇತವಾಗಿವೆ ಎಂಬುದನ್ನು ಉದಾಹರಣೆಗಳೊಂದಿಗೆ ವಿವರಿಸಿ.

ಭಾರತೀಯರು ವಿವಿಧ ಹಬ್ಬಗಳನ್ನು ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಆಚರಿಸುವಂತೆ ಜಾತ್ರೆಗಳನ್ನು ಮತ್ತು ಉರುಸುಗಳನ್ನು ಆಚರಿಸುತ್ತಾರೆ. ಉರುಸುಗಳು ಹಿಂದು ಸಂಸ್ಕೃತಿ ಮತ್ತು ಮುಸ್ಲಿಂ ಸಂಸ್ಕೃತಿಗಳ ಮಧುರ ಮಿಲನದಿಂದ ಹುಟ್ಟಿ ಬೆಳೆದು ಬಂದವುಗಳಾಗಿವೆ. ಪ್ರಾದೇಶಿಕವಾಗಿ ಪ್ರಚಲಿತವಿರುವ ಉರುಸುಗಳ ಆಚರಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ ಭಾವೈಕ್ಯದ ಹೆಗ್ಗುರುತುಗಳು ಸ್ಪಷ್ಟವಾಗಿ ಗೋಚರಿಸದಿರವು. ಕೆಲವೊಂದು ಉರುಸುಗಳು ಜಾತ್ರೆಗಳಾಗಿ, ಕೆಲವೊಂದು ಜಾತ್ರೆಗಳು ಉರುಸುಗಳಾಗಿ ಬಳಕೆಯಲ್ಲಿವೆ. ಆದರೆ ಜಾತ್ರೆ ಮತ್ತು ಉರುಸುಗಳು ಹಿಂದೂ–ಮುಸ್ಲಿಂ ಭಾವೈಕ್ಯದ ಪವಿತ್ರ ಕ್ಷೇತ್ರಗಳಾಗಿವೆಯೆಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ.

ಅಜ್ಮೇರಿನ ಹಜ್ವಾಜಾ ಮೊಯಿನುದ್ದೀನ್ ಚಿಸ್ತಿ, ದಿಲ್ಲಿಯ ಹಶೇಖ ನಿಜಾಮುದ್ದೀನ್ ಔಲಿಯಾರವರ ಉರುಸುಗಳಲ್ಲಿ ಮುಸ್ಲೀಮರಂತೆ ಹಿಂದೂಗಳು ಉತ್ಸಾಹದಿಂದ ಪಾಲ್ಗೊಂಡು ಹರಕೆ ಸಲ್ಲಿಸುತ್ತಾರೆ. ತೆಬರ್ರುಕ್ (ಪ್ರಸಾದ) ಸ್ವೀಕರಿಸಿ ಪುನೀತರಾದೆವೆಂದು ತೃಪ್ತಿಗೊಳ್ಳುತ್ತಾರೆ.

ಮಕಾನಪುರದ ಜಿಂದೇ ಷಾ ಮದಾರ ಉರುಸಿನಲ್ಲಿ ಹಿಂದೂ–ಮುಸ್ಲೀಮರು ಚಿಕ್ಕಮಕ್ಕಳಿಗೆ ಅಂಟಿದ ರೋಗ ರುಜಿನಗಳಿಂದ ಮುಕ್ತಗೊಳಿಸಲು ಬಂಗಾರ ಅಥವಾ ಬೆಳ್ಳಿಯ ಹಾರವನ್ನು ಕೊರಳಲ್ಲಿ ಹಾಕಲು ಹಿಂದೆಮುಂದೆ ನೋಡುವುದಿಲ್ಲ. ಉರುಸಿನ ದಿನ ನಡೆಯುವ ಕೆಂಡ ತುಳಿಯುವ ಸಂಪ್ರದಾಯ ಹಿಂದೂ ಸಂಸ್ಕೃತಿಯ ಗಾಢ ಪ್ರಭಾವದಿಂದ ಬಂದುದಾಗಿದೆ.

2. ಹಿಂದುಗಳೊಂದಿಗೆ ಮುಸ್ಲೀಮರೂ ಸೇರಿಕೊಂಡು ಆಚರಿಸುವ ಉತ್ತರ ಕರ್ನಾಟಕದ ಜಾತ್ರೆಗಳಾವುವು? ಮತ್ತು ಅವುಗಳ ವಿಶೇಷತೆಗಳೇನು?

ಲಕ್ಷ್ಮೀಶ್ವರದ ದೂಧ ಪೀರಾರ ಉರುಸಿನಲ್ಲಿ ಹೊರಡುವ ಸಂದಲ್ ಮೆರವಣಿಗೆ ಹಿಂದೂ ಬಾಂಧವರ ಮನೆಯಿಂದ ಪ್ರಾರಂಭವಾಗುವುದು ಭಾವೈಕ್ಯದ ಪ್ರತೀಕವಾಗಿದೆ. ಇಳಕಲ್ಲಿನ ಮುರ್ತುಜಾ ಖಾದ್ರಿಯವರ ಉರುಸಿಗೆ ಸೇರುವ ಮುರ್‍ನಾಲ್ಕು ಲಕ್ಷ ಜನರಲ್ಲಿ ಹಿಂದುಗಳ ಸಂಖ್ಯೆ ಹೆಚ್ಚಿನದಾಗಿದೆ. ಉರುಸು ನಡೆಸುವ ದರ್ಗಾ ಸಮಿತಿಯ ಅಧ್ಯಕ್ಷರು,ಸದಸ್ಯರು, ಹಿಂದೂಗಳೇ ಆಗಿರುವುದು ಮತ್ತು ಉರುಸಿನ ದಿನ ಸಲ್ಲಿಸುವ ಗಂಧ ಪುಷ್ಪಾದಿಗಳ ಸೇವೆಯೂ ಗೌಡ, ಕುಲಕರ್ಣಿ, ಚವ್ಹಾಣ ಮನೆತನದವರಾಗಿರುವುದು ಇಲ್ಲಿನ ವೈಶಿಷ್ಟ್ಯವಾಗಿದೆ.

ಧಾರವಾದ ಜಿಲ್ಲೆಯ ನವಲಗುಂದ ತಾಲಗಲೂಕಿನ ಯಮನೂರಿನ ಚಾಂಗದೇವರ ಜಾತ್ರೆ, ಶಿರಹಟ್ಟಿಯ ಫಕೀರಸ್ವಾಮಿ ಜಾತ್ರೆ, ಗುಲಬರ್ಗಾ ಜಿಲ್ಲೆಯ ಸುರಪುರ ತಾಲ್ಲೂಕಿನ ತಿಂಥಿಣಿಯ ಮೋನಪ್ಪಯ್ಯನ ಜಾತ್ರೆ ಮತ್ತುಬೇಳಗಾಂವ ಜಿಲ್ಲೆಯ ಗೋಕಾಕ ತಾಲೂಕಿನ ಸಾವಳಗಿ ಜಾತ್ರೆ ಮುಂತಾದವು ಹಿಂದೂಗಳಿಗೆ ತಮ್ಮ ಬದುಕಿನ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಪುಣ್ಯಕ್ಷೇತ್ರಗಳಾಗಿರುವಂತೆ ಮುಸ್ಲೀಮರಿಗೂ ಆಗಿರುವುದು ಇವುಗಳ ವೈಶಿಷ್ಟ್ಯ.

**ಈ) ಸಂದರ್ಭದೊಡನೆ ವಿವರಿಸಿರಿ.**

1. ಸಂದಲ್ ಮೆರವಣಿಗೆಯಲ್ಲಿ ಮಷಾಲ್ ಹಿಡಿಯುವ ಹಕ್ಕು ಹಿಂದು ಭಕ್ತರದಾಗಿದೆ.

ಈ ವಾಕ್ಯವನ್ನು **ದಸ್ತಗೀರ ಅಲ್ಲೀಭಾಯಿ** ಅವರು ಬರೆದಿರುವ **'ಮುಸ್ಲೀಮರ ಹಬ್ಬ ಮತ್ತು ಉರುಸುಗಳು'** ಎಂಬ ಕೃತಿಯಿಂದ ಆಯ್ದ **'ಉರುಸುಗಳಲ್ಲಿ ಭಾವೈಕ್ಯತೆ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಲೇಖಕರು ಹೇಳಿದ್ದಾರೆ. ಉರುಸಿನ ದಿನ ಹಿಂದೂಗಳು ಮುಸ್ಲೀಮರೊಂದಿಗೆ ಶಾಮೀಲಾಗಿ ಭಕ್ತಿ ಭಾವಾವೇಶದಿಂದ ಹರಕೆ ಸಲ್ಲಿಸುವುದನ್ನು ನೋಡಿದಾಗ ಭಾವೈಕ್ಯದ ಹೆಗ್ಗುರುತುಗಳು ಸ್ಪಷ್ಟವಾಗಿ ಗೋಚರಿಸದಿರವು ಎಂಬ ಅಂಶ ಇಲ್ಲಿ ವ್ಯಕ್ತವಾಗಿದೆ.

2. ಚಿನ್ನಕ್ಕೆ ಕುಂದಣ ಕೂಡಿಸಿದಂತಾಗುತ್ತದೆ.

ಈ ವಾಕ್ಯವನ್ನು **ದಸ್ತಗೀರ ಅಲ್ಲೀಭಾಯಿ** ಅವರು ಬರೆದಿರುವ **'ಮುಸ್ಲೀಮರ ಹಬ್ಬ ಮತ್ತು ಉರುಸುಗಳು'** ಎಂಬ ಕೃತಿಯಿಂದ ಆಯ್ದ **'ಉರುಸುಗಳಲ್ಲಿ ಭಾವೈಕ್ಯತೆ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಲೇಖಕರು ಹೇಳಿದ್ದಾರೆ. ಹಿಂದೂ–ಮುಸ್ಲೀಮರನ್ನು ಒಂದುಗೂಡಿಸುವ, ಮತೀಯ ಸಾಮರಸ್ಯವನ್ನು ಗಟ್ಟಿಗೊಳಿಸುವ, ಕೋಮು ಸೌಹಾರ್ದತೆಯನ್ನು ಕಾಪಾಡಿಕೊಂಡು ಬರುವ ಉರುಸುಗಳು ಆದರ್ಶ ಭಾರತದ ಏಳಿಗೆಗೆ ಅನಿವಾರ್ಯವಾದ ಮುಖ್ಯ ಸೂತ್ರಗಳಾಗಿವೆಯೆಂದರೆ ಚಿನ್ನಕ್ಕೆ ಕುಂದಣ ಕೂಡಿಸಿದಂತಾಗುತ್ತದೆ. ಎಂಬ ಅಂಶ ಇಲ್ಲಿ ವ್ಯಕ್ತವಾಗಿದೆ.

**3. ಭಾಷಾಭ್ಯಾಸ :**

**ಅ. ಕೆಳಗಿನ ಪದಗಳನ್ನು ಬಿಡಿಸಿ ಬರೆದು ಸಂಧಿಯ ಹೆಸರು ತಿಳಿಸಿರಿ.**

1. ಭಾವೈಕ್ಯ = ಭಾವ + ಐಕ್ಯ – ವೃದ್ಧಿಸಂಧಿ
2. ಲಕ್ಷ್ಮೀಶ್ವರ = ಲಕ್ಷ್ಮೀ + ಈಶ್ವರ – ಸವರ್ಣದೀರ್ಘಸಂಧಿ
3. ಒಂದುಗೂಡಿಸು = ಒಂದು + ಕೂಡಿಸು – ಆದೇಶಸಂಧಿ

4. ಮೂರ್ನಾಲ್ಕು = ಮೂರು + ನಾಲ್ಕು – ಲೋಪಸಂಧಿ

**ಆ. ಕೆಳಗಿನ ಪದಗಳಿಗೆ ವಿರುದ್ಧಾರ್ಥ ಬರೆಯಿರಿ.**

ಧರ್ಮ x ಅಧರ್ಮ, ಉತ್ಸಾಹ x ನಿರುತ್ಸಾಹ, ಗೋಚರ x ಅಗೋಚರ, ಪುಣ್ಯ x ಪಾಪ.

**ಇ. ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.**

1. ಭಾವೈಕ್ಯತೆ : ಉರುಸುಗಳು ಭಾವೈಕ್ಯದ ಹೆಗ್ಗುರುತುಗಳಾಗಿವೆ.
2. ಪುಳಕಿತ : ದೇವರಿಗೆ ಹರಕೆ ಸಲ್ಲಿಸುವುದನ್ನು ನೋಡಿದಾಗ ಮೈಮನ ಪುಳಕಿತವಾಗುತ್ತದೆ.
3. ಪುನೀತ : ನಾವು ದೇವರ ಪ್ರಸಾದ ಸ್ವೀಕರಿಸಿ ಪುನೀತರಾದೆವು.
4. ಹೆಗ್ಗುರುತು : ಉರುಸುಗಳು ಭಾವೈಕ್ಯದ ಹೆಗ್ಗುರುತುಗಳು.

**4. ಸೈದ್ಧಾಂತಿಕ ವ್ಯಾಕರಣ :**

**ಕ್ರಿಯಾಪದ :**

**ಉದಾ :** ಮಾಡುತ್ತಾನೆ, ಮಾಡಿದನು, ಮಾಡುವನು, ಮಾಡಲಿ, ಮಾಡನು – ಈ ಎಲ್ಲಾ ಕ್ರಿಯಾಪದಗಳ ಮೂಲರೂಪ 'ಮಾಡು' ಆಗಿದೆ.

**'ಕ್ರಿಯಾಪ್ರಕೃತಿ'** ಅಥವಾ **'ಧಾತು'** : ಕ್ರಿಯಾಪದದ ಮೂಲರೂಪವನ್ನು **'ಕ್ರಿಯಾಪ್ರಕೃತಿ'** ಅಥವಾ **'ಧಾತು'** ಎನ್ನುವರು. ಧಾತುಗಳಲ್ಲಿ ಎರಡು ವಿಧ. ಅವುಗಳೆಂದರೆ,

**1. ಮೂಲಧಾತುಗಳು :** ಮಾಡು, ತಿನ್ನು, ಹೋಗು, ಬರು, ಓದು, ಓಡು, ಮುಚ್ಚು, ನೋಡು, ಒಪ್ಪು, ಏರು, ಇಳಿ, ಬೀಳು, ಬರೆ, ಹಿಗ್ಗು, ತೂಗು, ಮಲಗು, ಏಳು,
ನಡೆ, ಈಜು, ಮುಚ್ಚು, ಬೆಳಗು – ಇತ್ಯಾದಿ.

**2. ಪ್ರತ್ಯಯಾಂತ ಧಾತು ಅಥವಾ ಸಾಧಿತಧಾತುಗಳು**

ಉದಾ: **ಪ್ರಕೃತಿ** + **'ಇಸು' ಪ್ರತ್ಯಯ** = **ಸಾಧಿತ ಧಾತು** – **ಕ್ರಿಯಾಪದ**

ಕನ್ನಡ + ಇಸು = ಕನ್ನಡಿಸು – ಕನ್ನಡಿಸಿದನು.
ಧಗಧಗ+ ಇಸು = ಧಗಧಗಿಸು – ಧಗಧಗಿಸುತ್ತದೆ.
ದುಃಖ + ಇಸು = ದುಃಖಿಸು – ದುಃಖಿಸುವನು.

**ಸಕರ್ಮಕ ಮತ್ತು ಅಕರ್ಮಕ ಧಾತುಗಳು :**

ಕರ್ಮಪದವನ್ನು ಅಪೇಕ್ಷಿಸುವ ಧಾತುಗಳನ್ನು **'ಸಕರ್ಮಕ ಧಾತುಗಳು'** ಎಂತಲೂ, ಕರ್ಮಪದವನ್ನು ಅಪೇಕ್ಷಿಸದ ಧಾತುಗಳನ್ನು **'ಅಕರ್ಮಕ ಧಾತುಗಳು'** ಎಂತಲೂ ಕರೆಯಲಾಗುತ್ತದೆ.

**1. ಸಕರ್ಮಕ ಧಾತುಗಳು** : ರಕ್ಷಿಸು, ಕಟ್ಟು, ಓದು, ಮಾಡು, ಉಣ್ಣು, ಕತ್ತರಿಸು, ತೆರೆ, ಸೇರು, ಬಿಡು –
ಈ ಎಲ್ಲಾ ಧಾತುಗಳ ಮುಂದೆ 'ಏನನ್ನು' ಎಂದು ಪ್ರಶ್ನೆ ಹಾಕಿಕೊಂಡರೆ ಯಾವುದಾದರೊಂದು ಉತ್ತರ (ಕರ್ಮಪದ) ಸಿಗುತ್ತದೆ.

**2. ಅಕರ್ಮಕ ಧಾತುಗಳು** : ಮಲಗು, ಓಡು, ಹುಟ್ಟು, ಹೋಗು, ಏಳು, ಸೋರು, ನಾಚು – ಈ ಎಲ್ಲಾ ಧಾತುಗಳ ಮುಂದೆ 'ಏನನ್ನು' ಎಂದು ಪ್ರಶ್ನೆ ಹಾಕಿಕೊಂಡರೆ ಕರ್ಮಪದ ಇರುವುದಿಲ್ಲ.

**1. ವಿಧ್ಯರ್ಥಕ (ವಿಧಿ + ಅರ್ಥ) ಕ್ರಿಯಾಪದ :**

ಆಶೀರ್ವಾದ, ಅಪ್ಪಣೆ, ಆಜ್ಞೆ, ಹಾರೈಕೆ ಇವುಗಳನ್ನು ತೋರುವಾಗ ಧಾತುಗಳಿಗೆ ಆಖ್ಯಾತ ಪ್ರತ್ಯಯಗಳು ಸೇರಿ ವಿಧ್ಯರ್ಥಕ ಕ್ರಿಯಾಪದಗಳು ಆಗುತ್ತವೆ.

ಉದಾ : 1) ದೇವರು ನಿನಗೆ ಒಳ್ಳೆಯದು **ಮಾಡಲಿ.** 2) ಲಕ್ಷ್ಮೀ ಪಾಠವನ್ನು ಗಟ್ಟಿಯಾಗಿ **ಓದಲಿ.**
ಅವರಿಗೆ **ಜಯವಾಗಲಿ.** ಅವನು ಹಾಳಾಗಿ **ಹೋಗಲಿ.**
(ದಪ್ಪಕ್ಷರಗಳಲ್ಲಿ ಅಡಿಗೆರೆದಿರುವ ಪದಗಳು ವಿಧ್ಯರ್ಥಕ ಕ್ರಿಯಾಪದಗಳು.)

**2. ನಿಷೇಧಾರ್ಥಕ ಕ್ರಿಯಾಪದಗಳು :**

ಕ್ರಿಯೆಯು ನಡೆಯಲಿಲ್ಲ ಎಂಬರ್ಥ ತೋರುವಾಗ ಧಾತುಗಳ ಮೇಲೆ ಆಖ್ಯಾತ ಪ್ರತ್ಯಯಗಳು ಸೇರಿದಾಗ ನಿಷೇಧಾರ್ಥಕ ಕ್ರಿಯಾಪದಗಳು ಉಂಟಾಗುತ್ತವೆ.

ಉದಾ : ಅವನು ಅನ್ನವನ್ನು **ತಿನ್ನನು.** ಅವರು ಊರಿಂದ ಇಂದು **ಬಾರರು.**
ಅವಳು ನನ್ನ ಮಾತು **ಕೇಳಳು.** (ದಪ್ಪಕ್ಷರಗಳಲ್ಲಿ ಅಡಿಗೆರೆದಿರುವ ಪದಗಳು ನಿಷೇಧಾರ್ಥಕ ಕ್ರಿಯಾಪದಗಳು.)

**3. ಸಂಭಾವನಾರ್ಥಕ ಕ್ರಿಯಾಪದಗಳು :**

ಉದಾ : ಅವನು ನಾಳೆ **ಬಂದಾನು.** ಚಿನ್ನದ ಬೆಲೆ ಮೇಲಕ್ಕೆ **ಏರೀತು.** ಅನ್ನವನ್ನು ಆತ **ತಿಂದಾನು.**
ಅವನು ಪರೀಕ್ಷೆಯಲ್ಲಿ ಪಾಸು **ಆದಾನು.**(ದಪ್ಪಕ್ಷರಗಳಲ್ಲಿ ಅಡಿಗೆರೆದಿರುವ ಪದಗಳು ಸಂಭಾವನಾರ್ಥಕ ಕ್ರಿಯಾಪದಗಳು.)

## 6. ಪಾಂಡಿತ್ಯದ ಡಿ.ಎಲ್. ನರಸಿಂಹಾಚಾರ್ – ಎಂ. ಎಂ. ಕಲಬುರ್ಗಿ

**ಕೃತಿಕಾರರ ಪರಿಚಯ :**

- **ಡಾ. ಮಲ್ಲಪ್ಪ ಮಡಿವಾಳಪ್ಪ ಕಲಬುರ್ಗಿ** ಅವರು 1938 ರಲ್ಲಿ ವಿಜಯಪುರ ಜಿಲ್ಲೆ, ಸಿಂದಗಿ ತಾಲ್ಲೂಕಿನ ಗುಬ್ಬೇವಾಡದಲ್ಲಿ ಜನಿಸಿದರು.
- ಇವರು ಮಾರ್ಗ, ಶಾಸನಗಳಲ್ಲಿ ಶಿವಶರಣರು, ಕನ್ನಡ ಹಸ್ತಪ್ರತಿ ಶಾಸ್ತ್ರ, ಚೆನ್ನಬಸವಣ್ಣನವರ ವಚನ ಮಹಾಸಂಪುಟ, ಕವಿರಾಜಮಾರ್ಗದ ಪರಿಸರದ ಸಾಹಿತ್ಯ ಮುಂತಾದ ಕೃತಿಗಳನ್ನು ರಚಿಸಿದ್ದಾರೆ.
- ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ, ಕರ್ನಾಟಕ ಸರ್ಕಾರದ ರಾಜ್ಯೋತ್ಸವ ಪ್ರಶಸ್ತಿ ಹಾಗೂ ಪಂಪ ಪ್ರಶಸ್ತಿ ಲಭಿಸಿವೆ.
- ಪ್ರಸ್ತುತ ಲೇಖನವನ್ನು ಅವರ **'ಮಾರ್ಗ–ಸಂಪುಟ 1'** ಕೃತಿಯಿಂದ ಆರಿಸಿದೆ.

**ಅಭ್ಯಾಸ**

**I. ಪದಗಳ ಅರ್ಥ :**

**ಅನುಸಂಧಾನ** – ಪರಿಶೀಲನೆ
**ಉಪಾಯನ** – ಕಾಣಿಕೆ; ಉಡುಗೊರೆ.
**ಕಾರ್ಯತತ್ಪರತೆ** – ಕೆಲಸದಲ್ಲಿ ಶ್ರದ್ಧೆ ತೋರುವುದು.
**ಜಂಗಮ** – ಚಲಿಸುವ; ಚಲನೆಯುಳ್ಳ.
**ತತ್ತರಿಸು** – ನಡುಗು; ಕಂಪಿಸು.
**ತಾಪತ್ರಯ** – ತೊಂದರೆ
**ನಿರ್ವಿಕಾರ** – ವಿಕಾರವಿಲ್ಲದ
**ಮನದಣಿ** – ತೃಪ್ತಿಯಾಗು
**ಸಂಘರ್ಷಣೆ** – ಹೋರಾಟ; ತಿಕ್ಕಾಟ.
**ಸತ್ವ** – ತಿರುಳು; ಸಾರ.
**ಶಿಲ್ಪಿ** – ರೂವಾರಿ; ತೇವರಹಿತ.
**ಹವ್ಯಾಸ** – ಚಟ; ಗೀಳು.
**ಅಶಕ್ಯ** – ಸಾಧ್ಯವಿಲ್ಲ
**ಉಜ್ವಲ** – ಪ್ರಕಾಶಮಾನ; ಶ್ರೇಷ್ಠವಾದ.
**ಕಮ್ಮಟ** – ಟಂಕಸಾಲೆ; ನಾಣ್ಯ ಮುದ್ರಿಸುವ ಕೇಂದ್ರ
**ಕೂರ್ಮ** – ಆಮೆ
**ಜ್ಞಾನೋಪಾಸಕ** – ಜ್ಞಾನವನ್ನು ಆರಾಧಿಸುವವನು
**ತನ್ಮಯತೆ** – ಮಗ್ನತೆ; ಮೈಮರೆ; ತಲ್ಲೀನತೆ.
**ದೌಲತ್ತು** – ಅಹಂಕಾರ; ಅಧಿಕಾರದ ದರ್ಪ.
**ಪರಿವಾರ** – ಬಳಗ
**ಲೀಲೆ** – ಆಟ
**ಸಂಶೋಧನೆ** – ಅನ್ವೇಷಣೆ; ಹುಡುಕಾಟ.
**ಶುಷ್ಕ**– ಒಣಗಿದ; ತೇವ ರಹಿತ.
**ಹರವು** – ವೈಶಾಲ್ಯ; ವಿಸ್ತಾರ.
**ಹಳಿ** – ನಿಂದಿಸು; ತೆಗಳು.

**2. ಪ್ರಶ್ನೆಗಳು :**

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಕನ್ನಡ ಸಾಹಿತ್ಯದಲ್ಲಿ ಡಿ.ಎಲ್.ಎನ್. ಯಾರ ಸ್ಥಾನವನ್ನು ತುಂಬಿದ್ದರು?
ಕನ್ನಡ ಸಾಹಿತ್ಯದಲ್ಲಿ ಡಿ.ಎಲ್.ಎನ್. ತೀ.ನಂ.ಶ್ರೀ ಯವರ ಸ್ಥಾನವನ್ನು ತುಂಬಿದ್ದರು.
2. ಡಿ.ಎಲ್.ಎನ್. ಎಷ್ಟರಲ್ಲಿ ಜನಿಸಿದರು?
ಡಿ.ಎಲ್.ಎನ್. 1906 ರಲ್ಲಿ ಜನಿಸಿದರು.
3. ಯಾರ ಕಮ್ಮಟದಲ್ಲಿ ಡಿ.ಎಲ್.ಎನ್. ಅವರ ವ್ಯಕ್ತಿತ್ವ ರೂಪುಗೊಂಡಿತು?
ಬಿ.ಎಂ.ಶ್ರೀ., ಟಿ.ಎಸ್.ವೆಂಕಣ್ಣಯ್ಯ, ಎ.ಆರ್.ಕೃಷ್ಣಶಾಸ್ತ್ರಿಗಳ ಕಮ್ಮಟದಲ್ಲಿ ಡಿ.ಎಲ್.ಎನ್. ಅವರ ವ್ಯಕ್ತಿತ್ವ ರೂಪುಗೊಂಡಿತು.
4. ವಿದ್ಯಾರ್ಥಿ ಜೀವನದಲ್ಲಿ ಡಿ.ಎಲ್.ಎನ್. ಅವರ ಸಹಪಾಠಿಗಳು ಯಾರು?
ಕುವೆಂಪು, ಡಿ.ಕೆ. ಭೀಮಸೇನರಾವ್, ಕೆ.ವೆಂಕಟರಾಮಪ್ಪ, ಎನ್.ಅನಂತರಂಗಾಚಾರ್ ವಿದ್ಯಾರ್ಥಿ ಜೀವನದಲ್ಲಿ ಡಿ.ಎಲ್.ಎನ್. ಅವರ ಸಹಪಾಠಿಗಳಾಗಿದ್ದರು.
5. ಡಿ.ಎಲ್.ಎನ್. ರಚಿಸಿರುವ ಶಾಸ್ತ್ರಗ್ರಂಥ ಯಾವುದು?
ಡಿ.ಎಲ್.ಎನ್. ರಚಿಸಿರುವ ಶಾಸ್ತ್ರಗ್ರಂಥ 'ಕನ್ನಡ ಗ್ರಂಥಸಂಪಾದನೆ'
6. ಯಾವ ಕವಿಯನ್ನು ಡಿ.ಎಲ್.ಎನ್. ಅವರು ಮೆಚ್ಚಿದ್ದರು?
ಹರಿಹರ ಕವಿಯನ್ನು ಡಿ.ಎಲ್.ಎನ್. ಅವರು ಮೆಚ್ಚಿದ್ದರು.
7. ಡಿ.ಎಲ್.ಎನ್. ಅವರ ವಿಮರ್ಶಾ ಲೇಖನಗಳಾವುವು?
ಪುಷ್ಪದಂತ ಪುರಾಣ, ಅಗ್ಗಳದೇವ, ರುದ್ರಭಟ್ಟ, ಕುಮಾರವ್ಯಾಸನ ಕರ್ಣ ಇವು ಡಿ.ಎಲ್.ಎನ್. ಅವರ ವಿಮರ್ಶಾ ಲೇಖನಗಳು

8. ಡಿ.ಎಲ್.ಎನ್. ಅವರ ಸಾಹಿತ್ಯ ಸಂಶೋಧನೆಯ ಅಮೃತ ಫಲಗಳಾವುವು?
ಸಂಪಾದಿತ ಕೃತಿಗಳ ಮುನ್ನುಡುಗಳೂ, ಪೊನ್ನನ 'ಭುವನೈಕ ರಾಮಾಭ್ಯುದಯ', ಕುಮುದೇಂದು ರಾಮಾಯಣ, ಧವಳ ಎಂಬ ಹಾಡಿನ ಸ್ವರೂಪ ಇತ್ಯಾದಿ ಲೇಖನಗಳೂ ಅವರ ಸಾಹಿತ್ಯ ಸಂಶೋಧನೆಯ ಅಮೃತ ಫಲಗಳು.
9. ಯಾವ ಅಭಿನಂದನಾ ಗ್ರಂಥವನ್ನು ಡಿ.ಎಲ್.ಎನ್. ಅವರಿಗೆ ಅರ್ಪಿಸಲಾಗಿದೆ?
ಅವರ ವಿದ್ಯಾರ್ಥಿಗಳು, ಮಿತ್ರರು, ಜ್ಞಾನೋಪಾಸಕ, ಹೊಸಬೆಳಕು, ಉಪಾಯನ ಎಂಬ ಅಭಿನಂದನಾ ಗ್ರಂಥಗಳನ್ನು ಡಿ.ಎಲ್.ಎನ್. ಅವರಿಗೆ ಅರ್ಪಿಸಲಾಗಿದೆ.

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಯಾವ ಯಾವ ಸಂಸ್ಥೆಗಳಲ್ಲಿ ಡಿ.ಎಲ್.ಎನ್. ಅವರು ಸೇವೆ ಸಲ್ಲಿಸಿದ್ದಾರೆ?
ಡಿ.ಎಲ್.ಎನ್. ಅವರು ಸಂಶೋಧನ ವಿದ್ಯಾರ್ಥಿಯೆಂದು, ಓರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ದ ಕನ್ನಡ ಪಂಡಿತರೆಂದು, ಮೈಸೂರಿನ ಮಹಾರಾಜಾ ಕಾಲೇಜು, ಯುವರಾಜಾ ಕಾಲೇಜು, ಬೆಂಗಳೂರಿನ ಸೆಂಟ್ರಲ್ ಕಾಲೇಜುಗಳಲ್ಲಿ ಕನ್ನಡ ಅಧ್ಯಾಪಕರೆಂದು, ಪರಿಷತ್ತು ಕೈಕೊಂಡ ನಿಘಂಟುವಿನ ಸಂಪಾದಕರೆಂದು ಬಹುಮುಖವಾಗಿ ದುಡಿದವರು.
2. ತೀ.ನಂ.ಶ್ರೀ. ಅವರು ಡಿ.ಎಲ್.ಎನ್. ಅವರ ಪಾಂಡಿತ್ಯದ ಬಗ್ಗೆ ಏನು ಹೇಳಿದ್ದಾರೆ?
"ಡಿ.ಎಲ್.ಎನ್. ಎಂದರೆ ಪಾಂಡಿತ್ಯ, ಪಾಂಡಿತ್ಯವೆಂದರೆ ಡಿ.ಎಲ್.ಎನ್. ಹಳಗನ್ನಡ ಭಾಷೆ ಸಾಹಿತ್ಯದ ವಿಷಯಕ್ಕಂತೂ ಹಲವರು ಹೇಳುವಂತೆ ನಾನೂ ಬಲ್ಲಂತೆ ಅವರೊಂದು ಜಂಗಮ ಬೃಹತ್ಕೋಶ! ಹಳಗನ್ನಡದಲ್ಲಿ ಅವರಿಗಿಂತಲೂ ನಿಷ್ಣಾತರಾದ ವಿದ್ವಾಂಸರನ್ನು ಸದ್ಯದಲ್ಲಿ ಕಾಣುವುದು ಅಶಕ್ಯವೆಂದೇ ನನ್ನ ಭಾವನೆ" ಕನ್ನಡದ ಇನ್ನೊಂದು ದಿಗ್ಗಜ ತೀ.ನಂ.ಶ್ರೀ. ಹೇಳಿದ ಮಾತಿದು.
3. ಕಲಬುರ್ಗಿಯವರು ಡಿ.ಎಲ್.ಎನ್. ಅವರ ಸಾಹಿತ್ಯ ಸೇವೆಯ ಬಗ್ಗೆ ಏನೆಂದು ಅಭಿಪ್ರಾಯಪಟ್ಟಿದ್ದಾರೆ?
ಇತ್ತೀಚೆಗೆ ಬಂದ ನೂರಾರು ಪುಸ್ತಕಗಳು, ಅವರು ವರ್ಗದಲ್ಲಿ ನೀಡಿದ ಉಪನ್ಯಾಸದ ವಿಸ್ತೃತ ರೂಪಗಳೆಂದು ಅವರ ಶಿಷ್ಯರೇ ಅಭಿಮಾನಪಟ್ಟು ಹೇಳುವುದರಿಂದ ಅವರ ಸಾಹಿತ್ಯ ಕೃಷಿಯನ್ನು ಪುಸ್ತಕ ಸಂಖ್ಯೆಯಲ್ಲಿ ನೋಡದೆ, ಶಿಷ್ಯ ಸಂಖ್ಯೆಯಲ್ಲಿ ನೋಡುವುದು ನ್ಯಾಯವೆಂದು ತೋರುತ್ತದೆ. ಹಾಗೆ ನೋಡಿದರೆ, ಒಂದು ಇಡೀ ಪುಸ್ತಕದಿಂದ ಸಾಧ್ಯವಾಗದ ಬೆಳಕು ಅವರ ಒಂದು ಲೇಖನ ಒದಗಿಸುವುದರಿಂದ ಅವರ ಕೃಷಿ ಸಣ್ಣದಲ್ಲವೆಂದೇ ಕಲಬುರ್ಗಿಯವರ ಅಭಿಪ್ರಾಯ.
4. ಡಿ.ಎಲ್.ಎನ್. ಸಂಪಾದಿಸಿದ ಮಹತ್ವದ ಕೃತಿಗಳಾವುವು?
ಡಿ.ಎಲ್.ಎನ್. ಸಂಪಾದಿಸಿದ ಮಹತ್ವದ ಕೃತಿಗಳಾವುವೆಂದರೆ, 11 ಗ್ರಂಥ, 7 ಮುನ್ನುಡಿ, 12 ವಿಮರ್ಶಾ ಲೇಖನ, 70 ಇತರ ಲೇಖನಗಳು, ವಡ್ಡಾರಾಧನೆ, ಪಂಪರಾಮಾಯಣ ಸಂಗ್ರಹ, ಸುಕುಮಾರ ಚರಿತಂ, ಸಿದ್ಧರಾಮ ಚಾರಿತ್ರ ಮೊದಲಾದ ಗ್ರಂಥಗಳು ಪರಿಷ್ಕರಣ ಹೊಂದಿ ಪ್ರಕಟಗೊಂಡವು.
5. ಡಿ.ಎಲ್.ಎನ್. ಅವರ 'ಕನ್ನಡ ಗ್ರಂಥ ಸಂಪಾದನೆ' ಕೃತಿಯ ವಿಶೇಷತೆಗಳೇನು?
ಎಲ್ಲ ಕ್ಷೇತ್ರಗಳಲ್ಲಿಯೂ ಎದ್ದು ಕಾಣುವ ಡಿ.ಎಲ್.ಎನ್. ಅವರ ಶಾಸ್ತ್ರಮತಿ 'ಕನ್ನಡ ಗ್ರಂಥಸಂಪಾದನೆ' ಎಂಬ ಕೃತಿಯಲ್ಲಿ ಸಂಪೂರ್ಣ ಪ್ರಕಟಗೊಂಡಿದೆ. ಗ್ರಂಥ ಸಂಪಾದನೆಯ ವಿಧಾನಗಳನ್ನು ಕನ್ನಡಕ್ಕೆ ಅನ್ವಯಿಸಿ ಬರೆದ ಈ ಶಾಸ್ತ್ರಕೃತಿ ಕನ್ನಡದಲ್ಲಿ ಪ್ರಥಮ ಸಾಹಸ, ಪ್ರಥಮ ಸಾಧನೆ. ಅದರ ಪುಟಪುಟಗಳಲ್ಲಿ ಡಿ.ಎಲ್.ಎನ್. ಅವರ ಪ್ರಕಟಿತ, ಅಪ್ರಕಟಿತ ಕೃತಿಗಳ ಅಧ್ಯಯನದ ವ್ಯಾಪ್ತಿಯನ್ನು, ಸಾಹಿತ್ಯ ವ್ಯಾಸಂಗದ ಉದ್ದಗಲಗಳನ್ನು ಅರಿಯಬಹುದು
6. ಡಿ.ಎಲ್.ಎನ್. ಅವರಲ್ಲಿ ಸಂಶೋಧನಾ ಶಕ್ತಿ ಯಾವ ರೀತಿ ಇತ್ತು?
ಪಾಂಡಿತ್ಯಕ್ಕೆ ಸಂಬಂಧಪಟ್ಟ ಅವರ ಸಂಶೋಧನ ಶಕ್ತಿಯ ಉಜ್ವಲ ಉದಾಹರಣೆ 'ಶಬ್ದವಿಹಾರ' ಎಂಬ ಚಿಕ್ಕ ಕೃತಿ. ಒಂದು ಶಬ್ದವನ್ನು ಹಿಡಿದುಕೊಂಡು ರೆಂಬೆ, ಕಾಂಡಗುಂಟ ಇಳಿದು, ಹಲವು ಬೇರುಗಳಲ್ಲಿ ಹರಿದಾಡಿ, ಮೂಲ ಬೇರನ್ನು ಮುಟ್ಟಿ ಹೇಳುವ ಅವರ ಸಾಹಸ ಇನ್ನೊಬ್ಬರಿಗೆ ಅಸಾಧ್ಯವೆಂಬ ಭಾವನೆಯನ್ನು ಹುಟ್ಟಿಸುತ್ತದೆ.

**ಇ) ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

1. ತಮ್ಮ ವ್ಯಾಸಂಗದ ಹವ್ಯಾಸದ ಬಗ್ಗೆ ಡಿ.ಎಲ್.ಎನ್. ಅವರು ಹೇಳಿರುವ ಮಾತುಗಳಾವುವು?
ಪಾಂಡಿತ್ಯ, ಸಂಶೋಧನೆಗಳ ಕಾಡಿನಲ್ಲಿ ಆನೆಯಂತೆ ನಡೆದ ಅವರ ಬರೆವಣಿಗೆ ಶುಷ್ಕವಾಗಿರದೆ ರಸವತ್ತಾಗಿದ್ದಿತು. 'ಹಚ್ಚನೆಯ ಹುಲ್ಲುಗಾವಲ ಹರವಿನಲ್ಲಿ ಸ್ವೇಚ್ಛೆಯಾಗಿ ತಿರುಗಾಡುತ್ತ, ಸೊಂಪಾಗಿ ಕಾಣುವೆಡೆಗಳಲ್ಲಿ ತಂಗಿ, ಹಿಡಿಹುಲ್ಲನ್ನು ಕಬಳಿಸುವ ಹಸುವಿನಂತೆ ಇದೆ ನನ್ನ ವ್ಯಾಸಂಗದ ಹವ್ಯಾಸ. ನನ್ನ ಕೊಠಡಿಯ ಆರಾಮ ಕುರ್ಚಿಯ ಮೇಲೆ ಮಲಗಿ, ಕೈಗೆ ಎಟುಕಿದ ಪುಸ್ತಕ ತೆರೆದು, ಓದುತ್ತ ಓದುತ್ತ, ಇಹದ ತಾಪತ್ರಯ ದೂರ ಸರಿದಂತೆಲ್ಲ ತನ್ಮಯತೆಯ ಮಡುವಿನಲ್ಲಿ ಮೆಲ್ಲ ಮೆಲ್ಲನೆ ಮುಳುಗಿ ಬಿಡುತ್ತೇನೆ.
ಪಕ್ಕದ ಮೇಜಿನ ಮೇಲೆ ಇರುವ ಗಂಧದ ಕಡ್ಡಿಗಳು ಉಗುಳುವ ಹೊಗೆ, ಸುರುಳಿ ಸುರುಳಿಯಾಗಿ ಅಂಕು ಡೊಂಕಾಗಿ ಮೇಲೆ ಹರಡಿ, ಕೊಠಡಿಯ ಪರಿಮಿತಾಕಾಶದಲ್ಲಿ ಕರಗಿ ಹೋಗುವಂತೆ ನಾನೂ ಬಾರಿಬಾರಿಗೆ ಕರಗಿಹೋಗಬೇಕೆಂಬ ಹಂಬಲ ನನಗೆ ಹಿರಿದಾಗಿದೆ.
2. ಪ್ರಾಧ್ಯಾಪಕರಾಗಿ ಡಿ.ಎಲ್.ಎನ್. ಅವರು ಯಾವ ರೀತಿ ಸೇವೆ ಸಲ್ಲಿಸಿದರು?

ಡಿ.ಎಲ್.ಎನ್. ಅವರು ಪ್ರಥಮ ವರ್ಗದ ಪ್ರಾಧ್ಯಾಪಕರೆಂದು ಅವರ ಶಿಷ್ಯಕೋಟಿಯ ಒಮ್ಮತದ ಅಭಿಪ್ರಾಯ. 60 ನಿಮಿಷಕ್ಕೆ ಬದಲು 59 ನಿಮಿಷಕ್ಕೆ ಸಾಲುವಷ್ಟು ಪಾಠ ಸಾಮಗ್ರಿ ತಮ್ಮ ಹತ್ತಿರ ಇದ್ದರೆ ಅವರು ವರ್ಗ ನಡೆಸುತ್ತಿರಲಿಲ್ಲ. ಉದ್ವೇಗ, ಅಂದಾಜು, ಆತ್ಮವಂಚನೆ, ಅಪ್ರಾಮಾಣಿಕತೆ ಇವು ಒಮ್ಮೆಯೂ ವರ್ಗದಲ್ಲಿ ಸುಳಿಯಲಿಲ್ಲ. ವಿದ್ಯಾರ್ಥಿಗಳಲ್ಲಿ ವ್ಯಾಸಂಗದ ಹವ್ಯಾಸ ಬೆಳೆಸಿ, ಹಸಿವನ್ನು ಹಿಂಗಿಸುವ ದಾರಿ ತೋರಿಸಿ, ಆ ದಾರಿಯಲ್ಲಿ ಎಡವಿದಾಗ ಎತ್ತಿ ನಿಲ್ಲಿಸಿ ಮುನ್ನಡೆಸಿದರು. ಇದನ್ನು ನೆನಪಿಟ್ಟು ಅವರ ವಿದ್ಯಾರ್ಥಿಗಳು, ಮಿತ್ರರು ಜ್ಞಾನೋಪಾಸಕ, ಹೊಸಬೆಳಕು, ಉಪಾಯನ ಎಂಬ ಅಭಿನಂದನಾ ಗ್ರಂಥಗಳನ್ನು ಅರ್ಪಿಸಿ, ನಾಡಜನತೆ ಬೀದರ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷರೆಂದು ಆರಿಸಿ ಕೃತಜ್ಞತೆಗಳನ್ನು ಸಲ್ಲಿಸಿದರು.

3. ಡಿ.ಎಲ್.ಎನ್. ಅವರದು ದೊಡ್ಡ ಮನಸ್ಸು ಎಂಬುದು ಹೇಗೆ ಗೊತ್ತಾಗುತ್ತದೆ?

ಇವುಗಳಿಗಿಂತ ಡಿ.ಎಲ್.ಎನ್. ಅವರ ದೊಡ್ಡ ಆಸ್ತಿಯೆಂದರೆ ದೊಡ್ಡ ಮನಸ್ಸು. ತಮ್ಮ ನಿಲುವಿಗೆ ತಕ್ಕ ಅಧಿಕಾರ ಸಿಗಲಿಲ್ಲವೆಂದು ಒಮ್ಮೆಯೂ ಅವರು ತುಟಿ ಬಿಚ್ಚಲಿಲ್ಲ, ಮನದಲ್ಲಿ ಆ ಭಾವನೆಯನ್ನು ಮೂಡಿಸಿಕೊಳ್ಳಲಿಲ್ಲ. ಇವರು ಸಂಪಾದಿಸಿದ 'ಶಬ್ದಮಣಿ ದರ್ಪಣ'ವನ್ನು ವಿಮರ್ಶಿಸುತ್ತ ನಾನು ಬರೆದ ಒಂದೆರಡು ಮಾತುಗಳು ಡಿ.ಎಲ್.ಎನ್. ಅವರಿಗೆ ನೋವನ್ನುಂಟು ಮಾಡಿದವು – ಎಂದು ಗೆಳೆಯರಿಂದ ತಿಳಿದಾಗ ನನಗೆ ನೋವಾಯಿತು. ಅವರು ತಮ್ಮ ಮುಂದಿನ ಆವೃತ್ತಿಯಲ್ಲಿ ಬರೆದ 'ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಪ್ರೊ. ಮಲ್ಲಿನಾಥ ಕಲಬುರ್ಗಿ ಎಂ.ಎ. ಅವರು ದರ್ಪಣಾವಲೋಕನ ಎಂಬ ಹೆಸರಿನಲ್ಲಿ ಎರಡು ಲೇಖನಗಳನ್ನು ಬರೆದು ಪ್ರಕಟಿಸಿದ್ದಾರೆ. ಸೂತ್ರ, ವೃತ್ತಿ, ಟೀಕೆಗಳಲ್ಲಿ ಹಂಚಿಹೋಗಿರುವ ಸಾಹಿತ್ಯಗಳನ್ನೆಲ್ಲ ಅವರು ತುಂಬ ಶ್ರಮವಹಿಸಿ ಕಂಡುಹಿಡಿದಿದ್ದಾರೆ. ಇವರ ಲೇಖನಗಳು ಕಾರಣವಾಗಿ ಶಬ್ದಮಣಿ ದರ್ಪಣದ ಈ ಮುದ್ರಣ ಅವರ ಹಿಂದಿನ ಮುದ್ರಣಕ್ಕಿಂತ ಹೆಚ್ಚು ಸಮರ್ಪಕವಾಗಿದೆಯೆಂದು ಭಾವಿಸುತ್ತೇನೆ' ಎಂಬ ನಿರ್ವಿಕಾರ ಬರೆವಣಿಗೆಯನ್ನು ಓದಿದಾಗಲಂತೂ ನನ್ನನ್ನೇ ನಾನು ಹಳಿದುಕೊಂಡೆ, ಮನದಲ್ಲಿಯೇ ಅವರ ಕ್ಷಮೆ ಕೇಳಿಕೊಂಡೆ.

**ಈ) ಸಂದರ್ಭದೊಡನೆ ಸ್ಪಷ್ಟೀಕರಿಸಿರಿ.**

1. ಡಿ.ಎಲ್.ಎನ್. ಎಂದರೆ ಪಾಂಡಿತ್ಯ, ಪಾಂಡಿತ್ಯ ಎಂದರೆ ಡಿ.ಎಲ್.ಎನ್.

ಈ ವಾಕ್ಯವನ್ನು **ಎಂ. ಎಂ. ಕಲಬುರ್ಗಿ** ಅವರು ಬರೆದಿರುವ **'ಮಾರ್ಗ–ಸಂಪುಟ 1'** ಎಂಬ ಕೃತಿಯಿಂದ ಆಯ್ದ **ಪಾಂಡಿತ್ಯದ ಡಿ.ಎಲ್. ನರಸಿಂಹಾಚಾರ್** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ತೀ.ನಂ.ಶ್ರೀ.ಯವರು ಹೇಳಿದ್ದಾರೆ. ಹಳಗನ್ನಡ ಭಾಷೆ ಸಾಹಿತ್ಯದ ವಿಷಯಕ್ಕಂತೂ ಹಲವರು ಹೇಳುವಂತೆ ನಾನೂ ಬಲ್ಲಂತೆ ಅವರೊಂದು ಜಂಗಮ ಬೃಹತ್ಕೋಶ! ಎಂದು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

2. ಅವರ ದೊಡ್ಡ ಆಸ್ತಿಯೆಂದರೆ ದೊಡ್ಡ ಮನಸ್ಸು.

ಈ ವಾಕ್ಯವನ್ನು **ಎಂ. ಎಂ. ಕಲಬುರ್ಗಿ** ಅವರು ಬರೆದಿರುವ **'ಮಾರ್ಗ–ಸಂಪುಟ 1'** ಎಂಬ ಕೃತಿಯಿಂದ ಆಯ್ದ **ಪಾಂಡಿತ್ಯದ ಡಿ.ಎಲ್. ನರಸಿಂಹಾಚಾರ್** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಲೇಖಕರು ಹೇಳಿದ್ದಾರೆ. ತಮ್ಮ ನಿಲುವಿಗೆ ತಕ್ಕ ಅಧಿಕಾರ ಸಿಗಲಿಲ್ಲವೆಂದು ಒಮ್ಮೆಯೂ ಅವರು ತುಟಿ ಬಿಚ್ಚಲಿಲ್ಲ, ಮನದಲ್ಲಿ ಆ ಭಾವನೆಯನ್ನು ಮೂಡಿಸಿಕೊಳ್ಳಲಿಲ್ಲ ಎಂಬ ವಿಚಾರಗಳನ್ನು ಚರ್ಚಿಸುವಾಗ ಈ ಮಾತು ವ್ಯಕ್ತವಾಗಿದೆ.

3. ಮನದಲ್ಲಿಯೇ ಅವರ ಕ್ಷಮೆ ಕೇಳಿಕೊಂಡೆ.

ಈ ವಾಕ್ಯವನ್ನು **ಎಂ. ಎಂ. ಕಲಬುರ್ಗಿ** ಅವರು ಬರೆದಿರುವ **'ಮಾರ್ಗ–ಸಂಪುಟ 1'** ಎಂಬ ಕೃತಿಯಿಂದ ಆಯ್ದ **ಪಾಂಡಿತ್ಯದ ಡಿ.ಎಲ್. ನರಸಿಂಹಾಚಾರ್** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಲೇಖಕರು ಹೇಳಿದ್ದಾರೆ. ಡಿ.ಎಲ್.ಎನ್. ಅವರು ಸಂಪಾದಿಸಿದ 'ಶಬ್ದಮಣಿ ದರ್ಪಣ'ವನ್ನು ವಿಮರ್ಶಿಸುತ್ತ ನಾನು ಬರೆದ ಒಂದೆರಡು ಮಾತುಗಳು ಡಿ.ಎಲ್.ಎನ್. ಅವರಿಗೆ ನೋವನ್ನುಂಟು ಮಾಡಿದವು ಎಂದು ತಮ್ಮ ಮನಸ್ಸಿನಲ್ಲಿ ಕ್ಷಮೆ ಕೇಳಿಕೊಂಡಾಗ ಈ ಮಾತು ಬಂದಿದೆ.

**3. ಭಾಷಾಭ್ಯಾಸ :**

**ಅ) ಕೆಳಗೆ ನೀಡಿರುವ ಪದಗಳಿಗೆ ವಿರುದ್ಧಾರ್ಥ ಬರೆಯಿರಿ.**

ಮರಣ x ಜನನ, ಗೌರವ x ಅಗೌರವ, ಜಂಗಮ x ಸ್ಥಾವರ, ಹಿರಿದು x ಕಿರಿಯ, ನ್ಯಾಯ x ಅನ್ಯಾಯ, ಬೆಳಕು x ಕತ್ತಲು, ವಿಶೇಷ x ಶೇಷ, ಪರಿಪೂರ್ಣ x ಅಪರಿಪೂರ್ಣ, ಶುದ್ಧಿ x ಅಶುದ್ಧಿ, ಶಕ್ತಿ x ನಿಶ್ಶಕ್ತಿ, ಅಸಾಧ್ಯ x ಸಾಧ್ಯ, ಮುಳುಗು x ತೇಲು, ನೋವು x ನಲಿವು, ಅಶಕ್ಯ x ಶಕ್ಯ.

**ಆ) ಕೆಳಗಿನ ಪದಗಳಿಗೆ ತದ್ಭವ ರೂಪಗಳನ್ನು ಬರೆಯಿರಿ.**

ದುಃಖ – ದುಕ್ಕ, ಕಾರ್ಯ– ಕಜ್ಜ, ವಿದ್ಯಾ– ಬಿಜ್ಜೆ, ಕಾವ್ಯ– ಕಬ್ಬ.

**ಇ) ಕೆಳಗೆ ನೀಡಿರುವ ಪದಗಳನ್ನು ಬಿಡಿಸಿ, ಸಂಧಿಯನ್ನು ಹೆಸರಿಸಿರಿ.**

1. ವಿದ್ಯಾರ್ಥಿ= ವಿದ್ಯಾ+ ಅರ್ಥಿ– ಸವರ್ಣದೀರ್ಘಸಂಧಿ
2. ಹಳೆಗನ್ನಡ= ಹಳ + ಕನ್ನಡ– ಆದೇಶಸಂಧಿ
3. ಉದ್ದಗಲ = ಉದ್ದ +ಅಗಲ – ಲೋಪಸಂಧಿ
4. ರಾಮಾಭ್ಯುದಯ = ರಾಮ + ಅಭ್ಯುದಯ – ಸವರ್ಣದೀರ್ಘಸಂಧಿ
5. ಭುವನೈಕ= ಭುವನ + ಐಕ್ಯ – ವೃದ್ಧಿಸಂಧಿ
6. ಹುಲ್ಲುಗಾವಲು = ಹುಲ್ಲು + ಕಾವಲು – ಆದೇಶಸಂಧಿ
7. ನೆನಪಿಟ್ಟು= ನೆನಪು + ಇಟ್ಟು –ಲೋಪಸಂಧಿ
8. ಜ್ಞಾನೋಪಾಸಕ= ಜ್ಞಾನ + ಉಪಾಸಕ – ಗುಣಸಂಧಿ
9. ದರ್ಪಣಾವಲೋಕನ = ದರ್ಪಣ + ಅವಲೋಕನ–ಸವರ್ಣದೀರ್ಘಸಂಧಿ
10. ಮನದಣಿ = ಮನ + ತಣಿ – ಆದೇಶಸಂಧಿ
11. ದಿಗ್ಗಜ = ದಿಕ್ + ಅಜ – ಜಸ್ತ್ವಸಂಧಿ
12. ಮಾನಸೋಲ್ಲಾಸ = ಮಾನಸ + ಉಲ್ಲಾಸ– ಗುಣಸಂಧಿ

**ಈ) ಕೆಳಗಿನ ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿರಿ.**

1. ತತ್ತರಿಸಿ ಹೋಗು : ಭಾರಿ ಮಳೆ ಹೊಡೆತಕ್ಕೆ ಬೆಳೆ ತತ್ತರಿಸಿ ಹೋಯಿತು.
2. ಸಂಶೋಧನೆ : ವಿಜ್ಞಾನಿಗಳು ಸಂಶೋಧನೆ ನಡೆಸುತ್ತಾರೆ.
3. ಬುನಾದಿ : ಮನೆಕಟ್ಟಲು ಬುನಾದಿ ಹಾಕುತ್ತಾರೆ.
4. ನಿರಾಶೆಗೊಳಿಸು : ನಮ್ಮ ಮನೆಗೆ ನೆಂಟರು ಬರುತ್ತೇವೆಂದು ಹೇಳಿ ನನ್ನನ್ನು ನಿರಾಸೆಗೊಳಿಸಿದರು.
5. ಮುನ್ನಡೆಸು: ನಾಯಕ ನಮ್ಮ ತಂಡವನ್ನು ಮುನ್ನಡೆಸುತ್ತಾನೆ.
6. ಜ್ಞಾನೋಪಾಸಕ : ನಾನು ಜ್ಞಾನೋಪಾಸಕನಾಗಿದ್ದೇನೆ.

**ಉ) ಕೆಳಗಿನ ಪದಗಳಿಗೆ ಅನ್ಯಲಿಂಗ ರೂಪವನ್ನು ಬರೆಯಿರಿ.**

ಸಂಶೋಧಕ– ಸಂಶೋಧಕಿ, ಕವಿ– ಕವಯಿತ್ರಿ, ವಿಮರ್ಶಕಿ–ವಿಮರ್ಶಕ, ದುಡಿದನು–ದುಡಿದಳು, ಲೇಖಕ–ಲೇಖಕಿ

**ಊ) ಇವುಗಳ ವಚನವನ್ನು ಬದಲಾಯಿಸಿ ಬರೆಯಿರಿ.**

ಲೇಖನ– ಲೇಖನಗಳು, ಕೃತಿ– ಕೃತಿಗಳು, ನಿದರ್ಶನಗಳು– ನಿದರ್ಶನ, ಕ್ಷೇತ್ರಗಳು– ಕ್ಷೇತ್ರ, ಅಧ್ಯಾಪಕ–ಅಧ್ಯಾಪಕರು.

**ಋ) ಕೆಳಗೆ ನೀಡಿದ ಕ್ರಿಯಾಪದಗಳ ಧಾತುವನ್ನು ಗುರುತಿಸಿ ಬರೆಯಿರಿ.**

ತೋರುತ್ತದೆ– ತೋರು, ಬಿಡುತ್ತೇನೆ– ಬಿಡು, ಸಲ್ಲಿಸಿದರು– ಸಲ್ಲಿಸು, ಕಂಡುಹಿಡಿದಿದ್ದಾರೆ–ಕಂಡುಹಿಡಿ.

**ಎ) ಕೆಳಗಿನ ಪದಗಳಿಗೆ ನಾನಾರ್ಥವನ್ನು ಬರೆಯಿರಿ.**

ಹಳಿ– ರೈಲು ಹಳಿ, ನಿಂದಿಸು. ಕಳೆ– ಕಾಂತಿ, ಬೇಡವಾದ ಹುಲ್ಲು.
ಕಣ– ಅಣು, ಒಕ್ಕಲು ಮಾಡುವ ಸ್ಥಳ. ಕಾಡು– ಅರಣ್ಯ, ಪೀಡಿಸು.

**4. ಸೈದ್ಧಾಂತಿಕ ವ್ಯಾಕರಣ :**

**ಕಾಲಗಳು :**

ಅ) ಭೂತಕಾಲ : ಈ ಹಿಂದೆ ನಡೆದು ಹೋದ ಕ್ರಿಯೆಯನ್ನು ಸೂಚಿಸುವುದು
ಆ) ವರ್ತಮಾನ : ಕ್ರಿಯೆಯು ನಡೆಯುತ್ತಿರುವುದನ್ನು ಸೂಚಿಸುವುದು
ಇ) ಭವಿಷತ್ ಕಾಲ : ಮುಂದೆ ನಡೆಯುವ ಕ್ರಿಯೆಯನ್ನು ವಿವರಿಸುವ ಕಾಲ

| ಭೂತಕಾಲ | ವರ್ತಮಾನಕಾಲ | ಭವಿಷತ್ ಕಾಲ |
|---|---|---|
| ನೋಡಿದನು | ನೋಡುತ್ತಾನೆ | ನೋಡುವನು |
| ನೋಡಿದಳು | ನೋಡುತ್ತಾಳೆ | ನೋಡುವಳು |
| ನೋಡಿತು | ನೋಡುತ್ತದೆ | ನೋಡುವುದು |
| ನೋಡಿದೆ | ನೋಡುತ್ತೀಯ | ನೋಡುವಿ |

**1. ವರ್ತಮಾನ ಕಾಲ :**

**1. ಪ್ರಥಮ ಪುರುಷ**

ಪುಲ್ಲಿಂಗ ನೋಡು + ಉತ್ತ + ಆನೆ = ನೋಡುತ್ತಾನೆ

ಸ್ತ್ರೀಲಿಂಗ ನೋಡು + ಉತ್ತ + ಆಳೆ = ನೋಡುತ್ತಾಳೆ

ನಪುಂಸಕಲಿಂಗ ನೋಡು + ಉತ್ತ + ಅದೆ = ನೋಡುತ್ತದೆ

**2. ಮಧ್ಯಮ ಪುರುಷ:** ನೋಡು + ಉತ್ತ + ಈಯ = ನೋಡುತ್ತೀಯ

**3. ಉತ್ತಮ ಪುರುಷ :** ನೋಡು + ಉತ್ತ + ಏನೆ = ನೋಡುತ್ತೇನೆ

ಇಲ್ಲಿ **'ಉತ್ತ'** ಎಂಬುದು ವರ್ತಮಾನ ಕಾಲವನ್ನು ಸೂಚಿಸುವ ಪ್ರತ್ಯಯ ಎಂಬುದನ್ನು ನೆನಪಿಡಿ.

**2. ಭೂತಕಾಲ :**

**ಧಾತು + ಕಾಲಸೂಚಕ ಪ್ರತ್ಯಯ + ಅಖ್ಯಾತ ಪ್ರತ್ಯಯ = ಕ್ರಿಯಾಪದ**

**1. ಪ್ರಥಮ ಪುರುಷ**

ಪುಲ್ಲಿಂಗ ನೋಡು + ದ + ಅನು = ನೋಡಿದನು

ಸ್ತ್ರೀಲಿಂಗ ನೋಡು + ದ + ಅಳು = ನೋಡಿದಳು

ನಪುಂಸಕಲಿಂಗ ನೋಡು + ದ + ಇತು = ನೋಡಿತು

**2. ಮಧ್ಯಮ ಪುರುಷ** ನೋಡು + ದ + ಎ = ನೋಡಿದೆ

**3. ಉತ್ತಮ ಪುರುಷ** ನೋಡು + ದ + ಎನು = ನೋಡಿದೆನು

ಇಲ್ಲಿ **'ದ'** ಎಂಬುದು ಭೂತ ಕಾಲವನ್ನು ಸೂಚಿಸುವ ಪ್ರತ್ಯಯ ಎಂಬುದನ್ನು ನೆನಪಿಡಿ.

**3. ಭವಿಷತ್ ಕಾಲ:**

**ಧಾತು + ಕಾಲಸೂಚಕ ಪ್ರತ್ಯಯ + ಅಖ್ಯಾತ ಪ್ರತ್ಯಯ = ಕ್ರಿಯಾಪದ**

**1. ಪ್ರಥಮ ಪುರುಷ**

ಪುಲ್ಲಿಂಗ ನೋಡು + ವ + ಅನು = ನೋಡುವನು

ಸ್ತ್ರೀಲಿಂಗ ನೋಡು + ವ + ಅಳು = ನೋಡುವಳು

ನಪುಂಸಕಲಿಂಗ ನೋಡು + ವ + ಅದು = ನೋಡುವುದು

**2. ಮಧ್ಯಮ ಪುರುಷ** ನೋಡು + ವ + ಇ = ನೋಡುವಿ

**3. ಉತ್ತಮ ಪುರುಷ** ನೋಡು + ವ + ಎನು = ನೋಡುವೆನು

## 7. ಐನ್‌ಸ್ಟೀನ್ ಮತ್ತು ದೇವರು – ಎಚ್. ನರಸಿಂಹಯ್ಯ

**ಕೃತಿಕಾರರ ಪರಿಚಯ :**

- **ಡಾ. ಎಚ್. ನರಸಿಂಹಯ್ಯ** ಅವರು ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಹೊಸೂರು ಗ್ರಾಮದಲ್ಲಿ 1920 ರಲ್ಲಿ ಜನಿಸಿದರು.
- ಇವರು ಹೋರಾಟದ ಹಾದಿ, **ತೆರೆದ ಮನ** ಮುಂತಾದ ಕೃತಿಗಳನ್ನು ಬರೆದಿದ್ದಾರೆ.
- ಇವರಿಗೆ ಗುಲ್ಬರ್ಗ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್, ಭಾರತ ಸರ್ಕಾರದ ಪದ್ಮಭೂಷಣ ಪ್ರಶಸ್ತಿ ಲಭಿಸಿವೆ.
- ಪ್ರಸ್ತುತ ಲೇಖನವನ್ನು ಎಚ್. ನರಸಿಂಹಯ್ಯನವರ **'ತೆರೆದ ಮನ'** ಕೃತಿಯಿಂದ ಆರಿಸಿದೆ.

**ಟಿಪ್ಪಣಿಗಳು :**

**1. ಆಲ್ಬರ್ಟ್ ಐನ್‌ಸ್ಟೀನ್ :**

ಇಪ್ಪತ್ತನೇ ಶತಮಾನದ ಒಬ್ಬ ವಿಶ್ವವಿಖ್ಯಾತ ವಿಜ್ಞಾನಿ. ಜರ್ಮನಿಯ ಉಲ್ಮ್ ನಗರದಲ್ಲಿ 1879 ರಲ್ಲಿ ಜನಿಸಿದ ಇವರು ಯಹೂದಿ ಎಂಬ ಕಾರಣಕ್ಕಾಗಿ ದೇಶಭ್ರಷ್ಟರಾಗಬೇಕಾಯಿತು. ಅಮೇರಿಕಾದಲ್ಲಿ ತಮ್ಮ ಸಂಶೋಧನಾ ಕಾರ್ಯವನ್ನು ಮುಂದುವರಿಸಿದ ಐನ್‌ಸ್ಟೀನರು ತಮ್ಮ ಸಾಪೇಕ್ಷ ಸಿದ್ಧಾಂತವನ್ನು 1905 ರಲ್ಲಿ ಮಂಡಿಸಿದರು. 1921 ರಲ್ಲಿ ಇವರಿಗೆ ನೊಬೆಲ್ ಪ್ರಶಸ್ತಿ ದೊರೆಯಿತು. ಶ್ರೇಷ್ಠ ವಿಜ್ಞಾನಿ ಮತ್ತು ಮಾನವತಾವಾದಿ ಆಗಿದ್ದ ಐನ್‌ಸ್ಟೀನರು 1955 ರಲ್ಲಿ ನಿಧನರಾದರು.

2. ಸ್ಪಿನೋಜಾ :

ಡಚ್ ತತ್ತ್ವಜ್ಞಾನಿಯಾದ ಈತನ ಪೂರ್ಣ ಹೆಸರು ಬೆನೆಡಿಕ್ಟ್ – ಡಿ – ಸ್ಪಿನೋಜಾ. ಇವನು ಪ್ರತಿಪಾದಿಸಿದ ತತ್ತ್ವವು ವಿಶ್ವ ದೇವತಾ ತತ್ತ್ವದ ಅದ್ವೈತವಾದ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಈತನ ಪ್ರಕಾರ ದೇವರು ಪ್ರೀತಿಸುವುದಿಲ್ಲ ಮತ್ತು ದ್ವೇಷಿಸುವುದಿಲ್ಲ. ಒಟ್ಟಾರೆ ವಸ್ತು ಸ್ಥಿತಿಯಂತೆ ನಿಸರ್ಗ ಮತ್ತು ದೇವರು ಮಾನವನ ಊಹೆಯ ಮಿತಿಯನ್ನು ಮೀರಿದುದಾಗಿವೆ.

**ಅಭ್ಯಾಸ**

**1. ಪದಗಳ ಅರ್ಥ :**

**ಅಪರಿಪೂರ್ಣ** – ಪೂರ್ಣವಲ್ಲದ
**ಉದ್ಧರಿಸು** – ಉದಾಹರಿಸು; ಇತರರು ಹೇಳಿದ ಮಾತನ್ನು ಎತ್ತಿ ಹೇಳುವುದು.
**ನಿಲುವು** – ಅಭಿಪ್ರಾಯ
**ಪರಿಕಲ್ಪನೆ** –ಒಂದು ವಿಷಯದ ಖಚಿತ ಚಿಂತನೆ.
**ವರ್ತನೆ** – ನಡತೆ; ರೂಢಿ.
**ಸಂಯೋಜನೆ** – ಕೂಡಿಸುವಿಕೆ
**ತುಚ್ಛ** – ನೀಚ; ನಿಂದನೀಯ
**ಕಟ್ಟಾ** – ಪಕ್ಕಾ
**ನಿರ್ವಚನ** – ವಿವರಣೆ; ವ್ಯಾಖ್ಯಾನ.
**ಮೌಲ್ಯ** – ಬೆಲೆ; ಅಮೂಲ್ಯ ಗುಣ.
**ವಾಗ್ವಾದ** – ಚರ್ಚೆ
**ಸಮನ್ವಯ** – ಹೊಂದಾಣಿಕೆ

**2. ಪ್ರಶ್ನೆಗಳು :**

**ಅ) ಬಿಟ್ಟ ಸ್ಥಳಗಳನ್ನು ನೀಡಿರುವ ನಾಲ್ಕು ಆಯ್ಕೆಗಳಿಂದ ಸೂಕ್ತವಾದುದನ್ನು ಆಯ್ದು ಬರೆಯಿರಿ.**

1. ಐನ್‌ಸ್ಟೀನ್ ಶ್ರೇಷ್ಠ __________ ಆಗಿದ್ದರು.
ಅ) ತತ್ವಜ್ಞಾನಿ ಬ) ವಿಜ್ಞಾನಿ ಕ) ಧರ್ಮಗುರು ಡ) ರಾಜಕಾರಣಿ
2. ಐನ್‌ಸ್ಟೀನ್ ಅವರ ಪ್ರಕಾರ ಮನುಷ್ಯ ಬೆಲೆ ಕೊಡಬೇಕಾದುದು __________
ಅ) ಸುಖಭೋಗಕ್ಕೆ ಬ) ಆಸ್ತಿಪಾಸ್ತಿಗೆ ಕ) ಮೌಲ್ಯಗಳಿಗೆ ಡ) ಯಶಸ್ಸಿಗೆ
3. ಐನ್‌ಸ್ಟೀನ್ ಪ್ರಕಾರ ಧರ್ಮ __________ ಅವಲಂಬಿಸಿದೆ.
ಅ) ದೇವರನ್ನು ಬ) ವಾಣಿಜ್ಯ ವ್ಯವಹಾರವನ್ನು ಕ) ಶಾಸ್ತ್ರಗಳನ್ನು ಡ) ನೈತಿಕತೆಯನ್ನು

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಧಾರ್ಮಿಕ ವ್ಯಕ್ತಿಗಳು ಐನ್‌ಸ್ಟೀನ್ ಅವರನ್ನು ಏನೆಂದು ಪರಿಭಾವಿಸುತ್ತಾರೆ?
ಧಾರ್ಮಿಕ ವ್ಯಕ್ತಿಗಳು ಐನ್‌ಸ್ಟೀನ್ ಅವರನ್ನು ಅತಿಶ್ರೇಷ್ಠ ವಿಜ್ಞಾನಿಗಳಲ್ಲಿ ಒಬ್ಬರು ಮಾತ್ರವಲ್ಲ. ನಿಜವಾದ ಮಾನವತಾವಾದಿ ಎಂದು ಪರಿಭಾವಿಸುತ್ತಾರೆ.
2. ಧರ್ಮ ಮತ್ತು ವಿಜ್ಞಾನದ ಬಗ್ಗೆ ಐನ್‌ಸ್ಟೀನ್ ನೀಡಿರುವ ಪ್ರಸಿದ್ಧ ಹೇಳಿಕೆ ಯಾವುದು?
ಧರ್ಮ ಮತ್ತು ವಿಜ್ಞಾನದ ಬಗ್ಗೆ ಐನ್‌ಸ್ಟೀನ್ ನೀಡಿರುವ ಪ್ರಸಿದ್ಧ ಹೇಳಿಕೆ 'ಧರ್ಮವಿಲ್ಲದ ವಿಜ್ಞಾನ ಕುಂಟು ಮತ್ತು ವಿಜ್ಞಾನವಿಲ್ಲದ ಧರ್ಮ ಕುರುಡು' ಎನ್ನುವುದು.
3. ಐನ್‌ಸ್ಟೀನ್ ದೇವರಿಗೆ ಸಂಬಂಧಿಸಿದಂತೆ ಯಾರ ವಿಚಾರಗಳನ್ನು ನಂಬಿದ್ದರು?
ಐನ್‌ಸ್ಟೀನ್ ದೇವರಿಗೆ ಸಂಬಂಧಿಸಿದಂತೆ ಎಲ್ಲ ಸಾಂಪ್ರದಾಯಿಕವಾದ ಧರ್ಮಗಳ ಕೇಂದ್ರದಲ್ಲಿ ದೇವರ ಪರಿಕಲ್ಪನೆಯಿದೆ ಎಂಬ ಸ್ಪಿನೋಜಾನ ದೇವರನ್ನು ನಂಬಿದ್ದರು.
4. ಸ್ಪಿನೋಜಾ ಯಾರು? ಅವರು ಹಿಂಸೆಗೊಳಗಾದದ್ದು ಏಕೆ?
ಸ್ಪಿನೋಜಾ ಒಬ್ಬ ಡಚ್ ತತ್ತ್ವಜ್ಞಾನಿ. ದೇವರು ಮತ್ತು ಧರ್ಮಕ್ಕೆ ಸಂಬಂಧಿಸಿದಂತೆ ಅವನ ಅಸಾಂಪ್ರದಾಯಿಕ ದೃಷ್ಟಿಕೋನಕ್ಕಾಗಿ ಆಮಸ್ಟರ್‌ಡಂನ ಸಿನಗಾಗ್‌ರವರು ಅವನಿಗೆ ಹಿಂಸೆ ಕೊಟ್ಟು ಅವನನ್ನು ಮತದಿಂದ ಹೊರಹಾಕಿದ್ದರು.
5. ಐನ್‌ಸ್ಟೀನ್ ಅವರ ಹೆಸರೆತ್ತುವ ಅಧಿಕಾರ ಯಾರಿಗೆ ಇಲ್ಲವೆಂದು ಲೇಖಕರು ಹೇಳುತ್ತಾರೆ?
ದೇವರನ್ನು ಒಂದೇ ಸಮನೆ ತಮ್ಮ ವಾಣಿಜ್ಯ ವ್ಯವಹಾರಗಳಿಗೆ ಬಳಸುತ್ತಾ ಬಂದಿರುವ ಜನರಿಗೆ ಐನ್‌ಸ್ಟೀನ್‌ರ ಹೆಸರೆತ್ತುವ ಯಾವ ಅಧಿಕಾರವೂ ಇಲ್ಲವೆಂದು ಲೇಖಕರು ಹೇಳಿದ್ದಾರೆ.

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. ದೇವರು ಮತ್ತು ಧರ್ಮದ ಬಗ್ಗೆ ಐನ್‌ಸ್ಟೀನ್ ಅವರ ನಂಬಿಕೆಗಳೇನು?
'ಕೆಟ್ಟದಕ್ಕೆ ಶಿಕ್ಷೆ ಕೊಟ್ಟು, ಒಳ್ಳೆಯದಕ್ಕೆ ಪ್ರತಿಫಲ ನೀಡುವ ಮತಧರ್ಮ ಶಾಸ್ತ್ರಗಳ ದೇವರಲ್ಲಿ ನನಗೆ ನಂಬಿಕೆಯಿಲ್ಲ. ನಾನು ಜಗತ್ತಿನಲ್ಲಿರುವ ಎಲ್ಲ ವಸ್ತುಗಳ ಕ್ರಮಬದ್ಧ ಸಂಯೋಜನೆ ಹಾಗೂ ಸಮನ್ವಯಗಳ ಮೂಲಕವೇ ತನ್ನ ಇರುವಿಕೆಯನ್ನು ತೋರಿಸಿಕೊಳ್ಳುವ ಸ್ಪಿನೋಜಾನ ದೇವರನ್ನು ನಂಬುತ್ತೇನೆ. ಮನುಷ್ಯ ಜೀವಿಗಳ ವರ್ತನೆ ಹಾಗೂ ಭವಿಷ್ಯದ ಬಗ್ಗೆ ತಲೆ ಕೆಡಿಸಿಕೊಳ್ಳುವ ದೇವರನ್ನು ನಾನು ನಂಬುವುದಿಲ್ಲ.' ಎಂದು ಹೇಳಿದ್ದಾರೆ.
2. ಐನ್‌ಸ್ಟೀನ್ ಅವರ ಹೆಸರನ್ನು ಯಾವ ವಿಚಾರಗಳಿಗೆ ಬಳಸಿಕೊಳ್ಳುವುದು ಅನ್ಯಾಯವಾಗುತ್ತದೆ?

ದೇವರನ್ನು ಒಂದೇ ಸಮನೆ ತಮ್ಮ ವಾಣಿಜ್ಯ ವ್ಯವಹಾರಗಳಿಗೆ ಬಳಸುತ್ತಾ ಬಂದಿರುವ ಜನರಿಗೆ ಐನ್‌ಸ್ಟೀನ್‌ರ ಹೆಸರೆತ್ತುವ ಯಾವ ಅಧಿಕಾರವೂ ಇಲ್ಲ. ದೇವರ, ಧರ್ಮಗಳನ್ನು ಕುರಿತು ತಮ್ಮ ಒರಟು ಒರಟಾದ, ಅಪಾಯಕಾರಿ ಸಿದ್ಧಾಂತಗಳ ಸಮರ್ಥನೆಗೆ, ಆ ಮಹಾವಿಜ್ಞಾನಿಯ ಹೆಸರನ್ನು ಉಪಯೋಗಿಸಿಕೊಳ್ಳುವುದು ಅನ್ಯಾಯವೂ ಹೌದು.

3. ಮನುಷ್ಯನ ಯಾವ ಆದರ್ಶಗಳು ಐನ್‌ಸ್ಟೀನ್ ಅವರಿಗೆ ತುಚ್ಛ ಅನಿಸಿದವು?

'ಸಾಮಾನ್ಯ ಮನುಷ್ಯರು ಸಾಧಿಸ ಬಯಸುವ ಆದರ್ಶಗಳಾದ ಆಸ್ತಿಪಾಸ್ತಿ, ಸುಖಭೋಗ ಮತ್ತು ಬಹಿರಂಗದ ಯಶಸ್ಸುಗಳು ಮೊದಲಿನಿಂದಲೂ ಬಹಳ ತುಚ್ಛವೆಂದು ಐನ್‌ಸ್ಟೀನ್ ಅವರಿಗೆ ತೋರಿದೆ.' ಯಶಸ್ಸನ್ನು ಸಂಪಾದಿಸಿದ ಮನುಷ್ಯನಾಗಲು ಪ್ರಯತ್ನಿಸಬೇಡ. ಮೌಲ್ಯಗಳಿಗೆ ಬೆಲೆಕೊಡುವ ಮನುಷ್ಯನಾಗು ಎಂದು ಹೇಳಿದ್ದಾರೆ.

**ಈ) ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

1.ದೇವರು ಮತ್ತು ಧರ್ಮದ ಬಗ್ಗೆ ಐನ್‌ಸ್ಟೀನ್ ಅವರ ನಂಬಿಕೆಗಳಿಂದ ಸ್ಪಷ್ಟಗೊಳ್ಳುವ ವಿಚಾರಗಳೇನು?

'ಕೆಟ್ಟದಕ್ಕೆ ಶಿಕ್ಷೆ ಕೊಟ್ಟು, ಒಳ್ಳೆಯದಕ್ಕೆ ಪ್ರತಿಫಲ ನೀಡುವ ಮತಧರ್ಮ ಶಾಸ್ತ್ರಗಳ ದೇವರಲ್ಲಿ ನನಗೆ ನಂಬಿಕೆಯಿಲ್ಲ. ನಾನು ಜಗತ್ತಿನಲ್ಲಿರುವ ಎಲ್ಲ ವಸ್ತುಗಳ ಕ್ರಮಬದ್ಧ ಸಂಯೋಜನೆ ಹಾಗೂ ಸಮನ್ವಯಗಳ ಮೂಲಕವೇ ತನ್ನ ಇರುವಿಕೆಯನ್ನು ತೋರಿಸಿಕೊಳ್ಳುವ ಸ್ಪಿನೋಜಾನ ದೇವರನ್ನು ನಂಬುತ್ತೇನೆ. ಮನುಷ್ಯ ಜೀವಿಗಳ ವರ್ತನೆ ಹಾಗೂ ಭವಿಷ್ಯದ ಬಗ್ಗೆ ತಲೆ ಕೆಡಿಸಿಕೊಳ್ಳುವ ದೇವರನ್ನು ನಾನು ನಂಬುವುದಿಲ್ಲ.' ಐನ್‌ಸ್ಟೀನ್‌ರವರ ಪ್ರಕಾರ ಧರ್ಮವು ಯಾವುದೇ ದೈವೀ ಅಧಿಕಾರವನ್ನು ಅವಲಂಬಿಸದೆ ಸಂಪೂರ್ಣವಾಗಿ ನೈತಿಕವಾಗಿತ್ತು.

ದೇವರನ್ನು ಒಂದೇ ಸಮನೆ ತಮ್ಮ ವಾಣಿಜ್ಯ ವ್ಯವಹಾರಗಳಿಗೆ ಬಳಸುತ್ತಾ ಬಂದಿರುವ ಜನರಿಗೆ ಐನ್‌ಸ್ಟೀನ್‌ರ ಹೆಸರೆತ್ತುವ ಯಾವ ಅಧಿಕಾರವೂ ಇಲ್ಲ. ದೇವರ, ಧರ್ಮಗಳನ್ನು ಕುರಿತು ತಮ್ಮ ಒರಟು ಒರಟಾದ, ಅಪಾಯಕಾರಿ ಸಿದ್ಧಾಂತಗಳ ಸಮರ್ಥನೆಗೆ, ಆ ಮಹಾವಿಜ್ಞಾನಿಯ ಹೆಸರನ್ನು ಉಪಯೋಗಿಸಿಕೊಳ್ಳುವುದು ಅನ್ಯಾಯವೂ ಹೌದು.

2. ಐನ್‌ಸ್ಟೀನ್ ಅವರ ಬದುಕನ್ನು ರೂಪಿಸಿದ ಎರಡು ಹೇಳಿಕೆಗಳಾವುವು? ಅವುಗಳನ್ನು ವಿವರಿಸಿ.

ಐನ್‌ಸ್ಟೀನ್‌ರ ಬದುಕನ್ನು ರೂಪಿಸಿದ ಎರಡು ಹೇಳಿಕೆಗಳಾವುವೆಂದರೆ,

'ಸಾಮಾನ್ಯ ಮನುಷ್ಯರು ಸಾಧಿಸ ಬಯಸುವ ಆದರ್ಶಗಳಾದ ಆಸ್ತಿಪಾಸ್ತಿ, ಸುಖಭೋಗ ಮತ್ತು ಬಹಿರಂಗದ ಯಶಸ್ಸುಗಳು ಮೊದಲಿನಿಂದಲೂ ಬಹಳ ತುಚ್ಛವೆಂದು ನನಗೆ ತೋರಿದೆ.'

'ಯಶಸ್ಸನ್ನು ಸಂಪಾದಿಸಿದ ಮನುಷ್ಯನಾಗಲು ಪ್ರಯತ್ನಿಸಬೇಡ. ಮೌಲ್ಯಗಳಿಗೆ ಬೆಲೆಕೊಡುವ ಮನುಷ್ಯನಾಗು.'

ಆಳವಾದ ಒಳನೋಟಗಳನ್ನು ನೀಡುವ ಈ ಹೇಳಿಕೆಗಳು ಸಾಮಾನ್ಯವಾಗಿ ಎಲ್ಲ ಮನುಷ್ಯರಿಗೆ ಅದರಲ್ಲೂ ವಿಶೇಷವಾಗಿ ನಮ್ಮ ರಾಜಕಾರಣಿಗಳಿಗೆ ಬಹಳ ಮುಖ್ಯವೆಂದು ಲೇಕಕರು ತಿಳಿಯುತ್ತಾರೆ.

**ಉ) ಸಂದರ್ಭದೊಡನೆ ಸ್ಪಷ್ಟೀಕರಿಸಿರಿ.**

1. 'ಧರ್ಮವಿಲ್ಲದ ವಿಜ್ಞಾನ ಕುಂಟು ಮತ್ತು ವಿಜ್ಞಾನವಿಲ್ಲದ ಧರ್ಮ ಕುರುಡು.'

ಈ ವಾಕ್ಯವನ್ನು **ಎಚ್. ನರಸಿಂಹಯ್ಯ** ಅವರು ಬರೆದಿರುವ **'ತೆರೆದ ಮನ'** ಎಂಬ ಕೃತಿಯಿಂದ ಆಯ್ದ **ಐನ್‌ಸ್ಟೀನ್ ಮತ್ತು ದೇವರು** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಲೇಖಕರು ಹೇಳಿದ್ದಾರೆ. ಕಟ್ಟಾ ಧಾರ್ಮಿಕರು ಕೂಡ ವಿಜ್ಞಾನವು ಅಪರಿಪೂರ್ಣವೆಂಬ ತಮ್ಮ ನಿಲುವಿನ ಸಮರ್ಥನೆಗೆಂದು ಐನ್‌ಸ್ಟೀನ್ ಅವರ ಹೇಳಿಕೆಗಳನ್ನು ಉದ್ಧರಿಸುವುದರ ಮೂಲಕ, ಅವರು ಆಳವಾದ ಧಾರ್ಮಿಕ ನಂಬಿಕೆಗಳಿದ್ದ ವ್ಯಕ್ತಿಯೆನ್ನುವುದನ್ನು ಸ್ಥಾಪಿಸಲು ಪ್ರಯತ್ನಿಸುತ್ತಾರೆ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

2. 'ಮನುಷ್ಯ ಜೀವಿಗಳ ವರ್ತನೆ ಹಾಗೂ ಭವಿಷ್ಯದ ಬಗ್ಗೆ ತಲೆಕೆಡಿಸಿಕೊಳ್ಳುವ ದೇವರನ್ನು ನಾನು ನಂಬುವುದಿಲ್ಲ.'

ಈ ವಾಕ್ಯವನ್ನು **ಎಚ್. ನರಸಿಂಹಯ್ಯ** ಅವರು ಬರೆದಿರುವ **'ತೆರೆದ ಮನ'** ಎಂಬ ಕೃತಿಯಿಂದ ಆಯ್ದ **ಐನ್‌ಸ್ಟೀನ್ ಮತ್ತು ದೇವರು** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಐನ್‌ಸ್ಟೀನ್ ರವರು ಹೇಳಿದ್ದಾರೆ. 'ಕೆಟ್ಟದಕ್ಕೆ ಶಿಕ್ಷೆ ಕೊಟ್ಟು, ಒಳ್ಳೆಯದಕ್ಕೆ ಪ್ರತಿಫಲ ನೀಡುವ ಮತಧರ್ಮ ಶಾಸ್ತ್ರಗಳ ದೇವರಲ್ಲಿ ನನಗೆ ನಂಬಿಕೆಯಿಲ್ಲ. ನಾನು ಜಗತ್ತಿನಲ್ಲಿರುವ ಎಲ್ಲ ವಸ್ತುಗಳ ಕ್ರಮಬದ್ಧ ಸಂಯೋಜನೆ ಹಾಗೂ ಸಮನ್ವಯಗಳ ಮೂಲಕವೇ ತನ್ನ ಇರುವಿಕೆಯನ್ನು ತೋರಿಸಿಕೊಳ್ಳುವ ಸ್ಪಿನೋಜಾನ ದೇವರನ್ನು ನಂಬುತ್ತೇನೆ. ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

3. 'ಮೌಲ್ಯಗಳಿಗೆ ಬೆಲೆಕೊಡುವ ಮನುಷ್ಯನಾಗು'

ಈ ವಾಕ್ಯವನ್ನು **ಎಚ್. ನರಸಿಂಹಯ್ಯ** ಅವರು ಬರೆದಿರುವ **'ತೆರೆದ ಮನ'** ಎಂಬ ಕೃತಿಯಿಂದ ಆಯ್ದ **ಐನ್‌ಸ್ಟೀನ್ ಮತ್ತು ದೇವರು** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಐನ್‌ಸ್ಟೀನ್ ರವರು ಹೇಳಿದ್ದಾರೆ. ಐನ್‌ಸ್ಟೀನರ ಬದುಕನ್ನು ರೂಪಿಸಿದ ಎರಡು ಹೇಳಿಕೆಗಳು ಆಳವಾದ ಒಳನೋಟಗಳನ್ನು ನೀಡುತ್ತವೆ. ಈ ಹೇಳಿಕೆಗಳು ಸಾಮಾನ್ಯವಾಗಿ ಎಲ್ಲ ಮನುಷ್ಯರಿಗೆ ಮುಖ್ಯವಾಗಿವೆ ಎಂದು ಚರ್ಚಿಸುವಾಗ ಈ ಮೇಲಿನ ಮಾತು ವ್ಯಕ್ತವಾಗಿದೆ

**3. ಭಾಷಾಭ್ಯಾಸ :**

**ಅ) ಕೆಳಗಿನ ಪದಗಳನ್ನು ಬಿಡಿಸಿ ಸಂಧಿಯನ್ನು ಹೆಸರಿಸಿರಿ.**

1. ಶತಮಾನೋತ್ಸವ=ಶತಮಾನ+ಉತ್ಸವ – ಗುಣಸಂಧಿ
2. ಮಾತ್ರವಲ್ಲ = ಮಾತ್ರ + ಅಲ್ಲ – ಆಗಮಸಂಧಿ
3. ವಾಗ್ವಾದ = ವಾಕ್ + ವಾದ – ಜಸ್ತ್ವಸಂಧಿ
4. ಹೇಳಿಕೆಯಿಂದ= ಹೇಳಿಕೆ + ಇಂದ –ಆಗಮಸಂಧಿ
5. ದೇವರಲ್ಲಿ= ದೇವರು + ಅಲ್ಲಿ –ಲೋಪಸಂಧಿ
6. ಮನದಟ್ಟು = ಮನ + ತಟ್ಟು –ಆದೇಶಸಂಧಿ

**ಆ) ಕೆಳಗೆ ನೀಡಿರುವ ಪದಗಳನ್ನು ಸ್ವಂತವಾಕ್ಯಗಳಲ್ಲಿ ಬರೆಯಿರಿ.**

1. ನಂಬಿಕೆ : ನನಗೆ ದೇವರಲ್ಲಿ ನಂಬಿಕೆ ಇರಬೇಕು.
2. ಅವಲಂಬಿಸು : ಮಕ್ಕಳು ತಂದೆ ತಾಯಿಯನ್ನು ಅವಲಂಬಿಸಿರುತ್ತಾರೆ.
3. ಅಧಿಕಾರ : ಅಧಿಕಾರ ಇದ್ದಾಗ ಉತ್ತಮ ಕೆಲಸಗಳನ್ನು ಮಾಡಬೇಕು.
4. ಆದರ್ಶ : ನಾವು ಗಾಂಧೀಜಿಯವರ ಆದರ್ಶಗಳನ್ನು ಪಾಲಿಸಬೇಕು.
5. ಮನದಟ್ಟಾಗು : ಗುರುಗಳು ಹೇಳಿದ ಪಾಠ ನನಗೆ ಮನದಟ್ಟಾಯಿತು.
6. ಉದ್ಧರಿಸು : ಕಠಿಣ ವಿಷಯಗಳನ್ನು ಉದ್ಧರಿಸುವುದರ ಮೂಲಕ ಅರ್ಥಮಾಡಿಸಬೇಕು.

**ಇ) ಕೆಳಗಿನ ಪದಗಳಲ್ಲಿರುವ ವಿಭಕ್ತಿ ಪ್ರತ್ಯಯಗಳನ್ನು ಪ್ರತ್ಯೇಕಿಸಿ ಹೆಸರಿಸಿರಿ.**

1. ವಿಜ್ಞಾನಿಗಳಲ್ಲಿ = ಅಲ್ಲಿ – ಸಪ್ತಮಿ ವಿಭಕ್ತಿ ಪ್ರತ್ಯಯ
2. ಹೆಸರನ್ನು = ಅನ್ನು – ದ್ವಿತೀಯ ವಿಭಕ್ತಿ ಪ್ರತ್ಯಯ
3. ದೇವರ = ಅ – ಷಷ್ಠೀ ವಿಭಕ್ತಿ ಪ್ರತ್ಯಯ
4. ಅವರಿಗೆ = ಗೆ – ಚತುರ್ಥಿ ವಿಭಕ್ತಿ ಪ್ರತ್ಯಯ
5. ಮತದಿಂದ = ಇಂದ – ತೃತೀಯ ವಿಭಕ್ತಿ ಪ್ರತ್ಯಯ
6. ಕಲ್ಪನೆಯ = ಅ – ಷಷ್ಠೀ ವಿಭಕ್ತಿ ಪ್ರತ್ಯಯ
7. ಧರ್ಮಕ್ಕೆ = ಕ್ಕೆ – ಚತುರ್ಥಿ ವಿಭಕ್ತಿ ಪ್ರತ್ಯಯ
8. ಬದುಕನ್ನು = ಅನ್ನು – ದ್ವಿತೀಯ ವಿಭಕ್ತಿ ಪ್ರತ್ಯಯ

**ಈ) ಕೆಳಗಿನ ಪದಗಳಿಗೆ ವಿರುದ್ಧಾರ್ಥ ಬರೆಯಿರಿ.**

ಧರ್ಮ x ಅಧರ್ಮ, ಅಪರಿಪೂರ್ಣ x ಪರಿಪೂರ್ಣ, ಅಗತ್ಯ x ಅನಗತ್ಯ, ಸ್ಪಷ್ಟ x ಅಸ್ಪಷ್ಟ,
ಶಿಕ್ಷೆ x ರಕ್ಷೆ, ನಂಬಿಕೆ x ಅಪನಂಬಿಕೆ, ಹಿಂಸೆ x ಅಹಿಂಸೆ. ಸಹಜ x ಅಸಹಜ,
ಯಶಸ್ಸು x ಅಪಯಶಸ್ಸು, ಒರಟು x ಮೃದು, ಅನ್ಯಾಯ x ನ್ಯಾಯ, ಅನುಚಿತ x ಉಚಿತ,
ಬಹಿರಂಗ x ಅಂತರಂಗ.

**ಉ) ಪದೇ ಪದೇ – ಇಂತಹ ಐದು ದ್ವಿರುಕ್ತಿಗಳನ್ನು ಬರೆಯಿರಿ.**
**ಉದಾ: ಬೇಗಬೇಗ, ಬನ್ನಿಬನ್ನಿ, ಬೇರೆಬೇರೆ, ನಿಲ್ಲುನಿಲ್ಲು, ತುತ್ತತುದಿ.**

**4. ಸೈದ್ಧಾಂತಿಕ ವ್ಯಾಕರಣ :**

* **ದ್ವಿರುಕ್ತಿ** : ಒಂದೇ ಉಕ್ತಿಯನ್ನು ಎರಡು ಬಾರಿ ಹೇಳುವುದು 'ದ್ವಿ' ಎಂದರೆ ಎರಡು, 'ಉಕ್ತಿ' ಎಂದರೆ ಮಾತು ಎಂದರ್ಥ ಉದಾ: ಕಟ್ಟಕಡೆ, ಕೆಳಕೆಳಗೆ, ತುತ್ತತುದಿ, ಮೊತ್ತಮೊದಲು, ಹೊಚ್ಚಹೊಸದು, ಒಂದೊಂದು, ಬೇಗಬೇಗ, ನಿಲ್ಲುನಿಲ್ಲು,ಬನ್ನಿಬನ್ನಿ.

* **ಜೋಡುನುಡಿ** : ಅರ್ಥವಿರುವ ಪದದೊಂದಿಗೆ ಸಮಾನಾರ್ಥ, ವಿರುದ್ಧಾರ್ಥ ಇಲ್ಲವೆ ಅರ್ಥರಹಿತ ಪದಗಳನ್ನು ಜೋಡಿಸಿ ಬಳಸುವುದು ಉದಾ: ಸಮಾನಾರ್ಥಕ ಜೋಡುನುಡಿ : ಉಡಿಗೆತೊಡಿಗೆ, ಅವಳಿಜವಳಿ, ಟಾಪ್‌ಮೇಲೆ, ಸಿಡುಕುಮಿಡುಕು.

ವಿರುದ್ಧಾರ್ಥಕ ಜೋಡುನುಡಿ : ಸಿಹಿ ಕಹಿ, ನೋವು ನಲಿವು, ಆದಿ ಅಂತ್ಯ ಎರಡನೇ ಪದ ಅರ್ಥರಹಿತವಾಗಿರುವ

ಜೋಡುನುಡಿ –ಕೂಲಿನಾಲಿ, ಗಿಡಗಂಟೆ ಕಾಳುಕಡ್ಡಿ, ಹುಳುಹುಪ್ಪಟೆ

**ಅವ್ಯಯಗಳು:**

| ಕ್ರ ಸಂ | ಅವ್ಯಯದ ವಿಧಗಳು | ಉದಾಹರಣೆಗಳು |
|---|---|---|
| 1 | ಸಾಮಾನ್ಯ ಅವ್ಯಯ | ಚೆನ್ನಾಗಿ, ನೆಟ್ಟಗೆ, ತಟ್ಟನೆ, ಬಿಮ್ಮನೆ, ಸುಮ್ಮನೆ, ಬೇಗನೆ, ಹಾಗೆ |
| 2 | ಅನುಕರಣ ಅವ್ಯಯ | ಜುಳುಜುಳು, ಪಟಪಟ, ಧಗಧಗ, ಸುಯ್ಯನೆ, ದಡದಡ, ಢಣಢಣ |
| 3 | ಭಾವಸೂಚಕ ಅವ್ಯಯ | ಎಲಾ! ಅಯ್ಯೋ! ಅಕಟಕಟಾ! ಆಹಾ! ಭಲಾ! ಥೂ! ಅಬ್ಬಾ! |
| 4 | ಕ್ರಿಯಾರ್ಥಕ ಅವ್ಯಯ | ಉಂಟು, ಬೇಕು, ಬೇಡ, ಅಹುದು, ಸಾಕು, ಇಲ್ಲ, ಅಲ್ಲ, ಹೌದು |
| 5 | ಸಂಬಂಧಾರ್ಥಕ ಅವ್ಯಯ | ಮತ್ತು, ಅಥವಾ, ಆದ್ದರಿಂದ, ಆದುದರಿಂದ, ಅಲ್ಲದೆ, ಹಾಗಾದರೆ |
| 6 | ಕೃದಂತ ಅವ್ಯಯ | ಇರಲು, ಇರಲಾಗಿ, (ಬರುತ್ತಿರಲು, ಬರುತ್ತಿರಲಾಗಿ) |
| 7 | ತದ್ಧಿತಾಂತ ಅವ್ಯಯ | ಅಂತೆ, ತನಕ, ವರೆಗೆ, ಮಟ್ಟಿಗೆ (ರಾಮನಂತೆ, ಮನೆತನಕ...) |
| 8 | ಅವಧಾರಣಾರ್ಥಕ ಅವ್ಯಯ | ಅದೇ, ಇದೇ, ನಾನೇ – ಇವುಗಳಲ್ಲಿರುವ 'ಏ' ಕಾರ |

## 8. ಭೀಷ್ಮ ಪ್ರತಿಜ್ಞೆ – ಎ. ಆರ್. ಕೃಷ್ಣಶಾಸ್ತ್ರೀ

**ಕೃತಿಕಾರರ ಪರಿಚಯ :**

- ಎ. ಆರ್. **ಕೃಷ್ಣಶಾಸ್ತ್ರೀ** ಅವರು 1890 ರ ಫೆಬ್ರವರಿ 12 ರಂದು ಚಿಕ್ಕಮಗಳೂರು ಜಿಲ್ಲೆಯ ಅಂಬಳೆ ಗ್ರಾಮದಲ್ಲಿ ಹುಟ್ಟಿದರು.
- ಇವರು ಶ್ರೀಪತಿಯ ಕಥೆಗಳು, ಕಥಾಮೃತ, ವಚನ ಭಾರತ, ನಿರ್ಮಲ ಭಾರತಿ, ಭಾಸಕವಿ, ಸಂಸ್ಕೃತ ನಾಟಕ, ಸರ್ವಜ್ಞ, ಬಂಕಿಮಚಂದ್ರ ಮುಂತಾದ ಶ್ರೇಷ್ಠ ಕೃತಿಗಳನ್ನು ರಚಿಸಿದ್ದಾರೆ.
- ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ.

**ಅಭ್ಯಾಸ**

**1.ಪದಗಳ ಅರ್ಥ :**

**ಅನುರೂಪ** – ಯೋಗ್ಯವಾದವನು
**ಅರಿಕೆ** – ಬಿನ್ನಹ
**ಕೊರಗು** – ನೋವು; ಸಂಕಟಪಡು.
**ದಾಶರಾಜ** – ಬೆಸ್ತರವನು; ಸತ್ಯವತಿಯ ತಂದೆ.
**ಧರ್ಮಾತ್ಮ** – ಸದಾಚಾರ ಸಂಪನ್ನ
**ಪುಂಖಾನುಪುಂಖವೃಷ್ಟಿ** – ಹೂವಿನಮಳೆ
**ಬ್ರಹ್ಮಚಾರಿ** – ಮದುವೆ ಆಗದಿರುವವನು
**ಶ್ಲಾಘ್ಯ** – ಹೊಗಳಿಕೆಗೆ ತಕ್ಕುದಾದ
**ಸದೃಶ** – ಸಮಾನವಾದ
**ಅಪ್ಸರೆ** – ದೇವತಾ ಸ್ತ್ರೀ
**ಕಳವಳ** – ಆತಂಕದ ಮನಃಸ್ಥಿತಿ
**ಕೋರಿಕೆ** – ಮನವಿ
**ದೇವವ್ರತ** – ಭೀಷ್ಮನ ಹೆಸರು
**ಪಶ್ಚಾತ್ತಾಪ** – ತಪ್ಪಿನ ಅರಿವು
**ಪ್ರತಿಜ್ಞೆ** – ಶಪಥ; ವಾಗ್ದಾನ.
**ಮರ್ತ್ಯರು** – ಮಾನವರು
**ಸತ್ಯವಂತ** – ಸತ್ಯ ಮಾರ್ಗದಲ್ಲಿ ನಡೆಯುವವ.
**ಹಗೆ** – ದ್ವೇಷ

**2. ಪ್ರಶ್ನೆಗಳು**

**ಅ) ಬಿಟ್ಟ ಸ್ಥಳಗಳನ್ನು ನೀಡಿರುವ ನಾಲ್ಕು ಆಯ್ಕೆಗಳಿಂದ ಸೂಕ್ತವಾದುದನ್ನು ಆಯ್ದು ಬರೆಯಿರಿ.**

1. ಶಂತನು ಸತ್ಯವತಿಯನ್ನು ________ ನದಿ ತೀರದಲ್ಲಿ ಭೇಟಿಯಾದನು.
ಅ) ಗಂಗಾ ಬ) ಯಮುನಾ ಕ) ಕಾವೇರಿ ಡ) ಬ್ರಹ್ಮಪುತ್ರ
2. ದೇವವ್ರತನು ಪ್ರತಿಜ್ಞೆ ಮಾಡಿದ್ದು ________ ಅವರ ಆಸೆ ತಣಿಸಲು.
ಅ) ಸತ್ಯವತಿ ಬ) ದಾಶರಾಜ ಕ) ಶಂತನುವು ಡ) ದೇವರು
3. ಎ.ಆರ್. ಕೃಷ್ಣಶಾಸ್ತ್ರೀ ಅವರ ________ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.
ಅ) ಬಂಕಿಮಚಂದ್ರ ಬ) ವಚನಭಾರತ ಕ) ಶ್ರೀಪತಿಯ ಕಥೆಗಳು ಡ) ಕಥಾಮೃತ

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಶಂತನು ಯಾವ ರಾಜ್ಯದ ರಾಜನಾಗಿದ್ದನು?

ಶಂತನು ಹಸ್ತಿನಾಪುರದ ರಾಜ್ಯದ ರಾಜನಾಗಿದ್ದನು.

2. ಭೀಷ್ಮನ ಪೂರ್ವದ ಹೆಸರೇನು?

ಭೀಷ್ಮನ ಪೂರ್ವದ ಹೆಸರು ದೇವವ್ರತ.

3. ಶಂತನು ಯಾವುದಕ್ಕೆ ಹೆಸರುವಾಸಿಯಾಗಿದ್ದನು?

ಶಂತನು ಧರ್ಮಾತ್ಮನೆಂದೂ ಸತ್ಯವಂತನೆಂದೂ ಹೆಸರುಗೊಂಡು ಹಸ್ತಿನಾಪುರದಲ್ಲಿ ರಾಜ್ಯವಾಳುತ್ತಿದ್ದನು.

4. ದೇವವ್ರತನು ತನ್ನ ತಂದೆಯ ಚಿಂತನೆಯ ಕಾರಣವನ್ನು ಯಾರಿಂದ ತಿಳಿದುಕೊಂಡನು?

ದೇವವ್ರತನು ತನ್ನ ತಂದೆಯ ಚಿಂತನೆಯ ಕಾರಣವನ್ನು ವೃದ್ಧ ಮಂತ್ರಿಯ ಹತ್ತಿರ ತಿಳಿದುಕೊಂಡನು.

5. ಶಂತನು ಮದುವೆ ಆಗಲು ಬಯಸಿದ ಬೆಸ್ತರ ಮಗಳ ಹೆಸರೇನು?

ಶಂತನು ಮದುವೆ ಆಗಲು ಬಯಸಿದ ಬೆಸ್ತರ ಮಗಳ ಹೆಸರು ಸತ್ಯವತಿ.

6. ಶಂತನುವು ಭೀಷ್ಮನನ್ನು ಏನೆಂದು ಹರಸಿದನು?

ಶಂತನುವು ಭೀಷ್ಮನನ್ನು "ನೀನು ಸ್ವಚ್ಛಂದ ಮರಣನಾಗು! ನೀನಾಗಿ ಸಾವನ್ನು ಅಪೇಕ್ಷಿಸುವವರೆಗೂ ನಿನಗೆ ಸಾವು ಬರದೆ ಇರಲಿ!" ಎಂದು ಹರಸಿದನು.

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಶಂತನು ರಾಜನಲ್ಲಿದ್ದ ವ್ಯಕ್ತಿತ್ವದ ಗುಣವಿಶೇಷತೆಗಳೇನು?

ಶಂತನು ಧರ್ಮಾತ್ಮನೆಂದೂ ಸತ್ಯವಂತನೆಂದೂ ಹೆಸರುಗೊಂಡು ಹಸ್ತಿನಾಪುರದಲ್ಲಿ ರಾಜ್ಯವಾಳುತ್ತಿದ್ದನು. ಅವನು ನೋಡುವುದಕ್ಕೆ ಚಂದ್ರನಂತೆ ಸುಂದರನಾಗಿದ್ದರೂ, ತೇಜಸ್ಸಿನಲ್ಲಿ ಸೂರ್ಯನಂತೆಯೂ, ವೇಗದಲ್ಲಿ ವಾಯುವಿನಂತೆಯೂ ಇದ್ದನು. ಕೋಪಬಂದಾಗ ಯಮನಂತಿದ್ದರೂ ತಾಳ್ಮೆಯಲ್ಲಿ ಭೂಮಿಯಂತೆ ಇದ್ದನು.

2. ಶಂತನು ದೇವವ್ರತನನ್ನು ಹಸ್ತಿನಾಪುರದ ಯುವರಾಜನಾಗಿ ಏಕೆ ಮಾಡಿದನು?

ದೇವವ್ರತನೂ (ಭೀಷ್ಮ) ತಂದೆಯಂತೆಯೇ ರೂಪವಂತನಾಗಿ ನಡೆನುಡಿಗಳಲ್ಲಿ ಅವನನ್ನೇ ಹೋಲುತ್ತ, ಅವನಂತೆಯೇ ವಿದ್ಯಾವಂತನೂ ಶಸ್ತ್ರಾಸ್ತ್ರ ನಿಪುಣನೂ ಬಲಶಾಲಿಯೂ ಸತ್ವಶಾಲಿಯೂ ಆದನು. ಆಗ ಅವನನ್ನು ಶಂತನುವು ಯುವರಾಜನಾಗಿ ಮಾಡಿದನು.

3. ಶಂತನು ಮತ್ತು ಬೆಸ್ತರ ಹುಡುಗಿಯ ಜೊತೆ ನಡೆದ ಸಂಭಾಷಣೆ ಏನು?

ಶಂತನುವು ಬೆಸ್ತರ ಹುಡುಗಿಯನ್ನು ಕಂಡು "ನೀನು ಯಾರು? ಇಲ್ಲಿ ಏನು ಮಾಡುತ್ತಿರುವೆ?" ಎಂದು ಪ್ರಶ್ನೆಮಾಡಿದನು. ಅದಕ್ಕೆ ಅವಳು "ನಾನು ಬೆಸ್ತರ ಅರಸನ ಮಗಳು; ಧರ್ಮಾರ್ಥವಾಗಿ ದೋಣಿ ನಡೆಸುತ್ತೇನೆ. ಇದು ನಮ್ಮ ತಂದೆ ನನಗೆ ವಹಿಸಿಕೊಟ್ಟಿರುವ ಕೆಲಸ" ಎಂದಳು.

4. ಶಂತನು 'ಮಗಳನ್ನು ಮದುವೆ ಮಾಡಿಕೊಡಿ' ಎಂದು ಕೇಳಿದಾಗ ಬೆಸ್ತರವನು ಏನೆಂದು ಹೇಳಿದನು?

ಅವನು "ಮಹಾರಾಜ! ಹೆಣ್ಣಾಗಿ ಹುಟ್ಟಿದ ಮೇಲೆ ಅವಳನ್ನು ಒಬ್ಬ ವರನಿಗೆ ಕೊಟ್ಟೇಕೊಡಬೇಕು. ನೀನು ಅವಳನ್ನು ನಿನ್ನ ಧರ್ಮಪತ್ನಿಯಾಗಿ ಮಾಡಿಕೊಳ್ಳುವೆಯಾದರೆ ಪರಮ ಸಂತೋಷ. ನಿನಗೆ ಸದೃಶನಾದ ವರನು ಮತ್ತಾರು ಸಿಕ್ಕಿಯಾನು! ಆದರೆ ನನ್ನ ಮನಸ್ಸಿನಲ್ಲಿ ಒಂದು ಕೋರಿಕೆ ಇದೆ. ಅದನ್ನು ನೆರವೇರಿಸುವುದಾಗಿ ನೀನು ಪ್ರತಿಜ್ಞೆ ಮಾಡುವುದಾದರೆ ಆಗಬಹುದು ನೀನು ಸತ್ಯವಂತ, ಆಡಿದ ಮಾತನ್ನು ನಡೆಸುತ್ತೀಯೆ ಎಂದು ಹೇಳಿದನು.

5. ಬೆಸ್ತರವನು ಶಂತನುನನ್ನು ಏನೆಂದು ಕೋರಿದನು?

ಯಮುನಾ ನದಿ ಹತ್ತಿರ ಕಾಡಿನಲ್ಲಿ ಬೇಟೆಗೆಂದು ಹೋದ ಶಂತನು ಒಬ್ಬ ಬೆಸ್ತರ ಹುಡುಗಿಯನ್ನು ಕಂಡು ವಿವಾಹವಾಗುವಂತೆ ಕೇಳಿದನು. ಆಗ ಅವಳು ತನ್ನ ತಂದೆ ಒಪ್ಪಿಗೆ ನೀಡಿದರೆ ಮದುವೆಯಾಗುವುದಾಗಿ ತೀಳಿಸಿದಳು. ಶಂತನು ಬೆಸ್ತರ ಅರಸನ ಬಳಿ ಹೋಗಿ ಮದುವೆಯ ವಿಚಾರವನ್ನು ಪ್ರಸ್ತಾಪಿಸಿದನು. ಆಗ ದಾಶರಾಜನು "ಮಹಾರಾಜ! ನಿನಗೆ ಇವಳ ಹೊಟ್ಟೆಯಲ್ಲಿ ಹುಟ್ಟುವ ಮಗನು ನಿನ್ನ ಕಾಲಾನಂತರ ರಾಜನಾಗಬೇಕು; ಇದೇ ನನ್ನ ಕೋರಿಕೆ!" ಎಂದನು.

6. ಚಿಂತಾಮಗ್ನನಾಗಿದ್ದ ಶಂತನುವನ್ನು ದೇವವ್ರತನು ಏನೆಂದು ಕೇಳಿದನು?

ಚಿಂತಾಮಗ್ನನಾಗಿದ್ದ ತಂದೆಯನ್ನು ಕಂಡು ದೇವವ್ರತನು "ಅಪ್ಪಾ! ನಿನಗೆ ಎಲ್ಲವೂ ಕ್ಷೇಮವಾಗಿದೆ; ರಾಜರು ವಿಧೇಯರಾಗಿದ್ದಾರೆ. ಹೀಗಿದ್ದರೂ ಏಕೆ ಏನೋ ಯೋಚನೆ ಮಾಡುತ್ತ ಕೊರಗುತ್ತಿದ್ದೀಯೆ? ಯಾರೊಡನೆಯೂ ಮಾತನಾಡುವುದಿಲ್ಲ?" ಎಂದು ಕೇಳಿದನು.

7. ಶಂತನು ದೇವವ್ರತನಿಗೆ ತನ್ನ ಚಿಂತನೆಗೆ ಕಾರಣ ಏನೆಂದು ತಿಳಿಸಿದನು?

ಶಂತನುವು "ಮಗು! ನಮ್ಮ ಈ ಹಿರಿಯಮನೆತನಕ್ಕೆ ನೀನು ಒಬ್ಬನೇ ಮಗ; ಮನುಷ್ಯರು ಮರ್ತ್ಯರು, ನಿತ್ಯರಲ್ಲ. ನಿನಗೇನಾದರೂ ವಿಪತ್ತು ಸಂಭವಿಸಿದರೆ ನಮ್ಮ ಕುಲವು ನಿಂತುಹೋಗುತ್ತದೆ; ನೀನೇನೋ ಒಬ್ಬನಾದರೂ ನೂರು ಮಕ್ಕಳಿಗಿಂತ ಹೆಚ್ಚಾದವನೇಯೆ; ನನಗೂ ಸುಮ್ಮಸುಮ್ಮನೆ ಮತ್ತೆ ಹೆಂಡತಿಯನ್ನು ಕಟ್ಟಿಕೊಳ್ಳುವುದಕ್ಕೆ ಇಷ್ಟವಿಲ್ಲ; ಸಂತತಿ ನಷ್ಟವಾಗಬಾರದೆಂಬುದಿಷ್ಟೇ ನನ್ನ ಕೋರಿಕೆ; ನೀನು ಎಲ್ಲಾದರೂ ಕ್ಷೇಮವಾಗಿರು ಮಗು! ಆದರೆ 'ಒಬ್ಬ ಮಗ ಮಗನಲ್ಲ'

ಎಂದು ಧರ್ಮಬಲ್ಲವರು ಹೇಳುತ್ತಾರೆ. ನೀನೋ ಶೂರ; ಅವಮರ್ಯಾದೆಯನ್ನು ಸಹಿಸದವನು; ಮೂರು ಹೊತ್ತೂ ಶಸ್ತ್ರಗಳಲ್ಲಿಯೇ ಕೈ ಇಟ್ಟುಕೊಂಡಿರುವವನು. ಇಂಥವನಿಗೆ ಶಸ್ತ್ರದಿಂದಲೇ ಕೊನೆ. ಆದ್ದರಿಂದ ನೀನೇನಾದರೂ ಶಾಂತನಾಗಿ ಬಿಟ್ಟರೆ ಏನುಗತಿ ಎಂದು ಕಳವಳಕ್ಕೆ ಸಿಕ್ಕಿದ್ದೇನೆ. ಇದೇ ಮಗು ನನ್ನ ಚಿಂತೆಗೆ ಕಾರಣ!" ಎಂದು ಉತ್ತರಕೊಟ್ಟನು.

8. ದಾಶರಾಜನು ದೇವವ್ರತನನ್ನು ಉದ್ದೇಶಿಸಿ ಏನು ಹೇಳಿದನು?

ದೇವವ್ರತನನ್ನು ಕುರಿತು "ಅಯ್ಯಾ ಇಂಥ ಶ್ಲಾಘ್ಯವಾದ ಸಂಬಂಧ ಒದಗಿ ಬಂದಿರುವಾಗ ಅದನ್ನು ಕಳೆದುಕೊಂಡರೆ ಯಾರೇ ಆದರೂ ಪಶ್ಚಾತ್ತಾಪ ಪಡಬೇಕಾಗುವುದು. ನಿಮ್ಮಂಥ ಗುಣಶಾಲಿಗಳು ಮತ್ತಾರಿದ್ದಾರೆ? ಆದರೆ ಹೆಣ್ಣಿನ ತಂದೆಯಾದ್ದರಿಂದ ಒಂದು ವಿಷಯವನ್ನು ಹೇಳಬೇಕೆನ್ನಿಸುತ್ತದೆ. ಮುಂದೆ ಇದು ದೊಡ್ಡ ಹಗೆತನಕ್ಕೆ ಕಾರಣವಾದೀತೇನೋ ಎಂಬುದೊಂದೇ ನನಗೆ ಹೆದರಿಕೆ. ನಿನಗೆ ಯಾರ ಮೇಲಾದರೂ ಕೋಪಬಂದಿತೆಂದರೆ ಅವನು ಸುಖವಾಗಿ ಬಾಳಲಾರ. ಕೊಟ್ಟು ತಂದು ಮಾಡುವುದರಲ್ಲಿ ಇದೊಂದೇ ನನಗೆ ಕಾಣುವ ದೋಷ. ಇನ್ನೇನೂ ಇಲ್ಲ" ಎಂದನು.

9. ದಾಶರಾಜನು ದೇವವ್ರತನನ್ನು ಎರಡನೇ ಬಾರಿ ಏನೆಂದು ಕೋರಿದನು?

ಬೆಸ್ತನು ಮತ್ತೆ "ರಾಜ್ಯವಿಚಾರದಲ್ಲಿ ಇಷ್ಟು ಕಠಿಣವಾದ ಪ್ರತಿಜ್ಞೆ ಮಾಡಿ ತಂದೆಗೆ ಮದುವೆ ಮಾಡಿಸುವುದಕ್ಕೂ ಈ ಹೆಣ್ಣನ್ನು ಕೊಡಿಸುವುದಕ್ಕೂ ಧರ್ಮಾತ್ಮನಾದ ನೀನು ಅಧಿಕಾರವುಳ್ಳವನಾಗಿದ್ದೀಯೆ; ಆದರೆ ಇನ್ನೊಂದು ಮಾತಿದೆ. ಹೆಣ್ಣಿನ ತಂದೆ ಅದನ್ನು ಆಡುವುದು ಸ್ವಭಾವ. ರಾಜರ ಮುಂದೆ ಈಗ ನೀನು ಮಾಡಿದ ಪ್ರತಿಜ್ಞೆ ನಿನಗೆ ಅನುರೂಪವಾದದ್ದೇಯೆ. ಅದು ನಡೆಯುತ್ತದೆ. ಅದರಲ್ಲೇನೂ ಸಂಶಯವಿಲ್ಲ. ಆದರೆ ನಿನ್ನ ಮಗ ಸುಮ್ಮನಿರುತ್ತಾನೋ? ಆ ವಿಚಾರದಲ್ಲಿ ನನಗೆ ಸಂಶಯ!" ಎಂದನು

10. ದೇವವ್ರತನು ದಾಶರಾಜನ ಮುಂದೆ ಮಾಡಿದ ಪ್ರತಿಜ್ಞೆಗಳಾವುವು?

"ಇಗೋ ನನ್ನ ಅಭಿಮತವನ್ನು ಹೇಳುತ್ತೇನೆ ಕೇಳು, ಇಂಥ ಮಾತನ್ನು ಹಿಂದೆ ಹುಟ್ಟಿದವನು ಮುಂದೆ ಹುಟ್ಟುವವನು ಯಾವನೂ ಹೇಳಲಾರ. ನೀನು ಸೂಚಿಸಿದಂತೆಯೇ ನಡೆಸಿಕೊಡುತ್ತೇನೆ. ಈಕೆಯಲ್ಲಿ ಮುಂದೆ ಹುಟ್ಟುವ ಮಗನು ನಮಗೆ ರಾಜನಾಗುತ್ತಾನೆ! ಇದು ಸತ್ಯ!" ಎಂದನು.

**ಈ) ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಶಂತನುವಿಗೆ ಒದಗಿ ಬಂದ ಚಿಂತೆಯನ್ನು ಭೀಷ್ಮನು ಹೇಗೆ ಪರಿಹರಿಸಿದನು?

ದೇವವ್ರತನು ಮಹಾಬುದ್ಧಿಶಾಲಿ; ಆದ್ದರಿಂದ ಅರ್ಥವೇನು ಎಂದು ಯೋಚಿಸುತ್ತ ತನ್ನ ತಂದೆಗೆ ಆಪ್ತನಾಗಿದ್ದ ವೃದ್ಧ ಮಂತ್ರಿಯ ಹತ್ತಿರಕ್ಕೆ ಹೋಗಿ ಅವನನ್ನು ತನ್ನ ತಂದೆಯ ಚಿಂತೆಗೆ ಕಾರಣವೇನೆಂದು ಕೇಳಿದನು. ಅವನಿಂದ ನಿಜವಾದ ಸಂಗತಿ ತಿಳಿಯಲು ದೇವವ್ರತನು ಹಿರಿಯರಾಗಿದ್ದ ಕ್ಷತ್ರಿಯರನ್ನು ಕರೆದುಕೊಂಡು ದಾಶರಾಜನಲ್ಲಿಗೆ ಹೋಗಿ ತನ್ನ ತಂದೆಗೆ ಹೆಣ್ಣು ಕೊಡಬೇಕೆಂದು ಕೇಳಿದನು.  ದಾಶರಾಜನು ಅವನನ್ನು ಆದರದಿಂದ ಬರಮಾಡಿಕೊಂಡು ಸತ್ಕರಿಸಿ,ಕುಳ್ಳಿರಿಸಿ, ದೇವವ್ರತನನ್ನು ಕುರಿತು "ಅಯ್ಯಾ ಇಂಥ ಶ್ಲಾಘ್ಯವಾದ ಸಂಬಂಧ ಒದಗಿ ಬಂದಿರುವಾಗ ಅದನ್ನು ಕಳೆದುಕೊಂಡರೆ ಯಾರೇ ಆದರೂ ಪಶ್ಚಾತ್ತಾಪ ಪಡಬೇಕಾಗುವುದು. ನಿಮ್ಮಂಥ ಗುಣಶಾಲಿಗಳು ಮತ್ತಾರಿದ್ದಾರೆ? ಆದರೆ ಹೆಣ್ಣಿನ ತಂದೆಯಾದ್ದರಿಂದ ಒಂದು ವಿಷಯವನ್ನು ಹೇಳಬೇಕೆನ್ನಿಸುತ್ತದೆ. ಮುಂದೆ ಇದು ದೊಡ್ಡ ಹಗೆತನಕ್ಕೆ ಕಾರಣವಾದೀತೇನೋ ಎಂಬುದೊಂದೇ ನನಗೆ ಹೆದರಿಕೆ. ನಿನಗೆ ಯಾರ ಮೇಲಾದರೂ ಕೋಪಬಂದಿತೆಂದರೆ ಅವನು ಸುಖವಾಗಿ ಬಾಳಲಾರ. ಕೊಟ್ಟು ತಂದು ಮಾಡುವುದರಲ್ಲಿ ಇದೊಂದೇ ನನಗೆ ಕಾಣುವ ದೋಷ. ಇನ್ನೇನೂ ಇಲ್ಲ" ಎಂದನು.

ಈ ಮಾತನ್ನು ಕೇಳಿದ ದೇವವ್ರತನು "ಇಗೋ ನನ್ನ ಅಭಿಮತವನ್ನು ಹೇಳುತ್ತೇನೆ ಕೇಳು, ಇಂಥ ಮಾತನ್ನು ಹಿಂದೆ ಹುಟ್ಟಿದವನು ಮುಂದೆ ಹುಟ್ಟುವವನು ಯಾವನೂ ಹೇಳಲಾರ. ನೀನು ಸೂಚಿಸಿದಂತೆಯೇ ನಡೆಸಿಕೊಡುತ್ತೇನೆ. ಈಕೆಯಲ್ಲಿ ಮುಂದೆ ಹುಟ್ಟುವ ಮಗನು ನಮಗೆ ರಾಜನಾಗುತ್ತಾನೆ! ಇದು ಸತ್ಯ!" ಎಂದನು. ಬೆಸ್ತನು ಮತ್ತೆ "ರಾಜ್ಯ ವಿಚಾರದಲ್ಲಿ ಇಷ್ಟು ಕಠಿಣವಾದ ಪ್ರತಿಜ್ಞೆ ಮಾಡಿ ತಂದೆಗೆ ಮದುವೆ ಮಾಡಿಸುವುದಕ್ಕೂ ಈ ಹೆಣ್ಣನ್ನು ಕೊಡಿಸುವುದಕ್ಕೂ ಧರ್ಮಾತ್ಮನಾದ ನೀನು ಅಧಿಕಾರವುಳ್ಳವನಾಗಿದ್ದೀಯೆ; ಆದರೆ ಇನ್ನೊಂದು ಮಾತಿದೆ. ಹೆಣ್ಣಿನ ತಂದೆ ಅದನ್ನು ಆಡುವುದು ಸ್ವಭಾವ. ರಾಜರ ಮುಂದೆ ಈಗ ನೀನು ಮಾಡಿದ ಪ್ರತಿಜ್ಞೆ ನಿನಗೆ ಅನುರೂಪವಾದದ್ದೇಯೆ. ಅದು ನಡೆಯುತ್ತದೆ. ಅದರಲ್ಲೇನೂ ಸಂಶಯವಿಲ್ಲ. ಆದರೆ ನಿನ್ನ ಮಗ ಸುಮ್ಮನಿರುತ್ತಾನೋ? ಆ ವಿಚಾರದಲ್ಲಿ ನನಗೆ ಸಂಶಯ!" ಎಂದನು. ಅವನ ಅಭಿಪ್ರಾಯವನ್ನು ತಿಳಿದು ದೇವವ್ರತನು " ನಾನು ಬ್ರಹ್ಮಚಾರಿಯಾಗಿಯೇ ಇರುತ್ತೇನೆ.ಮಕ್ಕಳಿಲ್ಲದಿದ್ದರೂ ನನಗೆ ಉತ್ತಮವಾದ ಲೋಕ ದೊರೆಯುತ್ತದೆ" ಎಂದು ಪ್ರತಿಜ್ಞೆ ಮಾಡಿದನು. ಅನಂತರ ಭೀಷ್ಮನು ಸತ್ಯವತಿ ಎಂಬ ಆ ಹುಡುಗಿಯನ್ನು ಕುರಿತು "ಬಾ ತಾಯಿ! ರಥವನ್ನು ಹತ್ತು ನಮ್ಮ ಮನೆಗೆ ಹೋಗೋಣ" ಎಂದು ರಥ ಹತ್ತಿಸಿ ಹಸ್ತಿನಾಪುರಕ್ಕೆ ಕರೆದುಕೊಂಡು ಹೋಗಿ ತಂದೆಗೆ ಎಲ್ಲವನ್ನೂ ಭಿನ್ನವಿಸಿದನು.

2. ಭೀಷ್ಮನು ಜನ್ಮತಾಳಿದ ಕಥೆಯನ್ನು ವಿವರಿಸಿ?

ಭರತವಂಶದಲ್ಲಿ ಶಂತನುವೆಂಬ ಪ್ರಸಿದ್ಧನಾದ ರಾಜನಿದ್ದನು. ಹೀಗೆ ಅವನು ಒಂದು ದಿನ ಗಂಗಾನದಿಯ ತೀರದಲ್ಲಿ ಹೋಗುತ್ತಿರುವಾಗ, ಪರಮಸುಂದರಿಯೂ ರತ್ನಾಭರಣಭೂಷಿತಳೂ ದಿವ್ಯಾಂಬರಧರಳೂ ಆದ ಒಬ್ಬ ಹೆಂಗಸನ್ನು ಕಂಡು, ಅವಳ ರೂಪಸಂಪತ್ತಿನಿಂದ ಬೆರಗಾಗಿ ಹೋದನು. ಅವಳೂ ಹಾಗೆಯೇ ಅವನನ್ನು ಮೆಚ್ಚಿಕೊಂಡಳು. ಒಬ್ಬರನ್ನೊಬ್ಬರು ಎಷ್ಟು ಹೊತ್ತು ನೋಡಿದರೂ ಕಣ್ಣು ತಣಿಯವು. ಶಂತನುವೇ ಮೊದಲು ಅನುನಯದ ರೀತಿಯಿಂದ ಮಾತನಾಡಿಸಿ "ನೀನು

ಯಾರು ಸುಂದರಿ? ದೇವಿಯೋ ದಾನವಿಯೋ ಗಂಧರ್ವಳೋ ಅಪ್ಸರಳೋ ಯಕ್ಷಿಯೋ ಮಾನುಷಿಯೋ? ಯಾರಾದರೂ ಆಗಿರು; ನನ್ನ ಹೆಂಡತಿಯಾಗು!" ಎಂದನು. ಮಂದಹಾಸದಿಂದೊಡಗೂಡಿದ ಮೃದುಮಧುರವಾದ ಅವನ ಮಾತನ್ನು ಕೇಳಿ ಆಕೆಯು "ಆಗಲಿ, ಮಹಾರಾಜ! ನಿನ್ನ ರಾಣಿಯಾಗಲು ಒಪ್ಪುತ್ತೇನೆ. ಆದರೆ ಒಂದು ಕಟ್ಟುಪಾಡಿಗೆ ನೀನು ಒಪ್ಪಬೇಕು. ಶಂತನುವು ಪರಮ ಸಂತೋಷದಿಂದ ಒಪ್ಪಿಕೊಂಡು ಅವಳಲ್ಲಿ ಯಥೇಚ್ಛವಾದ ಸೌಖ್ಯವನ್ನು ಅನುಭವಿಸುತ್ತ ಇದ್ದನು. ಅವಳು ಏನು ಮಾಡಲಿ, ಅಡ್ಡಿ ಬರುತ್ತಿರಲಿಲ್ಲ. ಆಕೆಯ ಹೊಟ್ಟೆಯಲ್ಲಿ ಒಬ್ಬರಾದ ಮೇಲೆ ಒಬ್ಬರಂತೆ ಎಂಟು ಜನ ಗಂಡು ಮಕ್ಕಳಾದರು; ಅವರನ್ನು ಅವಳು ಹುಟ್ಟುತ್ತಿದ್ದ ಹಾಗೆಯೇ ಗಂಗೆಯಲ್ಲಿ ಮುಳುಗಿಸಿ ಬಿಡುವಳು; ಶಂತನುವಿಗೆ ಅದನ್ನು ನೋಡಿ ತುಂಬ ಸಂಕಟವಾಗುವುದು; ಆದರೆ ಅವಳೆಲ್ಲಿ ಬಿಟ್ಟು ಹೊರಟುಹೋಗುವಳೋ ಎಂದು ಹೆದರಿ ಸುಮ್ಮನಿರುತ್ತಿದ್ದನು. ಕೊನೆಗೆ ಎಂಟನೆಯ ಮಗುವು ಹುಟ್ಟಿದಾಗ ಅವನು ಸುಮ್ಮನಿರಲಾರದೆ, ದುಃಖ ಉಕ್ಕಿ ಬಂದು, ಮಗುವಿನ ಮೇಲೆ ಆಸೆಯಾಗಿ, "ತಡೆ ಪುತ್ರಘಾತಿನಿ! ಅದನ್ನು ಕೊಲ್ಲಬೇಡ! ನೀನು ಯಾರು? ಯಾರ ಮಗಳು? ಏಕೆ ಹೀಗೆ ಮಕ್ಕಳನ್ನು ಕೊಂದು ಕೊಂದು ಮಹಾಪಾಪ ಕಟ್ಟಿಕೊಳ್ಳುತ್ತೀಯೆ?" ಎಂದು ಕೇಳಿದನು. ಆಕೆ, "ಮಹಾರಾಜ, ನಿನಗೆ ಮಗನ ಮೇಲೆ ಆಸೆಯಾಯಿತಲ್ಲವೆ? ಆಗಲಿ, ನಿನ್ನ ಮಗನನ್ನು ಕೊಲ್ಲುವುದಿಲ್ಲ. ಆದರೆ ನಮ್ಮ ಕಟ್ಟುಪಾಡಿನಂತೆ ನಿನ್ನೊಡನೆ ಬಾಳುವೆಯು ಇಂದಿಗೆ ಮುಗಿಯಿತು; ನಾನು ಗಂಗೆ, ಜಹ್ನುವಿನ ಮಗಳು; ಈ ಮಕ್ಕಳು ಅಷ್ಟವಸುಗಳು; ವಸಿಷ್ಠ ಶಾಪದಿಂದ ಮನುಷ್ಯ ಜನ್ಮವನ್ನು ಪಡೆದಿದ್ದರು; ನಾನು ಅವರಿಗೆ ಮಾತುಕೊಟ್ಟಿದ್ದಂತೆ ಹುಟ್ಟು ಹುಟ್ಟುತ್ತಿದ್ದ ಹಾಗೆ ಅವರನ್ನು ಈ ಮನುಷ್ಯ ಜನ್ಮದಿಂದ ಬಿಡುಗಡೆ ಮಾಡಿದೆ. ನಿನಗೆ ಮಂಗಳವಾಗಲಿ. ನಾನು ಹೋಗಿ ಬರುತ್ತೇನೆ; ಮಹಾವ್ರತನಾದ ಈ ಮಗನನ್ನು ಕಾಪಾಡಿಕೋ!" ಎಂದು ಹೇಳಿ ಹೊರಟುಹೋದಳು. ಆ ಕೊನೆಯ ಮಗುವೆ ಭೀಷ್ಮನು.

**ಉ. ಸಂದರ್ಭದೊಡನೆ ವಿವರಿಸಿರಿ.**

1. ನಿಮ್ಮಂತ ಗುಣಶಾಲಿಗಳು ಮತ್ತಾರಿದ್ದಾರೆ?

ಈ ವಾಕ್ಯವನ್ನು **ಎ. ಆರ್. ಕೃಷ್ಣಶಾಸ್ತ್ರೀ** ಅವರು ಬರೆದಿರುವ **ಭೀಷ್ಮ ಪ್ರತಿಜ್ಞೆ ಎಂಬ** ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ. ಈ ಮಾತನ್ನು ದಾಶರಾಜನು ದೇವವ್ರತನಿಗೆ ಹೇಳಿದ್ದಾನೆ.ದೇವವ್ರತನು ಹಿರಿಯರಾಗಿದ್ದ ಕ್ಷತ್ರಿಯರನ್ನು ಕರೆದುಕೊಂಡು ದಾಶರಾಜನಲ್ಲಿಗೆ ಹೋಗಿ ತನ್ನ ತಂದೆಗೆ ಹೆಣ್ಣು ಕೊಡಬೇಕೆಂದು ಕೇಳಿದನು. ದಾಶರಾಜನು ಅವರನ್ನು ಆದರದಿಂದ ಬರಮಾಡಿಕೊಂಡು ಸತ್ಕರಿಸಿ "ಅಯ್ಯಾ ಇಂಥ ಶ್ಲಾಘ್ಯವಾದ ಸಂಬಂಧ ಒದಗಿ ಬಂದಿರುವಾಗ ಅದನ್ನು ಕಳೆದುಕೊಂಡರೆ ಯಾರೇ ಆದರೂ ಪಶ್ಚಾತ್ತಾಪ ಪಡಬೇಕಾಗುವುದುಎಂದು ಹೇಳುವಾಗ ಈ ಮಾತು ಬಂದಿದೆ.

2. ಒಬ್ಬ ಮಗ ಮಗನಲ್ಲ.

ಈ ವಾಕ್ಯವನ್ನು **ಎ. ಆರ್. ಕೃಷ್ಣಶಾಸ್ತ್ರೀ** ಅವರು ಬರೆದಿರುವ **ಭೀಷ್ಮ ಪ್ರತಿಜ್ಞೆ ಎಂಬ** ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ. ಈ ಮಾತನ್ನು ಶಂತನು ಮಹಾರಾಜನು ತನ್ನ ಮಗನಾದ ದೇವವ್ರತನಿಗೆ ಹೇಳಿದನು. ದೇವವ್ರತನು ತನ್ನ ತಂದೆಯ ಚಿಂತೆಗೆ ಕಾರಣವನ್ನು ಕೇಳಿದಾಗ, ಶಂತನುವು "ಮಗು! ನಮ್ಮ ಈ ಹಿರಿಯಮನೆತನಕ್ಕೆ ನೀನು ಒಬ್ಬನೇ ಮಗ; ಮನುಷ್ಯರು ಮರ್ತ್ಯರು, ನಿತ್ಯರಲ್ಲ. ನಿನಗೇನಾದರೂ ವಿಪತ್ತು ಸಂಭವಿಸಿದರೆ ನಮ್ಮ ಕುಲವು ನಿಂತುಹೋಗುತ್ತದೆ " ಎಂದು ಹೇಳುವಾಗ ಈ ಮಾತು ವ್ಯಕ್ತವಾಗಿದೆ.

3. ಮಕ್ಕಳಿಲ್ಲದಿದ್ದರೂ ನನಗೆ ಉತ್ತಮವಾದ ಲೋಕ ದೊರೆಯುತ್ತದೆ

ಈ ವಾಕ್ಯವನ್ನು **ಎ. ಆರ್. ಕೃಷ್ಣಶಾಸ್ತ್ರೀ** ಅವರು ಬರೆದಿರುವ **ಭೀಷ್ಮ ಪ್ರತಿಜ್ಞೆ ಎಂಬ** ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ. ಈ ಮಾತನ್ನು ದೇವವ್ರತನು ದಾಶರಾಜನಿಗೆ ಹೇಳಿದ್ದಾನೆ. ತನ್ನ ತಂದೆಯಾದ ಶಂತನುವಿಗೆ ದಾಶರಾಜನ ಮಗಳನ್ನು ಮದುವೆ ಮಾಡಿಕೊಡಲು ಕೇಳಿದಾಗ ದಾಶರಾಜನ ಪ್ರಶ್ನೆಗಳಿಗೆ ಉತ್ತರಿಸುತ್ತಾ ದೇವವ್ರತನು "ನಾನು ಬ್ರಹ್ಮಚಾರಿಯಾಗಿಯೇ ಇರುತ್ತೇನೆ" ಎಂದು ಹೇಳುವಾಗ ಈ ಮೇಲಿನ ಮಾತು ವ್ಯಕ್ತವಾಗಿದೆ.

4. ನೀನಾಗಿ ಸಾವನ್ನು ಅಪೇಕ್ಷಿಸುವವರೆಗೂ ನಿನಗೆ ಸಾವು ಬರದೆ ಇರಲಿ.

ಈ ವಾಕ್ಯವನ್ನು **ಎ. ಆರ್. ಕೃಷ್ಣಶಾಸ್ತ್ರೀ** ಅವರು ಬರೆದಿರುವ **ಭೀಷ್ಮ ಪ್ರತಿಜ್ಞೆ ಎಂಬ** ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ. ಈ ಮಾತನ್ನು ಶಂತನುವು ದೇವವ್ರತನಿಗೆ ಹೇಳುತ್ತಾನೆ. ಶಂತನು ಚಿಂತೆ ಮಾಡುತ್ತಿದ್ದ ವಿಷಯವನ್ನು ಭೀಷ್ಮನು ಪರಿಹರಿಸಿ ಸತ್ಯವತಿಯನ್ನು ಹಸ್ತಿನಾಪುರಕ್ಕೆ ಕರೆದುಕೊಂಡು ಬಂದು ಶಂತನುವಿಗೆ ಎಲ್ಲವನ್ನು ವಿವರಿಸುತ್ತಾನೆ. ನಂತರ ರಾಜರೆಲ್ಲಾ ಅವನನ್ನು ಮೆಚ್ಚಿ ಇವನು 'ಭೀಷ್ಮನೇ' ಎಂದು ಹೊಗಳಿದರು. ಶಂತನು ಅವನನ್ನು ಮೆಚ್ಚಿ ಅವನಿಗೆ ವರವನ್ನು ಕೊಡುವಾಗ ಈ ಮಾತು ಬಂದಿದೆ.

**3. ಭಾಷಾಭ್ಯಾಸ :**

**ಅ) ಕೆಳಗಿನ ಪದಗಳನ್ನು ಬಿಡಿಸಿ, ಸಂಧಿ ಹೆಸರಿಸಿರಿ.**

1. ರಾಜ್ಯವಾಳು= ರಾಜ್ಯ + ಆಳು – ಸವರ್ಣದೀರ್ಘಸಂಧಿ
2. ಗೀತೋಪದೇಶ= ಗೀತ + ಉಪದೇಶ –ಗುಣಸಂಧಿ
3. ಧರ್ಮಾರ್ಥ =ಧರ್ಮ +ಅರ್ಥ – ಸವರ್ಣದೀರ್ಘಸಂಧಿ
4. ಆಸೆಯಾಗು = ಆಸೆ + ಆಗು – ಆಗಮಸಂಧಿ

5. ಶಸ್ತ್ರಾಸ್ತ್ರ = ಶಸ್ತ್ರ + ಅಸ್ತ್ರ – ಸವರ್ಣದೀರ್ಘಸಂಧಿ
6.ದಿವ್ಯಾಂಬರ = ದಿವ್ಯ + ಅಂಬರ –ಸವರ್ಣದೀರ್ಘಸಂಧಿ

**ಆ) ಮಾದರಿಯಂತೆ ಕೂಡಿಸಿ ಬರೆಯಿರಿ.**

**ಮಾದರಿ :** ಬೇಟೆ + ಆಡು = ಬೇಟೆಯಾಡು, ಕಾಲ + ಅನಂತರ =ಕಾಲಾನಂತರ
ರೂಪ + ಅಂತರ = ರೂಪಾಂತರ, ತಂದೆ + ಅನ್ನು = ತಂದೆಯನ್ನು
ಕ್ಷೇಮ + ಆಗು = ಕ್ಷೇಮವಾಗು

**ಇ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಬರೆಯಿರಿ.**

ವಿದ್ಯಾವಂತ x ಅವಿದ್ಯಾವಂತ, ಸದೃಶ x ಅಸದೃಶ, ಹಿಂದೆ x ಮುಂದೆ,
ಹಿರಿಯ x ಕಿರಿಯ, ಸುಖ x ದುಃಖ

**ಈ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.**

1. ಸುವಾಸನೆ : ಈ ಹೂವು ಬಹಳ ಸುವಾಸನೆಯಿಂದ ಕೂಡಿದೆ.
2. ಅಪೂರ್ವ: ಗಾಂಧೀಜಿಯವರು ಅಪೂರ್ವ ವ್ಯಕ್ತಿಯಾಗಿದ್ದರು.
3. ನಿಪುಣ : ಸಂಜೀವನು ಚಿತ್ರ ಬರೆಯುವುದರಲ್ಲಿ ನಿಪುಣನಾಗಿದ್ದನು.
4. ತೇಜಸ್ಸು : ಸೂರ್ಯನು ತೇಜಸ್ಸನ್ನು ಹೊಂದಿರುತ್ತಾನೆ.
5. ಪ್ರತಿಜ್ಞೆ : ದೇವವ್ರತನು ಬ್ರಹ್ಮಚಾರಿಯಾಗಿರುತ್ತೇನೆಂದು ಪ್ರತಿಜ್ಞೆ ಮಾಡಿದನು.
6. ಅಭಿಮತ : ನೀತಿವಂತರು ಉತ್ತಮ ಅಭಿಮತ ಹೊಂದಿರುತ್ತಾರೆ.
7. ಅನುರೂಪ : ಶಂತನು ಅನುರೂಪದ ವರನಾಗಿದ್ದನು.

**ಉ) ಕೆಳಗಿನ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.**

ಕಾಡು– ಅರಣ್ಯ, ತಂದೆ– ಅಪ್ಪ, ಮಗ– ಕುವರ, ಸಾವು–ಮರಣ, ಸತ್ಯ– ನಿಜ.

**4. ಸೈದ್ಧಾಂತಿಕ ವ್ಯಾಕರಣ :**

**ನುಡಿಗಟ್ಟು – ಪಡೆನುಡಿ**

**ಉದಾಹರಣೆಗಳು :**

**<u>ನುಡಿಗಟ್ಟು – ಅರ್ಥ ವಿಶೇಷ</u>**
**ಕತ್ತಿಮಸೆ** – ದ್ವೇಷ ಸಾಧಿಸು
**ಹೊಂಚುಹಾಕು** – ಸಮಯಸಾಧಿಸು
**ತಲೆದೂಗು** – ಮೆಚ್ಚುಗೆ ಸೂಚಿಸು
**ವಿಷಕಾರು** – ದ್ವೇಷ ಸಾಧಿಸು
**ಹೊಂಚು ಹಾಕು** – ಸಮಯ ನಿರೀಕ್ಷಿಸು
**ಕಣ್ತೆರೆ** – ಎಚ್ಚರಗೊಳ್ಳು
**ಕಾಡುಪಾಲಾಗು** – ಅನಾಥನಾಗು
**ತಲೆಬಾಗು** – ಶರಣಾಗು, ಒಪ್ಪು
**ಬೆನ್ನು ತಟ್ಟು** – ಪ್ರೋತ್ಸಾಹಿಸು
**ಮುಖ ಕಪ್ಪಾಗು** – ಅವಮಾನ ಹೊಂದು

**<u>ನುಡಿಗಟ್ಟು – ಅರ್ಥ ವಿಶೇಷ</u>**
**ಬೆನ್ನುತಟ್ಟು** – ಪ್ರೋತ್ಸಾಹಿಸು
**ನಾಯಿಜನ್ಮ** – ಹೀನಬಾಳು
**ಮೈಮರೆ** – ತಲ್ಲೀನನಾಗು
**ನಿಟ್ಟುಸಿರು ಬಿಡು** – ಬಿಡುಗಡೆ ಹೊಂದು
**ಕೈಕೊಡು** – ಮೋಸಮಾಡು
**ಶತಾಯಗತಾಯ** – ಹೇಗಾದರೂಮಾಡಿ
**ಹೊಟ್ಟೆ ಉರಿ** – ಅಸೂಯೆಪಡು
**ಕಾಲಿಗೆ ಬುದ್ಧಿಹೇಳು** – ಓಡಿ ಹೋಗು
**ಗಂಟಲು ಕಟ್ಟು** – ಗದ್ಗದಿತನಾಗು

# 1. ಬೆಳಗು ಜಾವ – ದ. ರಾ. ಬೇಂದ್ರೆ

**ಕೃತಿಕಾರರ ಪರಿಚಯ :**

- ‘ಅಂಬಿಕಾತನಯದತ್ತ’ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ **ದತ್ತಾತ್ರೇಯ ರಾಮಚಂದ್ರ ಬೇಂದ್ರೆ** ಅವರು 1896 ಜನವರಿ 31 ರಂದು ಧಾರವಾಡದಲ್ಲಿ ಜನಿಸಿದರು.
- ಇವರು. ಗರಿ, ಸಖೀಗೀತ, ಗಂಗಾವತರಣ, ನಾದಲೀಲೆ, ಅರಳು–ಮರಳು, ನಾಕುತಂತಿ ಮುಂತಾದ ಕೃತಿಗಳನ್ನು ಬರೆದಿದ್ದಾರೆ.
- ಶ್ರೀಯುತರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಜ್ಞಾನಪೀಠ ಪ್ರಶಸ್ತಿ ದೊರೆತಿವೆ.
- ಪ್ರಸ್ತುತ ಕವಿತೆಯನ್ನು **‘ವಿನಯ’** ಕವನ ಸಂಕಲನದಿಂದ ಆರಿಸಲಾಗಿದೆ.

**ಅಭ್ಯಾಸ**

**1. ಪದಗಳ ಅರ್ಥ :**

**ಉಷೆ**– ಮುಂಬೆಳಗು; ಮುಂಜಾವು.
**ಚಿಂತನ** – ಯೋಗ್ಯ ಯೋಚನೆ
**ತಮ** – ಕತ್ತಲು
**ನಿಶೆ** – ರಾತ್ರಿ; ಮಂಪರು.
**ಬಾನು** – ಆಕಾಶ
**ಮರಳಿ** – ಮತ್ತೆ; ಹಿಂದಿರುಗಿ.
**ಮಿಗಿಲು** – ಹೆಚ್ಚು
**ರಸ** – ಅನುಭವದ ಸವಿ; ಸಾರ.
**ಹುಸಿನಿದ್ದೆ** – ಆಲಸ್ಯದ ವಿಶ್ರಾಂತಿ; ಸುಳ್ಳುನಿದ್ರೆ.
**ಹೊತ್ತು** – ಸಮಯ; ಗಳಿಗೆ; ವೇಳೆ.
**ಕದ** – ಬಾಗಿಲು
**ಜಗ** – ಜಗತ್ತು; ಪ್ರಪಂಚ; ವಿಶ್ವ; ಲೋಕ.
**ನಕ್ಷತ್ರ ಜಾರಿ** – ರಾತ್ರಿ ಕಳೆದು
**ಪಾನಕೇಳಿ** – ಪಾನೀಯ ಕುಡಿಯುವುದಕ್ಕೆ ಎದ್ದೇಳಿ
**ಬೆಳಕು ಬೇಟೆಗಾರ** – ಸೂರ್ಯ
**ಮಾರ** – ಮನ್ಮಥ
**ಮೂಡಲು** – ಪೂರ್ವದಿಕ್ಕು
**ಹರೆಯ** – ಹದಿವಯಸ್ಸು; ಯೌವ್ವನ; ಪ್ರಾಯ.
**ಹೊಗರು** – ಕಾಂತಿ
**ಹೋದವರು** – ಮರಣ ಹೊಂದಿದವರು

**2. ಪ್ರಶ್ನೆಗಳು :**

**ಅ) ಖಾಲಿ ಬಿಟ್ಟಿರುವ ಜಾಗದಲ್ಲಿ ಸೂಕ್ತ ಪದವನ್ನು ಆವರಣದಿಂದ ಆರಿಸಿ ಬರೆಯಿರಿ.**

1. ‘ಮೂಡಲವು ತೆರೆಯೆ ಕಣ್ಣ’ ಎಂದರೆ ___________
ಅ) ಸೂರ್ಯಾಸ್ತ ಆ) ಸೂರ್ಯೋದಯ ಇ) ಚಂದ್ರೋದಯ ಈ) ಗೋಧೂಳಿ
2. ಬೇಂದ್ರೆಯವರು ಬೆಳಕನ್ನು ಇವರಿಗೆ ಹೋಲಿಸಿದ್ದಾರೆ ___________
ಅ) ಮಾರ–ಬೇಟೆಗಾರ ಆ) ಮಾರ–ಮಾಟಗಾರ ಇ) ಮಕ್ಕಳು–ಮುದುಕರು ಈ) ಜೇನು–ಗುಡಿಗೋಪುರ
3. ಬೇಂದ್ರೆಯವರಿಗೆ ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟ ಕೃತಿ ___________
ಅ) ವಿನಯ ಆ) ಗಂಗಾವತರಣ ಇ) ನಾದಲೀಲೆ ಈ) ನಾಕುತಂತಿ

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ನಕ್ಷತ್ರ ಜಾರಿ, ತಮವೆಲ್ಲ ಸೋರಿದುದು ಯಾವಾಗ?
ಆಕಾಶದ ಬೆಳಗಿನ ಬಣ್ಣ ಹೆಚ್ಚಾದಂತೆ ನಕ್ಷತ್ರ ಜಾರಿ ತಮವೆಲ್ಲ ಸೋರಿದೆ.
2. ಜೇನ್ಗೊಣದ ಹೆದೆಗೆ ಹೂಬಾಣ ಹೂಡಿದವನು ಯಾರು?
ಜೇನ್ಗೊಣದ ಹೆದೆಗೆ ಹೂಬಾಣ ಹೂಡಿದವನು ಮಾರ.
3. ಕವಿಗೆ ಜಗವು ಸವಿಯಾಗಿ ಯಾವಾಗ ಕಂಡಿತು?
ರಾತ್ರಿಯ ಮಂಪರು ಕಳೆದು ಮುಂಜಾವಿನ ಎಳೆ ಬಿಸಿಲಿನ ನಗೆಯ ರೀತಿಗೆ ಸೋತಿರಲು ಜಗವು ಸವಿಯಾಗಿ ಕಂಡಿತು.
4. ಕವಿ ಮಕ್ಕಳಿಗೆ ಹುಸಿನಿದ್ದೆ ಸಾಕು ಮೇಲೇಳಿ ಎಂದು ಏಕೆ ಕರೆ ನೀಡುತ್ತಾರೆ?
ಜಗದ ಅನುಭವದ ಸವಿಯನ್ನು ಅನುಭವಿಸಲು ಮೇಲೇಳಿ ಎಂದು ಕವಿ ಮಕ್ಕಳಿಗೆ ಕರೆ ನೀಡುತ್ತಾರೆ.
5. ಜೀವನದ ನದಿಗಿರುವ ಆತಂಕಗಳೇನು?
ಜೀವನವೆಂಬ ನದಿಗೆ ನೂರಾರು ಸೆಳೆವುಗಳಿವೆ. ಯಾವ ಕ್ಷಣದಲ್ಲದರೂ ಸಾವು ಬರಬಹುದು.
6. ಮುಪ್ಪು ಯಾವುದರಲ್ಲಿ ಮುಳುಗಿರುತ್ತದೆ?
ಮುಪ್ಪು ಚಿಂತೆಯಲ್ಲಿ ಮುಳುಗಿರುತ್ತದೆ.

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಬೆಳಕೆಂಬ ಬೇಟೆಗಾರ ಬಂದಾಗ ಪ್ರಕೃತಿಯಲ್ಲಿ ಯಾವ ಬದಲಾವಣೆಗಳಾಗುತ್ತವೆ?

ಬೆಳಕೆಂಬ ಬೇಟೆಗಾರನಾದ ಸೂರ್ಯ ಉದಯಿಸಿದಾಗ, ರಾತ್ರಿಯ ನಕ್ಷತ್ರಗಳೆಲ್ಲಾ ಸರಿದು ಆಕಾಶದಲ್ಲಿ ಹೊಂಬಣ್ಣ ಏರುತ್ತದೆ. ಗುಡಿಗೋಪುರಗಳ ಮೇಲೆ ಬಲೆ ಬೀಸಿದಂತೆ ಹೊಂಬಣ್ಣದ ಬಿಸಿಲು ಹರಡಿರುತ್ತದೆ. ಪ್ರಕೃತಿಯ ಉಲ್ಲಾಸಮಯ ವಾತಾವರಣ ಹೊನ್ನಿನಂತೆ ಕಾಣುತ್ತದೆ.

2. ಜೀವನದ ಸವಿಯನ್ನು ಸವಿಯಲು ತಡಮಾಡಬಾರದು, ಏಕೆ?

ಏಕೆಂದರೆ, ನಮ್ಮ ಜೀವನವೆಂಬ ನದಿಗೆ ನೂರಾರು ಸೆಳೆವುಗಳಿವೆ. ಯಾವ ಕ್ಷಣದಲ್ಲಾದರೂ ಸಾವು ಬರಬಹುದು. ಒಮ್ಮೆ ಮರಣ ಹೊಂದಿದವರು ಮತ್ತೆ ಬದುಕಿ ಬರಲಾರರು. ಆದುದರಿಂದ ತಡಮಾಡದೆ ಜೀವನದ ಸವಿಯನ್ನು ಸವಿಯಲು ಎದ್ದು ಕಾರ್ಯಪ್ರವೃತ್ತರಾಗಬೇಕು.

3. 'ಬೆಳಗು ಜಾವ' ಕವಿತೆಯಲ್ಲಿ ಕವಿ ನೀಡಿರುವ ಸಂದೇಶವೇನು?

ಪ್ರಾತಃಕಾಲದಲ್ಲಿ ನಿದ್ದೆ ಮಾಡುವ ತಾಮಸಿಗಳಾಗದೆ, ಚೈತನ್ಯವುಳ್ಳ ಸಾತ್ವಿಕರಾಗಿ, ಕಾರ್ಯತತ್ಪರರಾಗಿ ಬದುಕಬೇಕು. ಯೌವನದ ಸುಗ್ಗಿ ಜೀವಮಾನದಲ್ಲಿ ಒಮ್ಮೆ ಮಾತ್ರ ಬರುವಂತದ್ದು. ಆದುದರಿಂದ ಅದರ ಸದುಪಯೋಗವನ್ನು ಮಾಡಿಕೊಳ್ಳಬೇಕು ಎಂಬ ಸಂದೇಶವನ್ನು ಕವಿ ನೀಡಿದ್ದಾರೆ.

**ಈ) ಕೆಳಗಿನ ಪ್ರಶ್ನೆಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

1. 'ಬೆಳಗು ಜಾವ' ಪದ್ಯದ ಸಾರಾಂಶವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಕವಿ 'ಬೆಳಗು ಜಾವ' ಪದ್ಯದಲ್ಲಿ ಚಿಕ್ಕವರು, ದೊಡ್ಡವರು ಎಲ್ಲರನ್ನು ಎಚ್ಚರಗೊಳಿಸುತ್ತಿದ್ದಾರೆ. ಬೆಳಕು ಹರಿಯುತ್ತಿದ್ದಂತೆಯೇ ಪ್ರಕೃತಿಯ ಉಲ್ಲಾಸಮಯ ವಾತಾವರಣ ತೆರೆದುಕೊಳ್ಳುತ್ತದೆ. ಅಂತಹ ಸುಂದರ ಕ್ಷಣದ ಸವಿಯನ್ನು ಸವಿಯಲು ನಿದ್ದೆ ಆಲಸ್ಯಗಳನ್ನು ಎಲ್ಲರೂ ತೊರೆಯಬೇಕು. ರಾತ್ರಿಯ ನಕ್ಷತ್ರಗಳೆಲ್ಲಾ ಸರಿದು ಆಕಾಶದಲ್ಲಿ ಹೊಂಬಣ್ಣ ಏರುತ್ತದೆ. ಗುಡಿಗೋಪುರಗಳ ಮೇಲೆ ಬಲೆ ಬೀಸಿದಂತೆ ಹೊಂಬಣ್ಣದ ಬಿಸಿಲು ಹರಡಿದೆ. ಇಂತಹ ಪ್ರಾತಃಕಾಲದ ಎಳನಗೆಯ ಬಗೆಗೆ ಜಗತ್ತೇ ಸೋತಿರುವಾಗ ಮನುಷ್ಯರಾದ ನಾವು ಸಮಯವನ್ನು ವ್ಯರ್ಥವಾಗಿ ಕಳೆಯದೆ, ಆನಂದದ ಕ್ಷಣಗಳನ್ನು ಹಾಳುಮಾಡಿಕೊಳ್ಳಬಾರದು. ಬೆಳಗು ಜಾವದ ಸವಿಯನ್ನು ಆನಂದಿಸಬೇಕು.

ಈ ಜಗತ್ತಿನಲ್ಲಿ ತುಂಬಿದ ಬಾಳು ನಮ್ಮದಾಗಿರಲು ಅದರ ಸಂಪೂರ್ಣ ಪ್ರಯೋಜನವನ್ನು ನಾವು ಪಡೆಯಬೇಕು. ನಮ್ಮ ಜೀವನವು ಕ್ಷಣಿಕವಾಗಿದ್ದು ಅದರ ಸೆಳೆವಿನಲ್ಲಿ ಸಿಲುಕಿ ಏನಾಗಿತ್ತದೆಯೋ ತಿಳಿಯಲಾರೆವು. ಮರಣ ಯಾವಾಗ ಹುಡುಕಿ ಬರುವುದೋ ಅರಿಯವು. ಒಮ್ಮೆ ಈ ಲೋಕ ಬಿಟ್ಟು ಹೋದ ಮೇಲೆ ಬೇಕೆಂದರೂ ಮರಳಿ ಬರಲಾರೆವು. ಆದ್ದರಿಂದ ಇರುವ ಸಮಯವನ್ನು ಸದುಪಯೋಗಪಡಿಸಿಕೊಳ್ಳಬೇಕು. ಯೌವನ ಕಾಲದ ಸುಗ್ಗಿ ಒಮ್ಮೆ ಕಳೆದರೆ ಮತ್ತೆ ಸಿಗಲಾರದು. ಮುಪ್ಪು ಚಿಂತೆಯಲ್ಲಿ ಮುಳುಗಿ ಹೋಗುತ್ತದೆ. ಆದುದರಿಂದ ಎಲ್ಲರೂ ಏಳಿರಿ ಜಗತ್ತಿನ ಮತ್ತು ಜೀವನದ ಸವಿಯನ್ನು ಹಾಗೂ ಆನಂದವನ್ನು ಸವಿಯಿರಿ ಎಂದು ಕವಿ ಹೇಳಿದ್ದಾರೆ.

**ಉ) ಸಂದರ್ಭದೊಡನೆ ವಿವರಿಸಿರಿ.**

1. ಈ ತುಂಬಿ ಬಾಳು ತುಂಬಿರುವ ತನಕ ತುಂತುಂಬಿ ಕುಡಿಯಬೇಕು.

ಈ ವಾಕ್ಯವನ್ನು **ದ. ರಾ. ಬೇಂದ್ರೆ** ಅವರು ಬರೆದಿರುವ **'ವಿನಯ'** ಎಂಬ ಕೃತಿಯಿಂದ ಆಯ್ದ **ಬೆಳಗು ಜಾವ** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಕವಿ ಹೇಳುತ್ತಾರೆ. ಕವಿ ಬೆಳಗು ಜಾವದ ಸುಂದರ ವರ್ಣನೆಯನ್ನು ಮಾಡುತ್ತಾ, ರಾತ್ರಿ ಕಳೆದು ಪ್ರಾತಃಕಾಲದ ಎಳೆನಗೆಯ ರೀತಿಗೆ ಜಗವೇ ಸೋತಿರುವಾಗ ಮನುಷ್ಯರಾದ ನಾವು ಸಮಯವನ್ನು ವ್ಯರ್ಥಮಾಡದೇ ಜೀವನವನ್ನು ಆನಂದಿಸಿ ಎಂದು ಹೇಳುವಾಗ ಈ ಮೇಲಿನ ಮಾತು ವ್ಯಕ್ತವಾಗಿದೆ.

2. ಜೇನ್ನೊಣದ ಹೆದೆಗೆ ಹೂಬಾಣ ಹೂಡಿ ಝುಂ ಎಂದು ಬಿಟ್ಟ ಮಾರ.

ಈ ವಾಕ್ಯವನ್ನು **ದ. ರಾ. ಬೇಂದ್ರೆ** ಅವರು ಬರೆದಿರುವ **'ವಿನಯ'** ಎಂಬ ಕೃತಿಯಿಂದ ಆಯ್ದ **ಬೆಳಗು ಜಾವ** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಕವಿ ಹೇಳುತ್ತಾರೆ. ಕವಿ ಬೆಳಗು ಜಾವದ ಸುಂದರ ವರ್ಣನೆಯನ್ನು ಮಾಡುತ್ತಾ, ನಕ್ಷತ್ರಗಳೆಲ್ಲಾ ಜಾರಿದಂತೆ ಆಕಾಶದಲ್ಲಿ ಹೊಂಬಣ್ಣ ಏರುತ್ತದೆ. ಗುಡಿಗೋಪುರಗಳ ಮೇಲೆ ಬಲೆ ಬೀಸಿದಂತೆ ಹೊಂಬಣ್ಣದ ಬಿಸಿಲು ಹರಡಿದೆ ಎಂದು ವರ್ಣಿಸುವಾಗ ಈ ಮೇಲಿನ ಮಾತು ಬಂದಿದೆ.

3. ಜೀವನದ ನದಿಗೆ ಸೆಳೆವಿಹುದು.

ಈ ವಾಕ್ಯವನ್ನು **ದ. ರಾ. ಬೇಂದ್ರೆ** ಅವರು ಬರೆದಿರುವ **'ವಿನಯ'** ಎಂಬ ಕೃತಿಯಿಂದ ಆಯ್ದ **ಬೆಳಗು ಜಾವ** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಕವಿ ಹೇಳುತ್ತಾರೆ. ಕವಿ ಬೆಳಗು ಜಾವದ ಸುಂದರ ವರ್ಣನೆಯನ್ನು ಮಾಡುತ್ತಾ, ನಮ್ಮ ಜೀವನವು ಕ್ಷಣಿಕವಾಗಿದ್ದು ಅದರ ಸೆಳೆವಿನಲ್ಲಿ ಸಿಲುಕಿ ಏನಾಗಿತ್ತದೆಯೋ ತಿಳಿಯಲಾರೆವು. ಆದುದರಿಂದ ಎಲ್ಲರೂ ಏಳಿರಿ ಜಗತ್ತಿನ ಮತ್ತು ಜೀವನದ ಸವಿಯನ್ನು ಹಾಗೂ ಆನಂದವನ್ನು ಸವಿಯಿರಿ ಎಂದು ಹೇಳುವಾಗ ಈ ಮೇಲಿನ ಮಾತು ವ್ಯಕ್ತವಾಗಿದೆ.

4. ಮುಳುಗಿರಲಿ ಮುಪ್ಪು ಚಿಂತನದಿ ತಾನು ಹರೆಯಕ್ಕೆ ಬೇರೆ ಹೊತ್ತೆ

ಈ ವಾಕ್ಯವನ್ನು **ದ. ರಾ. ಬೇಂದ್ರೆ** ಅವರು ಬರೆದಿರುವ **'ವಿನಯ'** ಎಂಬ ಕೃತಿಯಿಂದ ಆಯ್ದ **ಬೆಳಗು ಜಾವ** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಕವಿ ಹೇಳುತ್ತಾರೆ. ಕವಿ ಬೆಳಗು ಜಾವದ ಸುಂದರ ವರ್ಣನೆಯನ್ನು ಮಾಡುತ್ತಾ, ಮರಣ ಯಾವಾಗ ಹುಡುಕಿ ಬರುವುದೋ ಅರಿಯವು. ಒಮ್ಮೆ ಈ ಲೋಕ ಬಿಟ್ಟು ಹೋದ ಮೇಲೆ ಬೇಕೆಂದರೂ ಮರಳಿ ಬರಲಾರೆವು. ಆದ್ದರಿಂದ ಇರುವ ಸಮಯವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ಹೇಳುವಾಗ ಈ ಮೇಲಿನ ಮಾತು ವ್ಯಕ್ತವಾಗಿದೆ.

**4. ಭಾಷಾಭ್ಯಾಸ :**

**ಅ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.**

1. ಬೆಳಗಾಯ್ತು : ಏಳು ಚಿನ್ನ, ಬೆಳಗಾಯ್ತು ಎಂದು ತಾಯಿ ತನ್ನ ಮಗನಿಗೆ ಹೇಳುತ್ತಾಳೆ.
2. ಹೂಬಾಣ : ಮನ್ಮಥ ಹೂಬಾಣ ಹೂಡಿ ಬಾಣ ಬಿಟ್ಟನು.
3. ಹುಸಿನಿದ್ದೆ : ಕೆಲವರು ಹುಸಿನಿದ್ದೆ ಮಾಡುತ್ತಾರೆ.
4. ಬಲೆಬೀಸು : ಬಲೆಯನ್ನು ಬೀಸಿ ಮೀನು ಹಿಡಿಯುತ್ತಾರೆ.
5. ಎಳೆನಗೆ : ಸೂರ್ಯನು ಹುಟ್ಟುವಾಗ ಎಳೆನಗೆ ಬೀರುತ್ತಾನೆ.

**ಆ) ಕೆಳಗಿನ ಪದಗಳಿಗೆ ತತ್ಸಮ – ತದ್ಭವ ರೂಪ ಬರೆಯಿರಿ.**

ಬಣ್ಣ – ವರ್ಣ, ಕ್ಷಣ– ಚಣ, ಹರೆಯ – ಪ್ರಾಯ.

**ಇ) ಕೆಳಗಿನ ಪದಗಳಿಗೆ ವಿರುದ್ಧಾರ್ಥ ಬರೆಯಿರಿ.**

ಏಳು x ಬೀಳು, ಬೆಳಕು x ಕತ್ತಲು, ಸರಸ x ವಿರಸ, ಸಹಕಾರ x ಅಸಹಕಾರ, ಮುಪ್ಪು x ಯೌವನ.

**ಈ) ಕೆಳಗಿನ ಪದಗಳಿಗೆ ಸ್ತ್ರೀಲಿಂಗ ರೂಪ ಬರೆಯಿರಿ.**

ಯುವಕ – ಯುವತಿ, ಮಹಾರಾಜ – ಮಹಾರಾಣಿ, ಗೆಳೆಯ – ಗೆಳತಿ,
ಸಚಿವ – ಸಚಿವೆ, ಅಣ್ಣ – ಅಕ್ಕ.

## 2. ಅಟ್ಟ ಹತ್ತ ಬೇಡ – ಎಲ್. ಹನುಮಂತಯ್ಯ

**ಕೃತಿಕಾರರ ಪರಿಚಯ :**

- **ಡಾ. ಎಲ್. ಹನುಮಂತಯ್ಯ** ಅವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರಾಮೇಶ್ವರ ಗ್ರಾಮದಲ್ಲಿ 1958 ರಲ್ಲಿ ಜನಿಸಿದರು.
- ಶ್ರೀಯುತರು ಕಪ್ಪುಕಣ್ಣಿನ ಹುಡುಗಿ, ಅವ್ವನ ಕವಿತೆ, ಜೀವಗಾನ, ಕರ್ಣರಾಗ, ಅಕ್ಷರ ಅಕ್ಷರವೇ,ಅಂಬೇಡ್ಕರ್, ದಲಿತ ಲೋಕದ ಒಳಗೆ, ಅಂಬೇಡ್ಕರ್ ಮತ್ತು ಸಮಕಾಲೀನ, **ಬಂಡಾಯ ಕಥೆಗಳಲ್ಲಿ ದಲಿತ ಪ್ರಜ್ಞೆ,** ಮುಂತಾದ ಕೃತಿಗಳನ್ನು ಬರೆದಿದ್ದಾರೆ.
- ಇವರಿಗೆ ಕರ್ನಾಟಕ ರಾಜ್ಯ ಸರ್ಕಾರದ ಅಂಬೇಡ್ಕರ್ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿ ಮತ್ತು ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿವೆ.
- 'ಅಟ್ಟ ಹತ್ತ ಬೇಡ' ಪದ್ಯವನ್ನು **'ಅವ್ವನ ಕವಿತೆ'** ಎಂಬ ಕವನ ಸಂಕಲನದಿಂದ ಆರಿಸಿದೆ.

**ಅಭ್ಯಾಸ**

**1. ಪದಗಳ ಅರ್ಥ :**

**ಅಟ್ಟ** – ಮಹಡಿ; ಎತ್ತರದ ಸ್ಥಳ. **ಮರಿ** – ಮಗು **ಜಾಳು** – ಟೊಳ್ಳು
**ಮಂದಿ** – ಜನ **ಹಾದು** – ದಾಟಿ; ಮೀರಿ.

**2. ಪ್ರಶ್ನೆಗಳು :**

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಅಜ್ಜನು ಮಗನಿಗೆ ಅಟ್ಟ ಹತ್ತ ಬೇಡ ಎಂದು ಏಕೆ ಹೇಳುತ್ತಾನೆ?
ಅಟ್ಟವನ್ನು ಬೀಳಿಸಲೇಂದೇ ಜಾಳಾಗಿ ಕಟ್ಟಿರುತ್ತಾರೆ. ಆದ್ದರಿಂದ ಅಟ್ಟ ಹತ್ತಬೇಡ ಮರಿ ಎಂದು ಅಜ್ಜ ಮಗನಿಗೆ ಹೇಳುತ್ತಾನೆ.
2. ಅಟ್ಟ ನೋಡದೆ ಬೆಟ್ಟ ಹತ್ತುತ್ತೇನೆ ಎನ್ನುವ ಮಾತಿನಲ್ಲಿ ವ್ಯಕ್ತಗೊಂಡಿರುವ ಭಾವನೆಗಳೇನು?
ಬಹು ಎತ್ತರಕ್ಕೆ ಹೋಗಿ ಸಾಧಿಸಿ ತೋರಿಸುತ್ತೇನೆ ಎಂಬ ಭಾವನೆ ಈ ವಾಕ್ಯದಲ್ಲಿ ವ್ಯಕ್ತವಾಗಿದೆ.
3. ದೂರದ ಬೆಟ್ಟ ಹೇಗೆ ಕಾಣುತ್ತದೆ?
ದೂರದ ಬೆಟ್ಟ ನುಣುಪಾಗಿ ಕಾಣುತ್ತದೆ.
4. ಮಗು ಬೆಟ್ಟ ಹತ್ತಲು ಬಯಸಿದ್ದು ಏಕೆ?
ಅಟ್ಟ ಹತ್ತದವನು ಬೆಟ್ಟ ಹತ್ತಬಲ್ಲನು ಎಂದು ತೋರಿಸಲು ಮಗು ಬೆಟ್ಟ ಹತ್ತಲು ಬಯಸಿದ್ದನು.
5. ಡಾ. ಎಲ್. ಹನುಮಂತಯ್ಯನವರು ಯಾವ ವಿಷಯದ ಮೇಲೆ ಪಿಹೆಚ್.ಡಿ. ಪದವಿ ಪಡೆದಿದ್ದಾರೆ?
ಡಾ. ಎಲ್. ಹನುಮಂತಯ್ಯನವರು 'ಬಂಡಾಯ ಕಥೆಗಳಲ್ಲಿ ದಲಿತ ಪ್ರಜ್ಞೆ' ಎಂಬ ಮಹಾಪ್ರಬಂದಕ್ಕೆ ಪಿಹೆಚ್.ಡಿ. ಪದವಿ ಪಡೆದಿದ್ದಾರೆ.

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಬರೆಯಿರಿ.**

1. ಬೆಟ್ಟ ಹತ್ತುವ ಹಾದಿ ಹೇಗಿರುತ್ತದೆ?
ದೂರದ ಬೆಟ್ಟ ನೋಡಲು ನುಣುಪಾಗಿ ಕಾಣುತ್ತದೆ. ಹತ್ತಿರ ಹೋದಂತೆಲ್ಲಾ ಅದರ ನೈಜ ರೂಪ ತಿಳಿಯುತ್ತದೆ. ಅದರ ಹಾದಿ ಕಲ್ಲು ಮುಳ್ಳುಗಳಿಂದ ಕೂಡಿರುತ್ತದೆ. ಅದನ್ನು ಹತ್ತುವುದು ನಾವು ಅಂದುಕೊಂಡಷ್ಟು ಸುಲಭವಲ್ಲ.
2. ಅಟ್ಟ ಮತ್ತು ಬೆಟ್ಟಕ್ಕಿರುವ ವ್ಯತ್ಯಾಸಗಳೇನು?
ಅಟ್ಟವನ್ನು ಮನುಷ್ಯ ನಿರ್ಮಿಸಿರುತ್ತಾನೆ. ಅದನ್ನು ಬೀಳಿಸಲೆಂದೇ ಜಾಳಾಗಿ ಕಟ್ಟಿರುತ್ತಾರೆ. ಆದರೆ ಬೆಟ್ಟ ಮಾನವ ನಿರ್ಮಿತವಲ್ಲ. ಅದು ಸ್ವಾಭಾವಿಕವಾದದ್ದು. ಅದು ಕಲ್ಲು ಮುಳ್ಳುಗಳಿಂದ ಕೂಡಿರುತ್ತದೆ. ದೂರದ ಬೆಟ್ಟ ನೋಡಲು ನುಣುಪಾಗಿ ಕಾಣುತ್ತದೆ.
3. 'ಬೆಟ್ಟ ಹತ್ತ ಬೇಡ' ಕವಿತೆಯಲ್ಲಿ ಹುಡುಗನ ಸಂಕಲ್ಪವೇನು?
ಅಟ್ಟವು ಮಾನವ ನಿರ್ಮಿತವಾದದ್ದರಿಂದ ಬೀಳುವ ಸಾಧ್ಯತೆ ಇದೆ. ಆದರೆ ಬೆಟ್ಟ ಮಾನವ ನಿರ್ಮಿತವಲ್ಲ. ಆದ್ದರಿಂದ ಅಟ್ಟದ ಕಡೆ ನೋಡದೆ ಬೆಟ್ಟ ಹತ್ತಿ ಮೇಲೇರಿ ನಿಂತು ತೋರಿಸುತ್ತೇನೆ ಎಂಬುದು 'ಅಟ್ಟ ಹತ್ತ ಬೇಡ' ಕವಿತೆಯಲ್ಲಿ ಹುಡುಗನ ಸಂಕಲ್ಪವಾಗಿದೆ.
4. 'ಬೆಟ್ಟ ಹತ್ತ ಬೇಡ' ಕವಿತೆಯಲ್ಲಿ ಅಜ್ಜನ ಉಪದೇಶವೇನು?
ಅಟ್ಟವನ್ನು ಮನುಷ್ಯ ಟೊಳ್ಳಗಿ ಕಟ್ಟಿರುತ್ತಾನೆ. ಆದ್ದರಿಂದ ಬೀಳುವ ಸಾಧ್ಯತೆ ಇದೆ ಎಂದಾಗ, ಮಗುವು ಹಾಗಾದರೆ ಬೆಟ್ಟ ಹತ್ತುತ್ತೇನೆ ಎನ್ನುತ್ತಾನೆ. ಅಟ್ಟವನ್ನೇ ಹತ್ತಲು ಸಾಧ್ಯವಿಲ್ಲದವನು ಬೆಟ್ಟ ಹತ್ತುತ್ತಾನೆಯೇ ಎಂದು ಜನರು ನೋಡಿ ನಗುತ್ತಾರೆ ಎಂಬುದು ಈ ಪದ್ಯದಲ್ಲಿ ಅಜ್ಜನ ಉಪದೇಶವಾಗಿದೆ.

**ಇ) ಕೆಳಗಿನ ಪ್ರಶ್ನೆಗಳಿಗೆ ಎಂಟು –ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

1. 'ಅಟ್ಟ ಹತ್ತ ಬೇಡ' ಕವಿತೆಯಲ್ಲಿ ವ್ಯಕ್ತವಾಗಿರುವ ಕವಿಯ ಭಾವನೆಗಳೇನು?
ಸಮಾಜದಲ್ಲಿನ ಅಸಮಾನತೆಗಳನ್ನು ತಮಗಾದ ದುಃಖ ದುಮ್ಮಾನಗಳನ್ನು ಮನಸ್ಸಿಗೆ ಮುಟ್ಟುವಂತೆ ಹೃದಯಕ್ಕೆ ತಟ್ಟುವಂತೆ ಬರೆವಣಿಗೆ ಮೂಲಕ ವ್ಯಕ್ತಗೊಂಡ ಸಾಹಿತ್ಯ ಪ್ರಕಾರ. ಸಮಾಜದ ಮುಖ್ಯವಾಹಿನಿಯಲ್ಲಿ ತಮ್ಮ ಹಕ್ಕು ಸ್ಥಾಪಿಸಲು ಅನುಕಂಪ, ಅವಕಾಶವನ್ನು ಬೇಡದೆ ಅವಕಾಶವನ್ನು ನಾವೇ ಹುಡುಕುವೆವು ಎನ್ನುವ ಸಂಕಲ್ಪ, ಸಾಮಾಜಿಕ ಕಳಕಳಿ, ಅಸಮಾನತೆ ಹಾಗೂ ಅನ್ಯಾಯದ ವಿರುದ್ಧವಗಿ ಕವಿ ಈ ಪದ್ಯವನ್ನು ಬರೆದಿದ್ದಾರೆ.

ಮಕ್ಕಳಲ್ಲಿ ಕುತೂಹಲ, ಸಾಹಸ ಪ್ರವೃತ್ತಿ ಸಹಜವಾಗಿರುತ್ತದೆ. ಎಂತಹ ಕೆಲಸವನ್ನಾದರೂ ಮಾಡಬಲ್ಲೆವು ಎನ್ನುವ ಮನೋಸ್ಥೈರ್ಯ ಇರುತ್ತದೆ. ತಮ್ಮ ಇಚ್ಛಿತ ಗುರಿ ಸಾಧನೆಗೆ ಯಾರೇ ಅಡ್ಡಿಯನ್ನುಂಟು ಮಾಡಿದರೂ ಎದೆಗುಂದದೆ ಮುನ್ನುಗ್ಗಬಲ್ಲವರಾಗಿರುತ್ತಾರೆ. ತಮ್ಮ ಆಸೆ ಆಕಾಂಕ್ಷೆಗಳಿಗೆ ವಿರೋಧ ವ್ಯಕ್ತವಾದಾಗ ಸಂಪ್ರದಾಯಗಳನ್ನು ಧಿಕ್ಕರಿಸಿ ಶ್ರೇಷ್ಠವಾದುದನ್ನು ಮಾಡಿಯೇ ತೀರುತ್ತೇವೆ ಎಂಬ ಸಂಕಲ್ಪ ಮಾಡುತ್ತಾರೆ. ಶೋಷಿತರ ಮನಸ್ಥಿತಿಗಳೂ ಅದೇ ರೀತಿಯಲ್ಲಿರುತ್ತವೆ ಎಂಬುದನ್ನು ಪ್ರಸ್ತುತ 'ಅಟ್ಟ ಹತ್ತ ಬೇಡ' ಕವನದಲ್ಲಿ ವ್ಯಕ್ತವಾಗಿದೆ.
2. 'ಅಟ್ಟ ಹತ್ತ ಬೇಡ' ಎನ್ನುವ ಅಜ್ಜನ ಮಾತಿಗೆ ಮಗನ ಸವಾಲು ಏನು?

ಮಗನು ಅಟ್ಟ ಹತ್ತಲು ಮುಂದಾಗುತ್ತಾನೆ. ಆಗ ಅಜ್ಜನು ಮಗು ಅಟ್ಟ ಹತ್ತಬೇಡ, ಏಕೆಂದರೆ ಇದನ್ನು ಮನುಷ್ಯ ನಿರ್ಮಿಸಿರುತ್ತಾನೆ. ಇದನ್ನು ಜಾಳಾಗಿ ಕಟ್ಟಿರುತ್ತಾರೆ.. ನೀನು ಅಟ್ಟ ಹತ್ತಿದರೆ ಬೀಳುವ ಸಾಧ್ಯತೆ ಇದೆ ಎಂದು ಎಚ್ಚರಿಕೆ ನೀಡುತಾನೆ. ಅಗ ಮಗನು ಮನುಷ್ಯ ನಿರ್ಮಿತ ಅಟ್ಟ ಹತ್ತುವುದಿಲ್ಲ. ಪ್ರಕೃತಿದತ್ತವಾದ ಬೆಟ್ಟವನ್ನೇ ಹತ್ತುತ್ತೇನೆ ಎಂದು ಹೇಳುತ್ತಾನೆ.

ಅಟ್ಟ ಹತ್ತದವನು ಬೆಟ್ಟ ಹತ್ತುತ್ತಾನೆಯೇ ಎಂದು ಜನರು ಆಡಿಕೊಂಡು ನಗುತ್ತಾರೆ. 'ದೂರದ ಬೆಟ್ಟ ನುಣುಪು' ಎಂಬ ಸತ್ಯದ ಅರಿವನ್ನು ಅಜ್ಜ ಮಾಡಿಸುತ್ತಾರೆ. ಪ್ರತ್ಯುತ್ತರವಾಗಿ ಮಗನು 'ನಾನು ಅಟ್ಟದ ಕಡೆ ನೋಡದೆ ಬೆಟ್ಟ ಹತ್ತುತ್ತೇನೆ. ಬೆಟ್ಟದ ಕಲ್ಲು ಮುಳ್ಳುಗಳ ಹಾದಿಯನ್ನು ಹಾದು ಮೇಲೇರಿ ನಿಲ್ಲುತ್ತೇನೆ' ಎಂಬ ಸವಾಲನ್ನು ಹಾಕುತ್ತಾನೆ.

**ಈ) ಸಂದರ್ಭದೊಡನೆ ವಿವರಿಸಿರಿ.**

1. ಅಟ್ಟ ಹತ್ತದವನು ಬೆಟ್ಟ ಹತ್ತುತ್ತಾನೆಯೆ

ಈ ವಾಕ್ಯವನ್ನು **ಎಲ್. ಹನುಮಂತಯ್ಯ** ಅವರು ಬರೆದಿರುವ **'ಅವ್ವನ ಕವಿತೆ'** ಎಂಬ ಕೃತಿಯಿಂದ ಆಯ್ದ **ಅಟ್ಟ ಹತ್ತ ಬೇಡ** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಅಜ್ಜ ತನ್ನ ಮಗನಿಗೆ ಹೇಳುತ್ತಾನೆ. ಅಟ್ಟವನ್ನು ಮನುಷ್ಯ ಟೊಳ್ಳಾಗಿ ಕಟ್ಟಿರುತ್ತಾನೆ. ಅಟ್ಟ ಹತ್ತಬೇಡ ಮಗು ಎಂದಾಗ ಮಗು ಹಾಗಾದರೆ ಬೆಟ್ಟ ಹತ್ತಿ ತೋರಿಸುತ್ತೇನೆ ಎಂದಾಗ ಅಜ್ಜ ಈ ಮೇಲಿನ ಮಾತನ್ನು ಹೇಳುತ್ತಾನೆ.

2. ಅಟ್ಟ ನೋಡದೆ ಬೆಟ್ಟ ಹತ್ತುತ್ತೇನೆ

ಈ ವಾಕ್ಯವನ್ನು **ಎಲ್. ಹನುಮಂತಯ್ಯ** ಅವರು ಬರೆದಿರುವ **'ಅವ್ವನ ಕವಿತೆ'** ಎಂಬ ಕೃತಿಯಿಂದ ಆಯ್ದ **ಅಟ್ಟ ಹತ್ತ ಬೇಡ** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಮಗ ಅಜ್ಜನಿಗೆ ಹೇಳುತ್ತಾನೆ. ಅಟ್ಟವನ್ನು ಹತ್ತದವನು ಬೆಟ್ಟ ಹತ್ತುತ್ತಾನೆಯೇ ಎಂದು ಜನರು ನಗುತ್ತಾರೆ ಎಂದಾಗ ಅಜ್ಜನ ಮಾತಿಗೆ ಮಗ ಈ ಮೇಲಿನ ಮಾತನ್ನು ಹೇಳುತ್ತಾನೆ.

**3. ಭಾಷಾಭ್ಯಾಸ :**

**ಅ) ಕೆಳಗಿನ ಪದಗಳಿಗೆ ವಿರುದ್ಧಾರ್ಥ ಬರೆಯಿರಿ.**

ಬೇಡ x ಬೇಕು, ನುಣುಪು x ಒರಟು ಬೀಳಿಸು x ಏಳಿಸು, ದೂರ x ಹತ್ತಿರ, ಹತ್ತು x ಇಳಿ.

**ಆ) ಕೆಳಗಿನ ಪದಗಳಿಗೆ ನಾನಾರ್ಥ ಬರೆಯಿರಿ.**

ಹತ್ತು– ಒಂದು ಸಂಖ್ಯೆ; ಮೇಲೇರು, ಬೇಡ– ಬೇಟೆಗಾರ; ಒಲ್ಲೆ.

**ಇ) ಕೆಳಗಿನ ಪದಗಳ ವಿಶೇಷಾರ್ಥ ಗಮನಿಸಿ, ಅದೇ ಅರ್ಥ ಬರುವಂತೆ ವಾಕ್ಯಗಳನ್ನು ರಚಿಸಿರಿ.**

ಅಟ್ಟ ಹತ್ತಿಸು – ಅತಿಯಾಗಿ ಹೊಗಳು : ಕೆಲವರು ತಮ್ಮ ಮಾತಿನ ಮೋಡಿಯಿಂದ ಅಟ್ಟ ಹತ್ತಿಸುತ್ತಾರೆ.
ದೂರದ ಬೆಟ್ಟ – ಕೈಗೆ ಸಿಗದ : ದೂರದ ಬೆಟ್ಟ ಕಣ್ಣಿಗೆ ನುಣುಪಾಗಿ ಕಾಣುತ್ತದೆ.
ಬೀಳಿಸು – ಸೋಲಿಸು : ಆಟದಲ್ಲಿ ಬೀಳಿಸುವುದು ಸಹಜವಾಗಿರುತ್ತದೆ.
ಮೇಲೇರಿ ನಿಲ್ಲು – ಬಲಿಷ್ಠನಾಗು : ಬೆಟ್ಟ ಹತ್ತಿ ಮೇಲೇರಿ ನಿಲ್ಲುತ್ತೇನೆ.

**ಈ) ಕಲ್ಲುಮುಳ್ಳು** – ಇಂತಹ ಐದು ಜೋಡಿ ಪದಗಳನ್ನು ಬರೆಯಿರಿ.

**ಸಿಡುಕುಮಿಡುಕು, ಅವಳಿ ಜವಳಿ, ಸುತ್ತಮುತ್ತ, ಊರುಕೇರಿ, ಮರಗಿಡ.**

## 3. ಅವರು ಮತ್ತು ನಾವು – ಟಿ. ಯಲ್ಲಪ್ಪ

**ಕೃತಿಕಾರರ ಪರಿಚಯ :**

* **ಟಿ.ಯಲ್ಲಪ್ಪ** ಅವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಎ. ನಾರಾಯಣಪುರದಲ್ಲಿ 1970 ರಲ್ಲಿ ಜನಿಸಿದರು.

* ಇವರು ಇಪ್ಪತ್ತೆರಡರ ಅಳಲು, ಕಡಲಿಗೆ ಕಳಿಸಿದ ದೀಪ, ಚಿಟ್ಟೆ ಮತ್ತು ಜೀವಯಾನ ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

* ಇವರಿಗೆ ನಾಡೋಜ ಚೆನ್ನವೀರ ಕಣವಿ ಪ್ರಶಸ್ತಿ, ಜಿ.ಎಸ್.ಶಿವರುದ್ರಪ್ಪ ಕಾವ್ಯ ಪ್ರಶಸ್ತಿ, ಸಂಕ್ರಮಣ ಕಾವ್ಯ ಸ್ಪರ್ಧೆಯ ಬಹುಮಾನ, ಸಂಚಯ ಸಾಹಿತ್ಯ ಸ್ಪರ್ಧೆಯ ಬಹುಮಾನ, ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

* ಪ್ರಸ್ತುತ 'ಅವರು ಮತ್ತು ನಾವು' ಕವಿತೆಯನ್ನು ಅವರ **'ಚಿಟ್ಟೆ ಮತ್ತು ಜೀವಯಾನ'** ಕವನ ಸಂಕಲನದಿಂದ ಆಯ್ಕೆ ಮಾಡಿಕೊಳ್ಳಲಾಗಿದೆ.

**1. ಪದಗಳ ಅರ್ಥ :**

**ಕಣ್ಣಿಗೊತ್ತಿಕೊ** – ಪವಿತ್ರ ಭಾವನೆಯನ್ನು ಹೊಂದು.
**ದಣಿವು** – ಆಯಾಸ
**ಪಾತಾಳ** – ಭೂಮಿ ಕೆಳಗಿರುವ ಒಂದು ಲೋಕ.
**ಮನುಜ** – ಮನುಷ್ಯ
**ಕೈಚಾಚು** – ಬೇಡು
**ನಿಷ್ಕಾರುಣ್ಯ** – ಕರುಣೆ ಇಲ್ಲದಿರುವಿಕೆ
**ಬರಡು** – ನಿಸ್ಸಾರ; ಗೊಡ್ಡು.
**ಶಪಿಸು** – ಶಾಪಹಾಕು

**2. ಪ್ರಶ್ನೆಗಳು :**

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ :**

1. 'ಅವರು ಮತ್ತು ನಾವು' ಕವಿತೆಯಲ್ಲಿನ ವ್ಯಕ್ತಿಗಳು ಯಾರು?
ಅವರು ಮತ್ತು ನಾವು ಕವಿತೆಯಲ್ಲಿನ ವ್ಯಕ್ತಿಗಳು ಉಳ್ಳವರು ಮತ್ತು ದಲಿತರು.
2. ನಾವು ತಿನ್ನುವುದಕ್ಕೆ ಅನ್ನ ಕೇಳಿದರೆ ಉಳ್ಳವರು ಕೊಟ್ಟದ್ದು ಏನು?
ನಾವು ತಿನ್ನುವುದಕ್ಕೆ ಅನ್ನ ಕೇಳಿದರೆ ಉಳ್ಳವರು ಹುಳಬಿದ್ದ ಅಕ್ಕಿ ಕೊಟ್ಟರು.
3. ಹುಳಬಿದ್ದ ಅನ್ನವನ್ನು ಶೋಷಿತರು ಹೇಗೆ ಬಳಸಿಕೊಂಡರು?
ಶೋಷಿತರು ಹುಳವನ್ನು ದೇವರಿಗೆ ಅರ್ಪಿಸಿ ಅಕ್ಕಿಯನ್ನು ಕಣ್ಣಿಗೊತ್ತಿಕೊಂಡು ಅನ್ನ ಮಾಡಿ ಉಂಡರು.
4. ಮಾನವನ ಎದೆಯನ್ನು ಕವಿ ಯಾವುದಕ್ಕೆ ಹೋಲಿಸಿದ್ದಾರೆ?
ಮಾನವನ ಎದೆಯನ್ನು ಕವಿ ಪ್ರೀತಿ ಪ್ರೇಮಗಳ ದವಸ ತುಂಬಿದ ಕಣಜಕ್ಕೆ ಹೋಲಿಸಿದ್ದಾರೆ.
5. 'ಅವರು ಮತ್ತು ನಾವು' ಕವನದ ಆಕರ ಕೃತಿ ಯಾವುದು?
ಅವರು ಮತ್ತು ನಾವು ಕವನದ ಆಕರ ಕೃತಿ **'ಚಿಟ್ಟೆ ಮತ್ತು ಜೀವಯಾನ'**

**ಆ) ಈ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಒಂದು ಕಾಲದಲ್ಲಿ ಮೆರೆದವರ ಸ್ಥಿತಿ ಇಂದು ಏನಾಗಿದೆ?
ಒಂದು ಕಾಲದಲ್ಲಿ ಮೆರೆದವರು ತಿನ್ನುವ ಅನ್ನಕ್ಕೆ ಈಗ ಹುಳ ಬಿದ್ದಿದೆ. ಅವರು ಹುಳ ಬಿದ್ದಿದ್ದ ಅಕ್ಕಿಯಲ್ಲಿ ಹುಳಗಳನ್ನು ನಿಷ್ಕಾರುಣ್ಯವಾಗಿ ಕೊಂದು ಅನ್ನಕ್ಕಾಗಿ ದೇವರಲ್ಲಿ ಬೇಡುತ್ತಿದ್ದಾರೆ.
2. ಶ್ರೀಮಂತರನ್ನು ಶಪಿಸುವುದು ತರವಲ್ಲ ಎಂದು ಕವಿಗೆ ಏಕೆ ಅನಿಸಿತು?
ಶ್ರೀಮಂತರು ಶೋಷಿತರಿಂದ ಏನನ್ನು ಹಿಂಪಡೆಯದೆ, ಮೊದಲಿನಿಂದಲೂ ಏನನ್ನಾದರೂ ಕೊಡುತ್ತಲೇ ಬಂದಿದ್ದಾರೆ. ಶೋಷಿತರ ಜೀವ, ಮಾನ, ಪ್ರಾಣಗಳನ್ನು ಉಳಿಸಿದ್ದಾರೆ. ಆದ್ದರಿಂದ ಶ್ರೀಮಂತರನ್ನು ಶಪಿಸುವುದು ತರವಲ್ಲ ಎಂದು ಕವಿಗೆ ಅನ್ನಿಸಿದೆ.
3. ನೀರು ನೀಡಲು ನೋಯಿಸಿದವರ ಸ್ಥಿತಿ ಇಂದು ಏನಾಗಿದೆ?
ನೀರು ನೀಡಲು ನೋಯಿಸಿದವರು ಸಾಯುವಾಗ ಅವರ ಬಾಯಿಗೆ ನೀರು ಬಿಡುವವರು ಯಾರೂ ಇಲ್ಲದೆ, ಅವರ ಮಕ್ಕಳು ದೂರದ ದೇಶಕ್ಕೆ ಹೋಗಿದ್ದಾರೆ. ಅವರ ನೆನಪಿನಲ್ಲಿಯೇ ಇವರು ಕಣ್ಣೀರು ಸುರಿಸುತ್ತಾ ಪಾತಾಳಕ್ಕೆ ಇಳಿದಿದ್ದಾರೆ.
4. 'ಅವರು ಮತ್ತು ನಾವು' ಕವಿತೆಯಲ್ಲಿ ಕವಿ ಯಾವ ಸುಖಕ್ಕೆ ಹಂಬಲಿಸುತ್ತಾರೆ?
ಕವಿಯು, ಮಾನವನ ಹೃದಯ ಬರಡೇನಲ್ಲ. ಅದು ಪ್ರೀತಿ ಪ್ರೇಮಗಳ ದವಸ ತುಂಬಿದ ಕಣಜ. ಆ ಹೃದಯಕ್ಕೆ ಹಂಚಿ ತಿನ್ನುವುದರಲ್ಲಿರುವ ನಿಜವಾದ ಸುಖವನ್ನು ತಿಳಿಸಬೇಕು ಎಂದು ಕವಿ ಹೇಳುತ್ತಾರೆ. ಕವಿ ಹಂಚಿ ತಿನ್ನುವುದರಲ್ಲಿರುವ ಸುಖಕ್ಕೆ ಹಂಬಲಿಸುತ್ತಾರೆ.

**ಇ) ಕೆಳಗಿನ ಪ್ರಶ್ನೆಗಳಿಗೆ ಎಂಟು– ವಾಕ್ಯಗಳಲ್ಲಿ ಉತ್ತರಿಸಿರಿ.**

1. 'ಅವರು ಮತ್ತು ನಾವು' ಕವಿತೆಯಲ್ಲಿ ಬಿಂಬಿತವಾಗಿರುವ ವೈರುಧ್ಯಗಳು ಯಾವುವು?

**"ಅಥವಾ"**

2. 'ಅವರು ಮತ್ತು ನಾವು' ಕವಿತೆಯಲ್ಲಿ ವ್ಯಕ್ತವಾಗಿರುವ ಕವಿಯ ಭಾವನೆಗಳೇನು?
ಪ್ರಸ್ತುತ ಕವನದಲ್ಲಿ ಸಮಾಜದ ಎರಡು ವರ್ಗ ಹಾಗೂ ವರ್ಣಗಳಲ್ಲಿ ಕಂಡುಬರುವ ವೈರುಧ್ಯಗಳನ್ನು ಗುರುತಿಸಬಹುದು. **'ಮಾಡಿದ್ದುಣ್ಣೋ ಮಾರಾಯ'** ಎನ್ನುವ ಗಾದೆಯಂತೆ ನಾವು ಮಾಡಿದ ಪಾಪ ಕೃತ್ಯಗಳಿಗೆ ಪ್ರಾಯಶ್ಚಿತ್ತವನ್ನು ಅನುಭವಿಸಲೇ ಬೇಕಾಗುತ್ತದೆ. ದೀನದಲಿತರನ್ನು ನಿಕೃಷ್ಟವಾಗಿ ನಡೆಸಿಕೊಂಡವರ ಸ್ಥಿತಿ ಇಂದು ಯಾವ ರೀತಿ ಹೀನಾಯವಾಗಿದೆ ಎಂಬುದನ್ನು 'ಅವರು ಮತ್ತು ನಾವು' ಕವಿತೆ ಬಿಚ್ಚಿಡುತ್ತದೆ. ಒಂದು ಕಾಲದಲ್ಲಿ ಮೆರೆದು ಈಗ ದುಃಖದಲ್ಲಿರುವವರನ್ನು ಶಪಿಸದೆ, ಅವರಿಗೆ ಪ್ರೀತಿ ಪ್ರೇಮವನ್ನು ಹಂಚುವ ಮೂಲಕ ಸುಖದ ನಿಜವಾದ ಅರ್ಥವನ್ನು ತಿಳಿಸೋಣ, ಮಾನವತೆಯ ಪಾಠ ಕಲಿಸೋಣ ಎನ್ನುವ ವಿಶಾಲ ದೃಷ್ಟಿಕೋನ ಕವನದಲ್ಲಿ ವ್ಯಕ್ತವಾಗಿದೆ.

**ಈ) ಸಂದರ್ಭದೊಡನೆ ವಿವರಿಸಿರಿ.**

1. ಅವರು ತಿನ್ನುವ ಅನ್ನಕ್ಕೆ ಹುಳ ಬಿದ್ದಿದೆ.

ಈ ವಾಕ್ಯವನ್ನು **ಟಿ. ಯಲ್ಲಪ್ಪ** ಅವರು ಬರೆದಿರುವ **'ಚಟ್ಟಿ ಮತ್ತು ಜೀವಯಾನ'** ಎಂಬ ಕೃತಿಯಿಂದ ಆಯ್ದ **ಅವರು ಮತ್ತು ನಾವು** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಕವಿ ಹೇಳುತ್ತಾರೆ. ದಲಿತರು ತಿನ್ನುವುದಕ್ಕೆ ಅನ್ನ ಕೇಳಿದರು. ಆದರೆ ಉಳ್ಳವರು ಹುಳಬಿದ್ದ ಅಕ್ಕಿ ಕೊಟ್ಟರು. ದಲಿತರು ಹುಳವನ್ನು ದೇವರಿಗೆ ಅರ್ಪಿಸಿ ಅಕ್ಕಿಯನ್ನು ಕಣ್ಣಿಗೊತ್ತಿಕೊಡು ಅನ್ನ ಮಾಡಿ ಉಂಡರು. ಈಗ ಉಳ್ಳವರು ತಿನ್ನುವ ಅನ್ನಕ್ಕೆ ಹುಳಬಿದ್ದಿದೆ ಎಂದು ಕವಿ ಹೇಳಿದ್ದಾರೆ.

2. ನಾವು ಕುಡಿಯುವುದಕ್ಕೆ ನೀರು ಕೇಳಿದೆವು.

ಈ ವಾಕ್ಯವನ್ನು **ಟಿ. ಯಲ್ಲಪ್ಪ** ಅವರು ಬರೆದಿರುವ **'ಚಟ್ಟಿ ಮತ್ತು ಜೀವಯಾನ'** ಎಂಬ ಕೃತಿಯಿಂದ ಆಯ್ದ **ಅವರು ಮತ್ತು ನಾವು** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ

ಈ ಮಾತನ್ನು ಕವಿ ಹೇಳುತ್ತಾರೆ. ದಲಿತರು ಕುಡಿಯುವುದಕ್ಕೆ ನೀರು ಕೇಳಿದಾಗ, ಉಳ್ಳವರು ಆಕಾಶದಲ್ಲಿ ನಿಂತು ಪಾತಾಳಕ್ಕೆ ನೀರು ಸುರಿದರು. ಇಲ್ಲಿ ಸಮಾಜದ ಎರಡು ವರ್ಗ ಹಾಗೂ ವರ್ಣಗಳಲ್ಲಿ ಕಂಡುಬರುವ ವೈರುಧ್ಯಗಳನ್ನು ತಿಳಿಸುವಾಗ ಈ ಮೇಲಿನ ಮಾತು ಬಂದಿದೆ.

3. ಮಾನವನೆದೆ ಬರಡೇನಲ್ಲ.

ಈ ವಾಕ್ಯವನ್ನು **ಟಿ. ಯಲ್ಲಪ್ಪ** ಅವರು ಬರೆದಿರುವ **'ಚಟ್ಟಿ ಮತ್ತು ಜೀವಯಾನ'** ಎಂಬ ಕೃತಿಯಿಂದ ಆಯ್ದ **ಅವರು ಮತ್ತು ನಾವು** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ

ಈ ಮಾತನ್ನು ಕವಿ ಹೇಳುತ್ತಾರೆ. ಮಾನವನ ಹೃದಯ ಬರಡೇನಲ್ಲ. ಅದು ಪ್ರೀತಿ ಪ್ರೇಮಗಳ ದವಸ ತುಂಬಿದ ಕಣಜ. ಆ ಹೃದಯಕ್ಕೆ ಹಂಚಿ ತಿನ್ನುವುದರಲ್ಲಿರುವ ನಿಜವಾದ ಸುಖವನ್ನು ತಿಳಿಸಬೇಕು ಎಂದು ಕವಿ ಹೇಳುವಾಗ ಈ ಮೇಲಿನ ಮಾತು ಬಂದಿದೆ.

**3. ಭಾಷಾಭ್ಯಾಸ :**

**ಅ) ಇಲ್ಲಿ ನೀಡಿರುವ ವಿಶೇಷೋಕ್ತಿಗಳನ್ನು ಸ್ವಂತ ವಾಕ್ಯಗಳಲ್ಲಿ ಬರೆಯಿರಿ.**

1. ಕಣ್ಣಿಗೊತ್ತಿಕೊ : ಬಡವರು ಅಕ್ಕಿಯನ್ನು ಕಣ್ಣಿಗೊತ್ತಿಕೊಂಡು ಅನ್ನ ಮಾಡಿ ಉಂಡರು.
2. ಕೈಚಾಚು : ಭಿಕ್ಷುಕರು ಭಿಕ್ಷೆಗಾಗಿ ಕೈಚಾಚುತ್ತಾರೆ.
3. ನೀರುಬಿಡು : ನದಿಯಿಂದ ತೋಟಕ್ಕೆ ನೀರು ಬಿಡುತ್ತಾರೆ.
4. ಆಕಾಶದಲ್ಲಿ ಹಾರು : ಪಕ್ಷಿಗಳು ಆಕಾಶದಲ್ಲಿ ಹಾರುತ್ತವೆ.
5. ಪಾತಾಳಕ್ಕೆ ಇಳಿ : ಬೇಸಿಗೆ ಕಾಲದಲ್ಲಿ ಅಂತರ್ಜಲ ಪಾತಾಳಕ್ಕೆ ಇಳಿಯುತ್ತದೆ.

**ಆ) ಕೆಳಗೆ ನೀಡಿರುವ ಪದಗಳನ್ನು ಬಿಡಿಸಿ ಸಂಧಿ ಹೆಸರಿಸಿರಿ.**

1. ಕಣ್ಣಿಗೊತ್ತಿಕೊ = ಕಣ್ಣಿ + ಒತ್ತಿಕೊ – ಲೋಪಸಂಧಿ
2. ದಣಿವಾರಿಸಿಕೊಂಡು = ದಣಿ + ಆರಿಸಿಕೊಂಡು – ಆಗಮಸಂಧಿ
3. ನಮಗೇನಾದರೂ = ನಮಗೆ + ಏನಾದರೂ – ಲೋಪಸಂಧಿ
4. ಉಟ್ಟುಣ್ಣುವ = ಉಟ್ಟು + ಉಣ್ಣುವ – ಲೋಪಸಂಧಿ

## 4. ತೊಟ್ಟಿಲು ತೂಗುವ ಹಾಡು – ವೈದೇಹಿ (ಜಾನಕಿ ಶ್ರೀನಿವಾಸಮೂರ್ತಿ)

**ಕೃತಿಕಾರರ ಪರಿಚಯ :**

- **ವೈದೇಹಿ** ಅವರು ಉಡುಪಿ ಜಿಲ್ಲೆಯ ಕುಂದಾಪುರದಲ್ಲಿ 1945 ರಲ್ಲಿ ಜನಿಸಿದರು.
- ಇವರು ಬಿಂದು ಬಿಂದಿಗೆ, ಪಾರಿಜಾತ, ಅಸ್ಪೃಶ್ಯರು, ಅಮ್ಮಚ್ಚಿಯೆಂಬ ನೆನಪು, ಮಲ್ಲಿನಾಥನ ಧ್ಯಾನ, ಮೇಜು ಮತ್ತು ಬಡಗಿ ಮುಂತಾದ ಪ್ರಮುಖ ಕೃತಿಗಳನ್ನು ರಚಿಸಿದ್ದಾರೆ.
- ಶ್ರೀಯುತರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಎಂ.ಕೆ.ಇಂದಿರಾ ಪ್ರಶಸ್ತಿ, ಅನುಪಮಾ ಪ್ರಶಸ್ತಿ, ದಾನ ಚಿಂತಾಮಣಿ ಅತ್ತಿಮಬ್ಬೆ ಪ್ರಶಸ್ತಿ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಮುಂತಾದ ಪ್ರಶಸ್ತಿಗಳು ಲಭಿಸಿದೆ.
- ಪ್ರಸ್ತುತ ಕವನವನ್ನು ಅವರ **'ಹೂವ ಕಟ್ಟುವ ಕಾಯಕ'** ಎಂಬ ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

## ಅಭ್ಯಾಸ

**1. ಪದಗಳ ಅರ್ಥ :**

**ಅಲೆ** – ತರಂಗ; ತೆರೆ.
**ಜೋಲಿ** – ತೊಟ್ಟಿಲು
**ತೊಯ್ದ** – ಒದ್ದೆಯಾದ; ನೆನೆದ.
**ಪಕಳೆ** – ಎಸಳು; ಹೂವಿನ ದಳ.
**ಸಾವಧಾನ** – ನಿಧಾನ; ಸಾವಕಾಶ.
**ಹೊಳೆ** – ನದಿ; ಪ್ರಕಾಶಿಸು.
**ಕರಿಕಂಗಳ** –ಕಪ್ಪನೆ ಅಂಗಳ; ರಾತ್ರಿಯ ಆಕಾಶ.
**ತಾರೆ** – ನಕ್ಷತ್ರ
**ನೊರೆ** – ನೀರಿನ ಮೇಲಿನ ಬುರುಗು; ಗಾಳಿಗುಳ್ಳೆ.
**ಮುಗಿಲು** – ಆಕಾಶ; ಗಗನ; ಬಾನು.
**ಹಸುಳೆ** – ಎಳೆ ಮಗು; ಹಸುಗೂಸು.

**2. ಪ್ರಶ್ನೆಗಳು :**

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. 'ತೊಟ್ಟಿಲು ತೂಗುವ ಹಾಡು' ಕವಿತೆಯ ಆಕರ ಕೃತಿ ಯಾವುದು?
ತೊಟ್ಟಿಲು ತೂಗುವ ಹಾಡು ಕವಿತೆಯ ಆಕರ ಕೃತಿ **'ಹೂವ ಕಟ್ಟುವ ಕಾಯಕ '**
2. ಕವಿಗೆ ಪ್ರಕೃತಿಗಿಂತಲೂ ಹೆಚ್ಚು ಚಂದವಾಗಿ ಕಂಡದ್ದು ಯಾವುದು?
ಕವಿಗೆ ಪ್ರಕೃತಿಗಿಂತಲೂ ಹೆಚ್ಚು ಚಂದವಾಗಿ ಕಂಡದ್ದು ತೊಟ್ಟಿಲಿನಲ್ಲಿರುವ ಮಗು.
3. ಹೊಳೆ, ಅಲೆ ಹಾಗೂ ಗಾಳಿ ಹೇಗೆ ನಾದಗೈಯುತ್ತವೆ?
ಹರಿವ ಹೊಳೆಯು ಳು ಳು ಳು ಎಂದು, ಅಲೆಯ ನೊರೆಯು ರು ರು ರು ಎಂದು, ಗಾಳಿಯು ಸ್ಸುಯ್ಞ್ ಎಂದು ನಾದಗೈಯುತ್ತವೆ.
4. ಜೋಲಿಯೊಳಗಿನ ಹಸುಳೆ ಹೇಗೆ ನಗುತ್ತದೆ?
ಜೋಲಿಯೊಳಗಿನ ಹಸುಳೆ ಲ ಲ ಲ ಎಂದು ನಗುತ್ತದೆ.
5. ಗಿರಿಯ ನವಿಲಿನ ಚಂದವೇನು?
ಬೆಟ್ಟ ಗುಡ್ಡಗಳ ಮೇಲೆ ನಲಿದಾಡುವ ನವಿಲಿನ ನಾಟ್ಯ ಚೆಂದ.
6. ಕರಿಕಂಗಳಲ್ಲಿ ಎಂತಹ ಚಂದವಿದೆ?
ಕರಿಕಂಗಳಲ್ಲಿ ಮಿನುಗುವ ನಕ್ಷತ್ರಗಳ ಚಂದವಿದೆ.
7. ವೈದೇಹಿಯವರ ನಿಜವಾದ ಹೆಸರೇನು?
ವೈದೇಹಿಯವರ ನಿಜವಾದ ಹೆಸರು ಜಾನಕಿ ಶ್ರೀನಿವಾಸಮೂರ್ತಿ.

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. 'ತೊಟ್ಟಿಲು ತೂಗುವ ಹಾಡು' ಕವಿತೆಯಲ್ಲಿ ಕವಿಗೆ ಚಂದವಾಗಿ ಕಂಡ ಪ್ರಕೃತಿಯ ದೃಶ್ಯಗಳಾವುವು?
ಪ್ರಸ್ತುತ 'ತೊಟ್ಟಿಲು ತುಗುವ ಹಾಡು' ಕವನದಲ್ಲಿ ವೈದೇಹಿಯವರು ತಾಯಿಯೊಬ್ಬಳು ಪ್ರಕೃತಿಯನ್ನು ವರ್ಣಿಸುತ್ತಾ, ತನ್ನ ಮಗು ಪ್ರಕೃತಿಗಿಂತಲೂ ಚೆಂದ ಎಂದು ಜೋಗುಳ ಹಾಡುತ್ತಾ ಜಗತ್ತನ್ನೇ ತೂಗುವ ಮಾತೃ ವಾತ್ಸಲ್ಯವನ್ನು ಸೊಗಸಾಗಿ ವರ್ಣಿಸಿದ್ದಾರೆ. ನೋಡಲು ಆಕಾಶವು ಚೆಂದ, ಆಕಾಶದಿಂದ ಸುರಿವ ಮಳೆ, ಆ ಮಳೆಯಿಂದ ತೊಯ್ದ ಗುಡ್ಡ, ಬೆಟ್ಟಗಳು, ಗಿಡ ಮರಗಳಲ್ಲಿ ಅರಳುವ ಹೂವು, ಹಾಗೆಯೇ ಮೊಟ್ಟೆಯಿಂದ ಹೊರ ಬರುವ ಹಕ್ಕಿ ನೋಡಲು ಚೆಂದ. ಇವೆಲ್ಲಕ್ಕಿಂತ ತೊದಲು ನುಡಿಗಳನ್ನು ನುಡಿಯುವ, ತೊಟ್ಟಿಲಲ್ಲಿ ಮಲಗಿರುವ ನನ್ನ ಕಂದನೇ ಚೆಂದ ಎಂದು ತಾಯಿ ಹಾಡುತ್ತಾಳೆ. ಈ ಎಲ್ಲಾ ಅಂಶಗಳು ಪ್ರಕೃತಿಯ ದೃಶ್ಯಗಳಾಗಿವೆ.
2. ಕವಯಿತ್ರಿಯು ತೊಟ್ಟಿಲಲ್ಲಿ ನಗುವ ಹಸುಳೆಯ ಚಂದವನ್ನು ಹೇಗೆ ವರ್ಣಿಸಿದ್ದಾರೆ?
ಹರಿವ ಹೊಳೆಯ ಳು ಳು ಳು ನಾದ ಚೆಂದ, ಸಾಗರದಲ್ಲಿರುವ ಅಲೆಯ ನೊರೆಯ ರು ರು ರು ಚೆಂದ, ಗಾಳಿ ಸ್ಸುಂಯ್ಞ್ ಎಂದು ಬೀಸುವ ನಾದ, ಹಾಗೂ ಸಾವಧಾನವಾಗಿ ತೇಲಿ ಬರುವ ದೋಣಿಯು ನೋಡಲು ಚೆಂದ, ಆದರೆ ಇವೆಲ್ಲಕ್ಕಿಂತ ಜೋಲಿಯೊಳಗೆ ಲ ಲ ಲ ಎಂದು ನಗುವ ಹಸುಗೂಸು ಇನ್ನೂ ಚೆಂದ ಎಂದು ತಾಯಿ ತೊಟ್ಟಿಲಲ್ಲಿರುವ ತನ್ನ ಮುದ್ದು ಕಂದನನ್ನು ವರ್ಣಿಸುತ್ತಾಳೆ.

**ಇ) ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

1. 'ತೊಟ್ಟಿಲು ತೂಗುವ ಹಾಡು' ಕವಿತೆಯಲ್ಲಿ ಕವಯಿತ್ರಿ ಜಗವನ್ನೆಲ್ಲಾ ತೂಗಿರುವ ಪರಿ ಹೇಗೆ?
ಪ್ರಸ್ತುತ 'ತೊಟ್ಟಿಲು ತುಗುವ ಹಾಡು' ಕವನದಲ್ಲಿ ವೈದೇಹಿಯವರು ತಾಯಿಯೊಬ್ಬಳು ಪ್ರಕೃತಿಯನ್ನು ವರ್ಣಿಸುತ್ತಾ, ತನ್ನ ಮಗು ಪ್ರಕೃತಿಗಿಂತಲೂ ಚೆಂದ ಎಂದು ಜೋಗುಳ ಹಾಡುತ್ತಾ ಜಗತ್ತನ್ನೇ ತೂಗುವ ಮಾತೃ ವಾತ್ಸಲ್ಯವನ್ನು ಸೊಗಸಾಗಿ ವರ್ಣಿಸಿದ್ದಾರೆ. ನೋಡಲು ಆಕಾಶವು ಚೆಂದ, ಆಕಾಶದಿಂದ ಸುರಿವ ಮಳೆ, ಆ ಮಳೆಯಿಂದ ತೊಯ್ದ ಗುಡ್ಡ, ಬೆಟ್ಟಗಳು,

ಗಿಡ ಮರಗಳಲ್ಲಿ ಅರಳುವ ಹೂವು, ಹಾಗೆಯೇ ಮೊಟ್ಟೆಯಿಂದ ಹೊರ ಬರುವ ಹಕ್ಕಿ ನೋಡಲು ಚೆಂದ. ಇವೆಲ್ಲಕ್ಕಿಂತ ತೊದಲು ನುಡಿಗಳನ್ನು ನುಡಿಯುವ, ತೊಟ್ಟಿಲಲ್ಲಿ ಮಲಗಿರುವ ನನ್ನ ಕಂದನೇ ಚೆಂದ ಎಂದು ತಾಯಿ ಹಾಡುತ್ತಾಳೆ. ಹರಿವ ಹೊಳೆಯ ಳು ಳು ಳು ನಾದ ಚೆಂದ, ಸಾಗರದಲ್ಲಿರುವ ಅಲೆಯ ನೊರೆಯ ರು ರು ರು ಚೆಂದ, ಗಾಳಿ ಸ್ಸುಂಯ್ಞ್ ಎಂದು ಬೀಸುವ ನಾದ, ಹಾಗೂ ಸಾವಧಾನವಾಗಿ ತೇಲಿ ಬರುವ ದೋಣಿಯು ನೋಡಲು ಚೆಂದ, ಆದರೆ ಇವೆಲ್ಲಕ್ಕಿಂತ ಜೋಲಿಯೊಳಗೆ ಲ ಲ ಲ ಎಂದು ನಗುವ ಹಸುಗೂಸು ಇನ್ನೂ ಚೆಂದ ಎಂದು ತಾಯಿ ತೊಟ್ಟಿಲಲ್ಲಿರುವ ತನ್ನ ಮುದ್ದು ಕಂದನನ್ನು ವರ್ಣಿಸುತ್ತಾ, ಕವಯಿತ್ರಿ ಜಗವನ್ನೇ ತೂಗಿರುವ ಪರಿಯನ್ನು ನಾವು ಇಲ್ಲಿ ಕಾಣಬಹುದಾಗಿದೆ.

2. 'ತೊಟ್ಟಿಲು ತೂಗುವ ಹಾಡು' ಕವಿತೆಯ ಆಶಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.
ಹಳ್ಳಿಗರು ಪ್ರಕೃತಿಯ ಕೂಸುಗಳಾಗಿದ್ದಾರೆ. ಆಧುನಿಕತೆಯ ಪ್ರಭಾವದಿಂದ ಹಳ್ಳಿಗರು ಪಟ್ಟಣಕ್ಕೆ ವಲಸೆ ಬರುತ್ತಿದ್ದಾರೆ. ನಾಗರಿಕತೆ ಬೆಳೆದಂತೆ ಪ್ರಕೃತಿ ಹಾಗೂ ಜಾನಪದ ಸಂಸ್ಕೃತಿಗಳು ಕಣ್ಮರೆಯಾಗುತ್ತಿವೆ. ಅವಿಭಕ್ತ ಕುಟುಂಬ ಒಡೆದು, ಹಿರಿಯರ ಅನುಭವ ಮಾರ್ಗದರ್ಶನಗಳು ಹಾಗೂ ಪ್ರೀತಿಗಳು ಇಂದಿನವರಿಗೆ ಇಲ್ಲವಾಗಿವೆ. ಪ್ರಸ್ತುತ ಕವನದಲ್ಲಿ ತಾಯಿಯೊಬ್ಬಳು ಪ್ರಕೃತಿಯನ್ನು ವರ್ಣಿಸುತ್ತಾ ತನ್ನ ಮಗು ಪ್ರಕೃತಿಗಿಂತಲೂ ಚೆಂದ ಎಂದು ಜೋಗುಳ ಹಾಡುತ್ತಾ ಜಗತ್ತನ್ನೇ ತೂಗುವ ಮಾತೃವಾತ್ಸಲ್ಯ ಪ್ರಸ್ತುತ 'ತೊಟ್ಟಿಲು ತುಗುವ ಹಾಡು' ಕವನದಲ್ಲಿ ವೈದೇಹಿಯವರು ತಾಯಿಯೊಬ್ಬಳು ಪ್ರಕೃತಿಯನ್ನು ವರ್ಣಿಸುತ್ತಾ, ತನ್ನ ಮಗು ಪ್ರಕೃತಿಗಿಂತಲೂ ಚೆಂದ ಎಂದು ಜೋಗುಳ ಹಡುತ್ತಾ ಜಗತ್ತನ್ನೇ ತೂಗುವ ಮಾತೃ ವಾತ್ಸಲ್ಯವನ್ನು ಸೊಗಸಾಗಿ ವರ್ಣಿಸಿದ್ದಾರೆ. ನೋಡಲು ಆಕಾಶವು ಚೆಂದ, ಆಕಾಶದಿಂದ ಸುರಿವ ಮಳೆ, ಆ ಮಳೆಯಿಂದ ತೊಯ್ದ ಗುಡ್ಡ, ಬೆಟ್ಟಗಳು, ಗಿಡ ಮರಗಳಲ್ಲಿ ಅರಳುವ ಹೂವು, ಹಾಗೆಯೇ ಮೊಟ್ಟೆಯಿಂದ ಹೊರ ಬರುವ ಹಕ್ಕಿ ನೋಡಲು ಚೆಂದ. ಇವೆಲ್ಲಕ್ಕಿಂತ ತೊದಲು ನುಡಿಗಳನ್ನು ನುಡಿಯುವ, ತೊಟ್ಟಿಲಲ್ಲಿ ಮಲಗಿರುವ ನನ್ನ ಕಂದನೇ ಚೆಂದ ಎಂದು ತಾಯಿ ಹಾಡುತ್ತಾಳೆ. ಈ ಎಲ್ಲಾ ಅಂಶಗಳು ಪ್ರಕೃತಿಯ ದೃಶ್ಯಗಳಾಗಿವೆ.

**ಈ) ಸಂದರ್ಭದೊಂದಿಗೆ ವಿವರಿಸಿರಿ.**
1. ಎಲ್ಲಕ್ಕಿಂತ ನಮ್ಮ ಮನೆಯ ತೊಟ್ಟಿಲಿನ ತೊದಲು ಚಂದ
ಈ ವಾಕ್ಯವನ್ನು **ವೈದೇಹಿ** ಅವರು ಬರೆದಿರುವ **'ಹೂವ ಕಟ್ಟುವ ಕಾಯಕ'** ಎಂಬ ಕೃತಿಯಿಂದ ಆಯ್ದ **ತೊಟ್ಟಿಲು ತೂಗುವ ಹಾಡು** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಈ ಮಾತನ್ನು ಕವಯಿತ್ರಿ ಹೇಳಿದ್ದಾರೆ. ತಾಯಿಯೊಬ್ಬಳು ಪ್ರಕೃತಿಯನ್ನು ವರ್ಣಿಸುತ್ತಾ, ಪ್ರಕೃತಿಗಿಂತಲೂ ಜೋಲಿಯೊಳಗೆ ಲ ಲ ಲ ಎಂದು ನಗುವ ಹಸುಗೂಸು ಇನ್ನೂ ಚೆಂದ ಎಂದು ತಾಯಿ ತೊಟ್ಟಿಲಲ್ಲಿರುವ ತನ್ನ ಮುದ್ದು ಕಂದನನ್ನು ವರ್ಣಿಸುತ್ತಾಳೆ ಎಂದು ಕವಯಿತ್ರಿ ಹೇಳಿದ್ದಾರೆ.
2. ಮಗುವ ತೂಗಿರೋ ಆಹ ಜಗವ ತೂಗಿರೋ
ಈ ವಾಕ್ಯವನ್ನು **ವೈದೇಹಿ** ಅವರು ಬರೆದಿರುವ **'ಹೂವ ಕಟ್ಟುವ ಕಾಯಕ'** ಎಂಬ ಕೃತಿಯಿಂದ ಆಯ್ದ **ತೊಟ್ಟಿಲು ತೂಗುವ ಹಾಡು** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ
ಈ ಮಾತನ್ನು ಕವಯಿತ್ರಿ ಹೇಳಿದ್ದಾರೆ. ತಾಯಿಯೊಬ್ಬಳು ಪ್ರಕೃತಿಯನ್ನು ವರ್ಣಿಸುತ್ತಾ, ತನ್ನ ಮಗು ಪ್ರಕೃತಿಗಿಂತಲೂ ಚೆಂದ ಎಂದು ಜೋಗುಳ ಹಾಡುತ್ತಾ ಜಗತ್ತನ್ನೇ ತೂಗುವ ಮಾತೃ ವಾತ್ಸಲ್ಯವನ್ನು ಸೊಗಸಾಗಿ ವರ್ಣಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**3. ಭಾಷಾಭ್ಯಾಸ :**
**ಅ) 'ಅ' ಪಟ್ಟಿಯನ್ನು 'ಬ' ಪಟ್ಟಿಯೊಂದಿಗೆ ಹೊಂದಿಸಿ ಬರೆದಿದೆ.**

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| 1) ಹರಿವ | ಅ) ಹೊಳೆ |
| 2) ಬೀಸುವ | ಆ) ಗಾಳಿ |
| 3) ತಿರುಗುವ | ಇ) ಬುಗರಿ |
| 4) ಮಿನುಗುವ | ಈ) ತಾರೆ |
| 5) ತೂಗುವ | ಉ) ತೊಟ್ಟಿಲು |
| 6) ಹಾಡುವ | ಊ) ಲಾಲಿ |
| 7) ತೇಲುವ | ಋ) ದೋಣಿ |

**ಆ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬಳಸಿ ಬರೆಯಿರಿ.**
1. ಹೊಳೆ : ಮಳೆ ಬಂದಾಗ ಹೊಳೆ ತುಂಬಿ ಹರಿಯುತ್ತದೆ.
2. ಗಾಳಿ : ಗಾಳಿ ಸ್ಸುಂಯ್ಞ್ ಎಂದು ಬೀಸುತ್ತದೆ.
3. ಸಾವಧಾನ : ದೋಣಿ ಸಾವಧಾನವಾಗಿ ತೇಲಿ ಬರುತ್ತದೆ.

4. ಮನೆ : ನಾವು ಮನೆಯಲ್ಲಿ ವಾಸ ಮಾಡುತ್ತೇವೆ.
5. ನವಿಲು : ನವಿಲು ನಾಟ್ಯ ಮಾಡುತ್ತದೆ.
6. ಚಂದ : ಗಿರಿಯಲ್ಲಿ ಆಡುವ ನವಿಲು ಚೆಂದ.

**ಇ) ಕೆಳಗಿನ ಪದಗಳಿಗೆ ವಿವಿಧಾರ್ಥಗಳನ್ನು ಬರೆಯಿರಿ.**

ಮುಗಿಲು – ಮೋಡ, ಆಕಾಶ. ಹೊಳೆ– ನದಿ, ಪ್ರಕಾಶಿಸು, ತಾರೆ– ನಕ್ಷತ್ರ, ನಟಿ. ಕರಿ– ಆನೆ, ಕಪ್ಪು.

**ಈ) 'ತೊಟ್ಟಿಲು ತೂಗುವ ಹಾಡು' ಕವಿತೆಯಲ್ಲಿ ಬಳಸಿರುವ ಅನುಕರಣಾವ್ಯಯ ಪದಗಳನ್ನು ಆರಿಸಿ ಬರೆಯಿರಿ.**

ಉದಾ : ಳು ಳು ಳು, ರು ರು ರು, ಲ ಲ ಲ, ಗರ್‍ರ ಗರ್‍ರ , ಪಿಳಿ ಪಿಳಿ, ಸ್ಸುಂಯ್ಯ್.

## 5. ಮನೆಗೆಲಸದ ಹೆಣ್ಣುಮಗಳು – ಎಸ್. ಜಿ. ಸಿದ್ಧರಾಮಯ್ಯ

**ಕೃತಿಕಾರರ ಪರಿಚಯ:**

- **ಎಸ್. ಜಿ. ಸಿದ್ಧರಾಮಯ್ಯ** ಅವರು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲೂಕಿನಲ್ಲಿ 1946 ರಲ್ಲಿ ಜನಿಸಿದರು.
- ಇವರು ಕಾಡುವ ಬೇಲಿ ಹೂ, ಅವಳೆದೆಯ ಜಂಗಮ, ಸೊಲ್ಲು ಫಲವಾಗಿ, ಮರು ಜೇವಣಿ, ಕರೆಬಳಗ, ಬೀದಿ ಅಲ್ಲಮ, **ಉರಿವ ಬತ್ತಿ ತೈಲ–** ಮುಂತಾದ ಕೃತಿಗಳನ್ನು ರಚಿಸಿದ್ದಾರೆ.
- ಇವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಪು.ತಿ.ನ.ಕಾವ್ಯ ಪ್ರಶಸ್ತಿ, ಜಿ.ಎಸ್.ಎಸ್. ಕಾವ್ಯ ಪ್ರಶಸ್ತಿ, ಮುಂತಾದ ಪ್ರಶಸ್ತಿಗಳು ದೊರಕಿವೆ.
- ಪ್ರಸ್ತುತ ಕವನವನ್ನು **"ಉರಿವ ಬತ್ತಿ ತೈಲ"** ಕವನ ಸಂಕಲನದಿಂದ ಆರಿಸಲಾಗಿದೆ.

**ಅಭ್ಯಾಸ**

**1. ಪದಗಳ ಅರ್ಥ :**

**ಜೀತ** – ಕೂಲಿ ಕೆಲಸ; ಚಾಕರಿ. **ಯೂನಿಫಾರಂ** – ಸಮವಸ್ತ್ರ
**ಸೆಲೆ** – ತೇವದಿಂದ ಚರ್ಮ ಕೊಳೆತಂತಾಗು; ಒಸರುವಿಕೆ. **ಹಕ್ಕು** – ಒಡೆತನ; ಅಧಿಕಾರ; ಸ್ವಾಮ್ಯ
**ಮುಸುರೆ** – ಆಹಾರ ಪದಾರ್ಥಗಳನ್ನು ಬೇಯಿಸಿದ ಪಾತ್ರೆ ತೊಳೆಯದೆ ಉಂಟಾದ ಅಶುಚಿ, **ಹುಣ್ಣು** – ಗಾಯ

**2. ಪ್ರಶ್ನೆಗಳು :**

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಅಪ್ಪ ಮಗಳನ್ನು ಎಲ್ಲಿ ಜೀತಕ್ಕಿಟ್ಟನು?
ಅಪ್ಪ ಮಗಳನ್ನು ಪಟ್ಟಣಕ್ಕೆ ಕರೆತಂದು ಮನೆಕೆಲಸಕ್ಕೆ ಜೀತಕ್ಕಿಟ್ಟನು.
2. ಅಪ್ಪ ಮಗಳನ್ನು ಏಕೆ ಜೀತಕ್ಕಿಟ್ಟನು?
ಅಪ್ಪ ಕುಡಿದು ಸಾಲ ಮಾಡಿ ತನ್ನ ಮಗಳನ್ನು ಜೀತಕ್ಕಿಟ್ಟನು.
3. ಶಿಕ್ಷಣದಲ್ಲಿ ಮೊದಲ ಗುರು ಮತ್ತು ಮೊದಲ ಶಾಲೆ ಯಾವುದು?
ಶಿಕ್ಷಣದಲ್ಲಿ ಮೊದಲ ಗುರು ತಾಯಿ ಮತ್ತು ಮೊದಲ ಶಾಲೆ ಮನೆ.

4. ಜೀತಕ್ಕಿದ್ದ ಹೆಣ್ಣುಮಗಳ ಕೈಕಾಲುಗಳು ಗಾಯಗೊಂಡಿದ್ದು ಏಕೆ?
ನೀರೊಳಾಡಿ ಕೈಯಿಸೆಲೆತಿದ್ದರಿಂದ, ಜೀತಕ್ಕಿದ್ದ ಹೆಣ್ಣುಮಗಳ ಕೈಕಾಲುಗಳು ಗಾಯಗೊಂಡಿದ್ದವು.
5. ಮನೆಗೆಲಸದ ಹೆಣ್ಣು ಮಗಳು ಏನನ್ನು ನೋಡಿ ಮೂಕಳಾಗುತ್ತಾಳೆ?
ಮನೆಗೆಲಸದ ಹೆಣ್ಣು ಮಗಳು ಶಾಲೆ ಮಕ್ಕಳನ್ನು ನೋಡಿ ಮೂಕಳಾಗುತ್ತಾಳೆ.
6. 'ಮನೆಗೆಲಸದ ಹೆಣ್ಣು ಮಗಳು' ಕವಿತೆಯ ಆಕರ ಕೃತಿ ಯಾವುದು?
'ಮನೆಗೆಲಸದ ಹೆಣ್ಣು ಮಗಳು' ಕವಿತೆಯ ಆಕರ ಕೃತಿ **"ಉರಿವ ಬತ್ತಿ ತೈಲ"**.

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಕುಡುಕ ಅಪ್ಪ ಮಾಡಿದ ತಪ್ಪುಗಳಾವುವು?

ಕುಡುಕ ಅಪ್ಪ ಸಾಲ ಮಾಡಿ ತನ್ನ ಓದುವ ವಯಸ್ಸಿನ ಮಗಳನ್ನು ಜೀತಕ್ಕಿಟ್ಟನು. ಅವಳ ಎಲ್ಲಾ ಹಕ್ಕುಗಳನ್ನು ಕಸಿದುಕೊಂಡು ಮನೆಕೆಲಸಕ್ಕೆ ಬಿಟ್ಟನು. ಇವು ಕುಡುಕ ಅಪ್ಪ ಮಾಡಿದ ತಪ್ಪುಗಳಾಗಿದ್ದವು.

2. ಮನೆಗೆಲಸದ ಹೆಣ್ಣು ಮಗಳು ಮಾಡುತ್ತಿದ್ದ ಕೆಲಸಗಳಾವುವು?

ಮನೆಗೆಲಸದ ಹೆಣ್ಣು ಮಗಳು ತಾನು ಜೀತದಾಳಾಗಿ ಕೆಲಸ ಮಾಡುತ್ತಿದ್ದ ಮನೆಯಲ್ಲಿ ಕಸಮುಸುರೆ ತೊಳೆಯುತ್ತಾಳೆ. ಬಟ್ಟೆ ಬರೆ ಒಗೆಯುತ್ತಾಳೆ. ಇವು ಅವಳು ಮಾಡುತ್ತಿದ್ದ ಕೆಲಸಗಳಾಗಿದ್ದವು.

3. ಶಾಲೆ ನೋಡಿದಾಗ ಮನೆಗೆಲಸದ ಹೆಣ್ಣು ಮಗಳ ಮನದಲ್ಲಿ ಯಾವ ಪ್ರಶ್ನೆಗಳು ಕಾಡತೊಡಗಿದವು?

ಶಾಲೆ ಮಕ್ಕಳಂತೆ ನಾನಿಲ್ಲ, ಅವರ ನಗುವು ಏಕೆ ನನ್ನಲ್ಲಿಲ್ಲ? ಆ ಪುಸ್ತಕ ಆ ಸ್ಲೇಟು ಯಾಕೆ ನನಗೆ ಸಿಕ್ಕಲಿಲ್ಲ? ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಅಲ್ಲವೇ? ನಾವು ಮಕ್ಕಳಲ್ಲವೇ? ನಮಗೆ ಹಕ್ಕು ಇಲ್ಲವೇ? ಎಂಬ ಪ್ರಶ್ನೆಗಳು ಅವಳಲ್ಲಿ ಕಾಡಿದವು.

4. ಹೆಣ್ಣು ಮಕ್ಕಳ ಶಿಕ್ಷಣವನ್ನು ಸಾರುವ ಧ್ಯೇಯ ವಾಕ್ಯಗಳಾವುವು?

ಹೆಣ್ಣು ಮಕ್ಕಳ ಶಿಕ್ಷಣವನ್ನು ಸಾರುವ ಧ್ಯೇಯ ವಾಕ್ಯಗಳಾವುವೆಂದರೆ, ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ, ಮನೆಯೆ ಮೊದಲ ಪಾಠಶಾಲೆ, ತಾಯಿ ಮೊದಲ ಗುರುವು.

**ಇ) ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಜೀತದ ಹೆಣ್ಣು ಮಗಳು ಅನುಭವಿಸಿದ ಕಷ್ಟಗಳಾವುವು? ಆಕೆ ಶಿಕ್ಷಣದ ಹಕ್ಕನ್ನು ಯಾವರೀತಿ ಪ್ರತಿಪಾದಿಸುತ್ತಾಳೆ?

ಕುಡಿತಕ್ಕೆ ಬಲಿಯಾದ ಒಬ್ಬ ವ್ಯಕ್ತಿ ತನ್ನ ಕುಟುಂಬದ ಸರ್ವನಾಶಕ್ಕೆ ಕಾರಣನಾಗುತ್ತಾನೆ. ಇಲ್ಲಿ ಒಬ್ಬ ತಂದೆ ತನ್ನ ಸುಖಕ್ಕಾಗಿ ಕುಡಿದು ಸಾಲ ಮಾಡಿ ತನ್ನ ಕುಟುಂಬದ ನೆಮ್ಮದಿಯನ್ನು ಹಾಳುಮಾಡುತಾನೆ. ಅಪ್ಪ ಸಾಲ ಮಾಡಿದ್ದಕ್ಕಾಗಿ ತನ್ನ ಓದುವ ವಯಸ್ಸಿನ ಮಗಳನ್ನು ಪಟ್ಟಣಕ್ಕೆ ಕರೆತಂದು ಮನೆ ಕೆಲಸಕ್ಕೆ ಬಿಟ್ಟನು. ಮನೆಗೆಲಸದ ಹೆಣ್ಣು ಮಗಳು ತಾನು ಜೀತದಾಳಾಗಿ ಕೆಲಸ ಮಾಡುತ್ತಿದ್ದ ಮನೆಯಲ್ಲಿ ಕಸಮುಸುರೆ ತೊಳೆಯುತ್ತಾಳೆ. ಬಟ್ಟೆ ಬರೆ ಒಗೆಯುತ್ತಾಳೆ.ತಾನು ನಿರೊಳಾಡಿ ಕೈಯಿ ಸೆಲೆತಿದ್ದರಿಂದ ಕೈಕಾಲುಗಳಲ್ಲಿ ಹುಣ್ಣಾಗಿದೆ. ಮೈಯಿನೋವಿನಿಂದ ನರಳಾಡುತ್ತಾಳೆ.ಅವಳಿಗೆ ಬಹಳ ದುಃಖ ಆಗುತ್ತದೆ. ತನ್ನ ಅಪ್ಪ ಅವಳಿಂದ ಎಲ್ಲಾ ರೀತಿಯ ಹಕ್ಕುಗಳನ್ನು ಕಸಿದುಕೊಂಡಿದ್ದಾರೆ.

'ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ' ಎಂಬ ಧ್ಯೇಯ ವಾಕ್ಯವಿದ್ದರೂ, ಇಲ್ಲಿ ಮನೆಗೆಲಸದ ಹೆಣ್ಣು ಮಗಳು ತಾನು ಕೆಲಸ ಮಾಡುವ ಮನೆಯ ಮಕ್ಕಳನ್ನು ಶಾಲೆಗೆ ಕರೆದುಕೊಂಡು ಹೋಗುವಾಗ ಮಕ್ಕಳು ಹಾಕಿರುವ ಯೂನಿಫಾರಂ, ಆ ಪುಸ್ತಕ ಆ ಸ್ಲೇಟು, ಅವರ ಮನದಲ್ಲಿರುವ ನಗುವನ್ನು ನೋಡಿ ಅವಳು ಮೂಕಳಾಗುತ್ತಾಳೆ. ಆ ಶಾಲೆಯ ಮಕ್ಕಳಿಗೆ ಸಿಕ್ಕಿರುವ ಸೌಲಭ್ಯಗಳು ನನಗೆ ಏಕೆ ಸಿಗಲಿಲ್ಲ ಎಂಬ ಪ್ರಶ್ನೆ ಅವಳಲ್ಲಿ ಮೂಡುತ್ತದೆ. ತಿಳಿದವರು, ದೊಡ್ಡವರು, ಮಕ್ಕಳೇ ದೇವರೆಂದು ಹೇಳುತ್ತಾರೆ. ನಾವು ಮಕ್ಕಳಲ್ಲವೇ? ನಮಗೆ ಹಕ್ಕು ಇಲ್ಲವೇ? ಎಂದು ಪ್ರಶ್ನೆ ಕೇಳುತ್ತಾಳೆ. ಈ ರೀತಿಯಾಗಿ ಅವಳು ಶಿಕ್ಷಣದ ಹಕ್ಕನ್ನು ಪ್ರತಿಪಾದಿಸುತ್ತಾಳೆ.

**ಈ) ಕೆಳಗಿನ ವಾಕ್ಯಗಳನ್ನು ಸಂದರ್ಭದೊಡನೆ ವಿವರಿಸಿರಿ.**

1. ಅವರಂತೆ ನಾನಿಲ್ಲ.

ಈ ವಾಕ್ಯವನ್ನು **ಎಸ್. ಜಿ. ಸಿದ್ಧರಾಮಯ್ಯ** ಅವರು ಬರೆದಿರುವ **"ಉರಿವ ಬತ್ತಿ ತೈಲ"** ಎಂಬ ಕೃತಿಯಿಂದ ಆಯ್ದ **ಮನೆಗೆಲಸದ ಹೆಣ್ಣುಮಗಳು** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಮನೆಗೆಲಸದ ಹೆಣ್ಣು ಮಗಳು ತನ್ನ ಮನಸ್ಸಿನಲ್ಲಿ ಹೇಳಿಕೊಳ್ಳುತ್ತಾಳೆ. ಇಲ್ಲಿ ಮನೆಗೆಲಸದ ಹೆಣ್ಣು ಮಗಳು ತಾನು ಕೆಲಸ ಮಾಡುವ ಮನೆಯ ಮಕ್ಕಳನ್ನು ಶಾಲೆಗೆ ಕರೆದುಕೊಂಡು ಹೋಗುವಾಗ ಮಕ್ಕಳು ಹಾಕಿರುವ ಯೂನಿಫಾರಂ, ಆ ಪುಸ್ತಕ ಆ ಸ್ಲೇಟು, ಅವರ ಮನದಲ್ಲಿರುವ ನಗುವನ್ನು ನೋಡಿ ಅವಳು ಮೂಕಳಾಗುತ್ತಾಳೆ ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

2. ಶಾಲೆಯೊಂದು ತೆರೆದಂತೆ.

ಈ ವಾಕ್ಯವನ್ನು **ಎಸ್. ಜಿ. ಸಿದ್ಧರಾಮಯ್ಯ** ಅವರು ಬರೆದಿರುವ **"ಉರಿವ ಬತ್ತಿ ತೈಲ"** ಎಂಬ ಕೃತಿಯಿಂದ ಆಯ್ದ **ಮನೆಗೆಲಸದ ಹೆಣ್ಣುಮಗಳು** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಮನೆಗೆಲಸದ ಹೆಣ್ಣು ಮಗಳು ತನ್ನ ಮನಸ್ಸಿನಲ್ಲಿ ಹೇಳಿಕೊಳ್ಳುತ್ತಾಳೆ. ಇಲ್ಲಿ ಮನೆಗೆಲಸದ ಹೆಣ್ಣು ಮಗಳು ತಾನು ಕೆಲಸ ಮಾಡುವ ಮನೆಯ ಮಕ್ಕಳನ್ನು ಶಾಲೆಗೆ ಕರೆದುಕೊಂಡು ಹೋಗುವಾಗ ಅವರ ಮನದಲ್ಲಿರುವ ನಗುವನ್ನು ನೋಡಿ ಆ ಶಾಲೆಯ ಮಕ್ಕಳಿಗೆ ಸಿಕ್ಕಿರುವ ಸೌಲಭ್ಯಗಳು ನನಗೆ ಏಕೆ ಸಿಗಲಿಲ್ಲ ಎಂಬ ಪ್ರಶ್ನೆ ಅವಳಲ್ಲಿ ಮೂಡಿದಾಗ ಈ ಮೇಲಿನ ಮಾತು ಬಂದಿದೆ.

3. ನಮಗೆ ಹಕ್ಕು ಇಲ್ಲವೇ?

ಈ ವಾಕ್ಯವನ್ನು **ಎಸ್. ಜಿ. ಸಿದ್ಧರಾಮಯ್ಯ** ಅವರು ಬರೆದಿರುವ **"ಉರಿವ ಬತ್ತಿ ತೈಲ"** ಎಂಬ ಕೃತಿಯಿಂದ ಆಯ್ದ **ಮನೆಗೆಲಸದ ಹೆಣ್ಣುಮಗಳು** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಈ ಮಾತನ್ನು ಮನೆಗೆಲಸದ ಹೆಣ್ಣು ಮಗಳು ತನ್ನ ಮನಸ್ಸಿನಲ್ಲಿ ಹೇಳಿಕೊಳ್ಳುತ್ತಾಳೆ. ಆ ಶಾಲೆಯ ಮಕ್ಕಳಿಗೆ ಸಿಕ್ಕಿರುವ ಸೌಲಭ್ಯಗಳು ನನಗೆ ಏಕೆ ಸಿಗಲಿಲ್ಲ ಎಂಬ ಪ್ರಶ್ನೆ ಅವಳಲ್ಲಿ ಮೂಡುತ್ತದೆ. ತಿಳಿದವರು, ದೊಡ್ಡವರು, ಮಕ್ಕಳೇ ದೇವರೆಂದು ಹೇಳುತ್ತಾರೆ. ನಾವು ಮಕ್ಕಳಲ್ಲವೇ? ನಮಗೆ ಹಕ್ಕು ಇಲ್ಲವೇ? ಎಂದು ಪ್ರಶ್ನೆ ಕೇಳುತ್ತಾಳೆ. ಈ ರೀತಿಯಾಗಿ ಅವಳು ಶಿಕ್ಷಣದ ಹಕ್ಕನ್ನು ಪ್ರತಿಪಾದಿಸುವಾಗ ಈ ಮೇಲಿನ ಮಾತು ಬಂದಿದೆ.

**3. ಭಾಷಾಭ್ಯಾಸ :**

**ಅ) ಕೆಳಗಿನ ಪದಗಳನ್ನು ಬಿಡಿಸಿ ಸಂಧಿ ಹೆಸರಿಸಿರಿ.**

1. ಮನೆಗೆಲಸ = ಮನೆ + ಕೆಲಸ – ಆದೇಶಸಂಧಿ
2. ಶಾಲೆಯೊಂದು = ಶಾಲೆ + ಒಂದು – ಆಗಮಸಂಧಿ
3. ದೇವರೆಂದು = ದೇವರು + ಎಂದು –ಲೋಪಸಂಧಿ
4. ನಾನಿಲ್ಲ = ನಾನು + ಇಲ್ಲ – ಲೋಪಸಂಧಿ
4. ನೀರೊಳಾಡಿ = ನೀರೊಳು+ ಆಳಾಡಿ – ಲೋಪಸಂಧಿ
5. ಹೆಣ್ಣೊಂದು = ಹೆಣ್ಣು + ಒಂದು – ಲೋಪಸಂಧಿ

**ಆ) 'ಅ' ಪಟ್ಟಿಯನ್ನು 'ಬ' ಪಟ್ಟಿಯೊಂದಿಗೆ ಹೊಂದಿಸಿ ಬರೆದಿದೆ:**

| **'ಅ' ಪಟ್ಟಿ** | **'ಬ' ಪಟ್ಟಿ** |
|---|---|
| 1) ಕಸಮುಸುರೆ | ಅ) ತೊಳೆಯುತೀನಿ |
| 2) ಬಟ್ಟೆ ಬರೆ | ಆ) ಒಗೆಯುತೀನಿ |
| 3) ಶಾಲೆಗೆ | ಇ) ಸೇರ್ತೀನಿ |
| 4) ಜೀತ ಪದ್ಧತಿ | ಈ) ತೊಲಗಿಸ್ತೀನಿ |

**ಇ) ಕೆಳಗಿನ ಪದಗಳಿಗೆ ತತ್ಸಮ-ತದ್ಭವಗಳನ್ನು ಬರೆಯಿರಿ.**
ಶಾಲಾ–ಸಾಲೆ, ಪುಸ್ತಕ–ಹೊತ್ತಿಗೆ, ಮೂಗ– ಮೂಕ, ಸಂತೆ–ಸಂಸ್ಥೆ.

**ಈ) ಕೆಳಗಿನ ಪದಗಳಲ್ಲಿರುವ ವಿಭಕ್ತಿ ಪ್ರತ್ಯಯಗಳನ್ನು ಗುರುತಿಸಿ ಹೆಸರಿಸಿರಿ.**

1. ಮಕ್ಕಳನ್ನು– ಅನ್ನು – ದ್ವಿತೀಯ ವಿಭಕ್ತಿ ಪ್ರತ್ಯಯ
2. ನೀಹಾರಿಕಾಗೆ – ಗೆ – ಚತುರ್ಥಿ ವಿಭಕ್ತಿ ಪ್ರತ್ಯಯ
3. ಅವರಿಂದ –ಇಂದ –ತೃತೀಯ ವಿಭಕ್ತಿ ಪ್ರತ್ಯಯ
4. ಪುಸ್ತಕದ – ಅ – ಷಷ್ಠೀ ವಿಭಕ್ತಿ ಪ್ರತ್ಯಯ

**ಉ) ಕೆಳಗಿನ ಪದಗಳಿಗೆ ವಿರುದ್ಧಾರ್ಥ ಬರೆಯಿರಿ.**

ನಗು x ಅಲು, ಮೊದಲು x ಕೊನೆ, ಪಟ್ಟಣ x ಹಳ್ಳಿ.

## 6. ಹೊನ್ನೆಯ ಮರದ ನೆರಳು – ಜನಪದ ಸಾಹಿತ್ಯ

**ಕೃತಿಕಾರರ ಪರಿಚಯ:**

* 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್' ಎಂಬ ಕವಿರಾಜಮಾರ್ಗಕಾರನ ಮಾತಿನಂತೆ ನಮ್ಮ ಪೂರ್ವಜರು ಯಾವುದೇ ಶಾಸ್ತ್ರ ಗ್ರಂಥಗಳನ್ನು ಓದದಿದ್ದರೂ ಬಲು ಸೊಗಸಾದ ಕಾವ್ಯಗಳನ್ನು ಬರೆಯಬಲ್ಲ ಕಾವ್ಯ ಕೌಶಲ್ಯ ಅವರಲ್ಲಿತ್ತು. ಹಾಗೆ ಬರೆಯಲ್ಪಟ್ಟ ಸಾಹಿತ್ಯವೇ ಜನಪದ ಸಾಹಿತ್ಯ. ಜನರ ಬಾಯಿಯಿಂದ ಬಾಯಿಗೆ ಹರಿದು ಬಂದಿರುವ ಮೌಖಿಕ ಸಾಹಿತ್ಯ ಪರಂಪರೆಯೇ ಜನಪದ ಸಾಹಿತ್ಯ.
* ಜನಪದ ಸಾಹಿತ್ಯದಲ್ಲಿ ತ್ರಿಪದಿಗಳಿಗೆ ಪ್ರಮುಖ ಸ್ಥಾನವಿದ್ದು, ಪ್ರತಿ ತ್ರಿಪದಿಗಳು ಮುಕ್ತಕಗಳಂತೆ ಬಿಡಿ ಪದ್ಯಗಳಾಗಿವೆ. ತ್ರಿಪದಿ ದೇಸಿ ಛಂದಸ್ಸು.
* 'ಹೊನ್ನೆಯ ಮರದ ನೆರಳು' ಭಾಗದಲ್ಲಿನ ತ್ರಿಪದಿಗಳನ್ನು ದೇ.ಜವರೇಗೌಡರವರು ಸಂಪಾದಿಸಿರುವ **'ಜನಪದ ಗೀತಾಂಜಲಿ'** ಎಂಬ ಜಾನಪದ ಗೀತೆಗಳ ಸಂಕಲನದಿಂದ ಆರಿಸಲಾಗಿದೆ.

## ಅಭ್ಯಾಸ

**1. ಪದಗಳ ಅರ್ಥ :**

**ಇಂಗೋಗ್ಲಿ** – ಕಡಿಮೆಯಾಗಲಿ; ಬತ್ತಿಹೋಗಲಿ.
**ಜಪ** – ಮಂತ್ರ ಪಠಣ; ಪ್ರಾರ್ಥನೆ.
**ಮಾರುದ್ದ** – ಎರಡು ಕೈಗಳನ್ನು ಚಾಚಿದ ಅಳತೆ.
**ಮೊಳ** – ಮೊಣಕೈಯಿಂದ ಹಸ್ತದ ತುದಿಯಷ್ಟು ದೂರ; ಎರಡು ಗೇಣು.
**ತವರು** – ಹುಟ್ಟಿದ ಮನೆ
**ತಿಟ್ಟು** – ದಿಬ್ಬ
**ಪಕ್ಕಿ** – ಹಕ್ಕಿ; ಪಕ್ಷಿ.
**ತೌರ್ಬಣ್ಣ** – ತವರಿನವರು ನೀಡಿದ ಸೀರೆ.

**2. ಪ್ರಶ್ನೆಗಳು :**

**ಅ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಬಡವನ ಮನೆಗೆ ಸಿರಿವಂತಿಕೆ ಯಾವಾಗ ಬರುತ್ತದೆ?
ಭೂಮಿಯಲ್ಲಿ ಬೆಳೆ ಸೊಂಪಾಗಿ ಮಾರುದ್ದ ಬೆಳೆದು, ಮೊಳದುದ್ದ ತೆನೆಯಾಗಿ ನಿಂತಾಗ ಬಡವನ ಮನೆಗೆ ಸಿರಿವಂತಿಕೆ ಬರುತ್ತದೆ.
2. ಚಿಕ್ಯಾಗ ಚೆಲುವ ಯಾರು?
ಚಿಕ್ಯಾಗ ಚೆಲುವ  ಚಂದ್ರ
3. ತಾಯಿ ಇಲ್ಲದ ತವರಿಗೆ ಹೋಗುವುದನ್ನು ಜನಪದರು ಯಾವುದಕ್ಕೆ ಹೋಲಿಸಿದ್ದಾರೆ?
ತಾಯಿ ಇಲ್ಲದ ತವರಿಗೆ ಹೋಗುವುದನ್ನು ಜನಪದರು ಬಾಯಾರಿದ ಕರುವೊಂದು ನೀರಿಲ್ಲದ ಕೆರೆಗೆ ಬಂದು ನಿರಾಸೆಯಿಂದ ಹಿಂದಿರುಗುವುದಕ್ಕೆ ಹೋಲಿಸಿದ್ದಾರೆ.
4. ಮಕ್ಕಳಾಟ ಸನ್ಯಾಸಿಯ ಜಪವನ್ನು ಏಕೆ ಮರೆಸುತ್ತದೆ?
ಮಕ್ಕಳ ಬಾಲ್ಯದ ಆಟಗಳನ್ನು ನೋಡಿದರೆ, ಸಂಸಾರದ ಬಂಧನವನ್ನು ತ್ಯಜಿಸಿದ ಸನ್ಯಾಸಿಗೂ ಸಹ ಸಂಸಾರದ ಮೇಲೆ ವ್ಯಾಮೋಹ  ಉಂಟಾಗಿ ಸನ್ಯಾಸಿಯ ಜಪವನ್ನು ಮರೆಸುತ್ತದೆ.

**ಆ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

1. ಜನಪದರು ಭೂಮಿ ತಾಯಿಯನ್ನು ಏನೆಂದು ಬೇಡಿಕೊಳ್ಳುತ್ತಾರೆ?
ಭೂಮಿಯಲ್ಲಿ ಬೆಳೆ ಸೊಂಪಾಗಿ ಮಾರುದ್ದ ಬೆಳೆದು, ಮೊಳದುದ್ದ ತೆನೆಯಾಗಿ ನಿಲ್ಲಲಿ. ಈ ಬೆಳೆಯಿಂದ ಬಡವನ ಮನೆಗೆ ಸಿರಿ ಸಂಪತ್ತು ಬರಲಿ ಹಾಗೂ ಭೂಮಿತಾಯಿ ತನ್ನ ಮಕ್ಕಳ ಹಸಿವನ್ನು ಇಂಗಿಸಲಿ ಎಂದು ಜನಪದರು ಭೂಮಿತಾಯಿಯನ್ನು ಬೇಡಿಕೊಳ್ಳುತ್ತಾರೆ.
2. ಜನಪದರು ಪ್ರಕೃತಿಯನ್ನು ಹೇಗೆ ವರ್ಣಿಸಿದ್ದಾರೆ?
ಭೂಮಿಯಲ್ಲಿ ಹಸಿರಿನಿಂದ ಕೂಡಿದ ಗಿಡ, ಬಳ್ಳಿಗಳನ್ನು ನೋಡಲು ಬಲು ಚೆಂದ. ಗಿಡ–ಮರಗಳಲ್ಲಿ ಮಾವಿನ ಮರದ ಚೆಲುವೇ ಸೊಗಸು. ಹಕ್ಕಿ–ಪಕ್ಷಿಗಳಲ್ಲಿ ಗಿಳಿಯೇ ಬಲು ಸುಂದರ. ಹಾಗೆಯೇ ಆಕಾಶದಲ್ಲಿ ಎಣಿಸಲಾಗದಷ್ಟು ನಕ್ಷತ್ರಗಳಿದ್ದರೂ, ಚಂದ್ರನೇ ಸೊಗಸೆಂದು ಜನಪದರು ಪ್ರಕೃತಿಯನ್ನು ವರ್ಣಿಸಿದ್ದಾರೆ.
3. ತಾಯಿಲ್ಲದ ತವರನ್ನು ಜನಪದರು ಹೇಗೆ ವರ್ಣಿಸಿದ್ದಾರೆ?
ತಾಯಿಯಿಲ್ಲದ ತವರು ನೀರಿಲ್ಲದ ಕೆರೆ ಇದ್ದಂತೆ. ತಾಯಿಯಿಲ್ಲದ ತವರಿಗೆ ಹೋಗುವುದನ್ನು ಜನಪದರು ಬಾಯಾರಿದ ಕರುವೊಂದು ನೀರು ಇಲ್ಲದ ಕೆರೆಗೆ ಬಂದು ನಿರಾಸೆಯಿಂದ ಹಿಂದಿರುಗಿ ಹೋಗುವುದಕ್ಕೆ ಹೋಲಿಸಿದ್ದಾರೆ. ನೋವು, ಯಾತನೆ ಮುಂತಾದವುಗಳು ತಾಯಿಯಿಲ್ಲದ ತವರಿನಿಂದ ಉಂಟಾಗುತ್ತವೆ ಎಂದು ಜನಪದರು ತಾಯಿಲ್ಲದ ತವರನ್ನು ವರ್ಣಿಸಿದ್ದಾರೆ.
4. ಹೆಣ್ಣು ಮಗಳು ಗಂಡನ ಮನೆಗೆ ಹೇಗೆ ಹೊರಡುತ್ತಾಳೆ?
ಬಾಣಂತನಕ್ಕಾಗಿ ತವರು ಮನೆಗೆ ಬಂದಿದ್ದ ಹೆಣ್ಣುಮಗಳು ಬಾಣಂತನ ಮುಗಿಸಿಕೊಂಡು ತನ್ನ ಗಂಡನ ಮನೆಗೆ ಹೊರಡುವಾಗ ತಲೆಯ ಮೇಲೆ ತೊಟ್ಟಿಲನ್ನು ಹೊತ್ತುಕೊಡು. ತವರು ಮನೆಯ ಸೀರೆಯುಟ್ಟು, ಅಪ್ಪ ಕೊಟ್ಟ ಎಮ್ಮೆಯನ್ನು ಹೊಡೆದುಕೊಂಡು.ದಿಬ್ಬದ ದಾರಿಯಲ್ಲಿ ಸಾಗುತ್ತಾ ತವರಿನ ಕಡೆಗೆ ಮತ್ತೆ ಮತ್ತೆ ನೋಡುತ್ತಾ ಗಂಡನ ಮನೆಗೆ ಹೋಗುತ್ತಾಳೆ.
5. ಮಕ್ಕಳಾಟದ ಮಹಿಮೆಯನ್ನು ಜನಪದರು ವರ್ಣಿಸಿರುವ ರೀತಿಯನ್ನು ತಿಳಿಸಿ.
ಮಕ್ಕಳು ಹೊನ್ನೆಯ ಮರದ ನೆರಳಲ್ಲಿ ಆಡುವಾಗ, ಮಕ್ಕಳ ಆಟವನ್ನು ನೋಡಿದ ಸನ್ಯಾಸಿಯು ತಾನು ಮಾಡುವ ಜಪವನ್ನು ಮರೆತಿದ್ದಾನೆ. ಏಕೆಂದರೆ ಮಕ್ಕಳ ಬಾಲ್ಯದ ಆಟಗಳನ್ನು  ನೋಡಿದರೆ ಸಂಸಾರದ ಬಂಧನವನ್ನು ತ್ಯಜಿಸಿದ ಸನ್ಯಾಸಿಗೂ ಸಹ ಸಂಸಾರದ ವ್ಯಾಮೋಹ ಮನದಲ್ಲಿ ಮೂಡುತ್ತದೆ ಎಂದು ಜನಪದರು ಮಕ್ಕಳಾಟದ ಮಹಿಮೆಯನ್ನು ವರ್ಣಿಸಿದ್ದಾರೆ.

**ಇ) ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**

1. 'ಹೊನ್ನೆಯ ಮರದ ನೆರಳು' ಜನಪದ ಗೀತೆಯಲ್ಲಿ ತವರು ಹಾಗೂ ಮಕ್ಕಳ ಬಗೆಗೆ ಜನಪದರ ಭಾವನೆಗಳು ಯಾವ ರೀತಿ ವ್ಯಕ್ತವಾಗಿವೆ?

ಜನಪದರು ತಾಯಿಯಿಲ್ಲದ ತವರಿಗೆ ಹೆಣ್ಣು ಮಗಳು ಹೋಗಬಾರದೆಂದು ಹೇಳುತ್ತಾರೆ. ಏಕೆಂದರೆ, ತಾಯಿಯಿಲ್ಲದ ತವರು ನೀರಿಲ್ಲದ ಕೆರೆ ಇದ್ದಂತೆ. ತಾಯಿಯಿಲ್ಲದ ತವರಿಗೆ ಹೋಗುವುದನ್ನು ಜನಪದರು ಬಾಯಾರಿದ ಕರುವೊಂದು ನೀರು ಇಲ್ಲದ ಕೆರೆಗೆ ಬಂದು ನಿರಾಸೆಯಿಂದ ಹಿಂದಿರುಗಿ ಹೋಗುವುದಕ್ಕೆ ಹೋಲಿಸಿದ್ದಾರೆ. ನೋವು, ಯಾತನೆ ಮುಂತಾದವುಗಳು ತಾಯಿಯಿಲ್ಲದ ತವರಿನಿಂದ ಉಂಟಾಗುತ್ತವೆ ಎಂದು ಜನಪದರು ತಾಯಿಲ್ಲದ ತವರನ್ನು ವರ್ಣಿಸಿದ್ದಾರೆ.

ಮಕ್ಕಳು ಹೊನ್ನೆಯ ಮರದ ನೆರಳಲ್ಲಿ ಆಡುವಾಗ, ಮಕ್ಕಳ ಆಟವನ್ನು ನೋಡಿದ ಸನ್ಯಾಸಿಯು ತಾನು ಮಾಡುವ ಜಪವನ್ನು ಮರೆತಿದ್ದಾನೆ. ಏಕೆಂದರೆ ಮಕ್ಕಳ ಬಾಲ್ಯದ ಆಟಗಳನ್ನು ನೋಡಿದರೆ ಸಂಸಾರದ ಬಂಧನವನ್ನು ತ್ಯಜಿಸಿದ ಸನ್ಯಾಸಿಗೂ ಸಹ ಸಂಸಾರದ ವ್ಯಾಮೋಹ ಮನದಲ್ಲಿ ಮೂಡುತ್ತದೆ ಎಂದು ಜನಪದರು ಮಕ್ಕಳಾಟದ ಮಹಿಮೆಯನ್ನು ವರ್ಣಿಸಿದ್ದಾರೆ.

**ಈ) ಸಂದರ್ಭದೊಡನೆ ವಿವರಿಸಿ.**

1. ಬಡವನ ಮನೆಗೆ ಸಿರಿ ಬರಲಿ

ಈ ವಾಕ್ಯವನ್ನು ದೇ.ಜವರೇಗೌಡರವರು ಸಂಪಾದಿಸಿರುವ **'ಜನಪದ ಗೀತಾಂಜಲಿ'** ಎಂಬ ಕೃತಿಯಿಂದ ಆಯ್ದ **ಹೊನ್ನೆಯ ಮರದ ನೆರಳು** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಜನಪದರು ಹೇಳಿದ್ದಾರೆ. ಭೂಮಿಯಲ್ಲಿ ಬೆಳೆ ಸೊಂಪಾಗಿ ಮಾರುದ್ದ ಬೆಳೆದು, ಮೊಳದುದ್ದ ತೆನೆಯಾಗಿ ನಿಲ್ಲಲಿ. ಈ ಬೆಳೆಯಿಂದ ಬಡವನ ಮನೆಗೆ ಸಿರಿ ಸಂಪತ್ತು ಬರಲಿ ಹಾಗೂ ಭೂಮಿತಾಯಿ ತನ್ನ ಮಕ್ಕಳ ಹಸಿವನ್ನು ಇಂಗಿಸಲಿ ಎಂದು ಜನಪದರು ಭೂಮಿತಾಯಿಯನ್ನು ಬೇಡಿಕೊಳ್ಳುತ್ತಾರೆ.

2. ತಾಯಿಲ್ದ ತವರೀಗಿ ಹೋಗದಿರು

ಈ ವಾಕ್ಯವನ್ನು ದೇ.ಜವರೇಗೌಡರವರು ಸಂಪಾದಿಸಿರುವ **'ಜನಪದ ಗೀತಾಂಜಲಿ'** ಎಂಬ ಕೃತಿಯಿಂದ ಆಯ್ದ **ಹೊನ್ನೆಯ ಮರದ ನೆರಳು** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಜನಪದರು ಹೇಳಿದ್ದಾರೆ. ತಾಯಿಯಿಲ್ಲದ ತವರು ನೀರಿಲ್ಲದ ಕೆರೆ ಇದ್ದಂತೆ. ನೋವು, ಯಾತನೆ ಮುಂತಾದವುಗಳು ತಾಯಿಯಿಲ್ಲದ ತವರಿನಿಂದ ಉಂಟಾಗುತ್ತವೆ ಎಂದು ಹೇಳುವಾಗ ಈ ಮೇಲಿನ ಮಾತು ವ್ಯಕ್ತವಾಗಿದೆ.

3. ತಿಟ್ಹತ್ತಿ ತಿರುಗಿ ನೋಡ್ಯಾಳ

ಈ ವಾಕ್ಯವನ್ನು ದೇ.ಜವರೇಗೌಡರವರು ಸಂಪಾದಿಸಿರುವ **'ಜನಪದ ಗೀತಾಂಜಲಿ'** ಎಂಬ ಕೃತಿಯಿಂದ ಆಯ್ದ **ಹೊನ್ನೆಯ ಮರದ ನೆರಳು** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಜನಪದರು ಹೇಳಿದ್ದಾರೆ. ಬಾಣಂತನಕ್ಕಾಗಿ ತವರು ಮನೆಗೆ ಬಂದಿದ್ದ ಹೆಣ್ಣುಮಗಳು ಬಾಣಂತನ ಮುಗಿಸಿಕೊಂಡು ತನ್ನ ಗಂಡನ ಮನೆಗೆ ಹೊರಡುವಾಗ ತಲೆಯ ಮೇಲೆ ತೊಟ್ಟಿಲನ್ನು ಹೊತ್ತುಕೊಡು. ತವರು ಮನೆಯ ಸೀರೆಯುಟ್ಟು, ಅಪ್ಪ ಕೊಟ್ಟ ಎಮ್ಮೆಯನ್ನು ಹೊಡೆದುಕೊಂಡು ಹೋಗುವಾಗ ಈ ಮಾತು ಬಂದಿದೆ.

4. ಸನ್ನೇಸಿ ಜಪವ ಮರೆತಾನು

ಈ ವಾಕ್ಯವನ್ನು ದೇ.ಜವರೇಗೌಡರವರು ಸಂಪಾದಿಸಿರುವ **'ಜನಪದ ಗೀತಾಂಜಲಿ'** ಎಂಬ ಕೃತಿಯಿಂದ ಆಯ್ದ **ಹೊನ್ನೆಯ ಮರದ ನೆರಳು** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಜನಪದರು ಹೇಳಿದ್ದಾರೆ. ಮಕ್ಕಳ ಬಾಲ್ಯದ ಆಟಗಳನ್ನು ನೋಡಿದರೆ ಸಂಸಾರದ ಬಂಧನವನ್ನು ತ್ಯಜಿಸಿದ ಸನ್ಯಾಸಿಗೂ ಸಹ ಸಂಸಾರದ ವ್ಯಾಮೋಹ ಮನದಲ್ಲಿ ಮೂಡುತ್ತದೆ ಎಂದು ಜನಪದರು ಮಕ್ಕಳಾಟದ ಮಹಿಮೆಯನ್ನು ವರ್ಣಿಸುವಾಗ ಈ ಮೇಲಿನ ಮಾತು ಬಂದಿದೆ.

**3. ಭಾಷಾಭ್ಯಾಸ :**

**ಅ) ಕೆಳಗಿನ ಪದಗಳಿಗೆ ವಿರುದ್ಧಾರ್ಥ ಬರೆಯಿರಿ.**

ಬಡವ x ಶ್ರೀಮಂತ, ದುಃಖ x ಸುಖ, ಚೆಲುವ x ಕುರೂಪ, ನೆಲ x ಮುಗಿಲು, ನೆರಳು x ಬಿಸಿಲು.

**ಆ) 'ತನ' ಹಾಗೂ 'ವಂತ' ಪ್ರತ್ಯಯಗಳನ್ನು ಬಳಸಿ ಮಾದರಿಯಂತೆ ತಲಾ ಐದು ಪದಗಳನ್ನು ಬರೆಯಿರಿ.**

| | |
|---|---|
| **ಮಾದರಿ :** ಸಿರಿ + ತನ = ಸಿರಿತನ | ಸಿರಿ + ವಂತ = ಸಿರಿವಂತ |
| ಬಡ + ತನ = ಬಡತನ | ಹಣ + ವಂತ = ಹಣವಂತ |
| ಹಿರಿ + ತನ = ಹಿರಿತನ | ಗುಣ + ವಂತ = ಗುಣವಂತ |
| ಜಾಣ + ತನ = ಜಾಣತನ | ಧನ + ವಂತ = ಧನವಂತ |
| ಒಕ್ಕಲು+ ತನ = ಒಕ್ಕಲುತನ | ಬುದ್ಧಿ + ವಂತ = ಬುದ್ಧಿವಂತ |
| ಗೆಳೆ + ತನ = ಗೆಳೆತನ | ಐಶ್ವರ್ಯ + ವಂತ = ಐಶ್ವರ್ಯವಂತ |

**ಇ) ಆಡುನುಡಿ ಮತ್ತು ಗ್ರಾಂಥಿಕ ರೂಪ ಇವುಗಳ ನಡುವಿನ ವ್ಯತ್ಯಾಸ ತಿಳಿಯಿರಿ.**

**ಉದಾಹರಣೆಗಳು:**

| **ಆಡುನುಡಿ – ಗ್ರಾಂಥಿಕ ರೂಪ** | **ಆಡುನುಡಿ – ಗ್ರಾಂಥಿಕ ರೂಪ** |
|---|---|
| ಮ್ಯಾಲೆ – ಮೇಲೆ | ತುಂಬೈತಿ – ತುಂಬಿದೆ |
| ನೀರಿಲ್ದ – ನೀರಿಲ್ಲದ | ತಲೇಲಿ – ತಲೆಯಲ್ಲಿ |
| ಕಂದವ್ನ – ಕಂದವ್ವನ | ಪಕ್ಕ್ಯಾಗ – ಪಕ್ಕೆಯಲ್ಲಿ, ಪಕ್ಕೆಗಳಲ್ಲಿ |
| ತಾಯಿಲ್ದ – ತಾಯಿಯಿಲ್ಲದ | ಐತಿ (ಐತೆ) –ಇದೆ |
| ತಿಟ್ಹತ್ತಿ – ತಿಟ್ಟು ಹತ್ತಿ | ಸನ್ನೇಸಿ – ಸನ್ಯಾಸಿ |
| ಚಿಕ್ಕ್ಯಾಗ – ಚಿಕ್ಕೆಯಲ್ಲಿ, ಚಿಕ್ಕೆಗಳಲ್ಲಿ | ಬಿಡುತೀನಿ – ಬಿಡುತ್ತೇನೆ |
| ಗೂಡಿನ್ಯಾಗ – ಗೂಡಿನಲ್ಲಿ | ಮ್ಯಾಲಿನ – ಮೇಲಿನ |
| ಬ್ಯಾಡ – ಬೇಡ | ತಕ್ಕೊಂಡು – ತೆಗೆದುಕೊಂಡು |
| ಏಸೊಂದು – ಎಷ್ಟೊಂದು | ಆಯ್ತು – ಆಯಿತು |
| ಬರ್‍ತಾನೆ – ಬರುತ್ತಾನೆ | ಆಡ್ತಾ – ಆಡುತ್ತಾ |
| ಕೂತ್ಕೊ – ಕುಳಿತುಕೊ | ಕುಂದ್ರು – ಕುಳಿತುಕೊ |
| ನೋಡ್ಕೊಂಡು – ನೋಡಿಕೊಂಡು | ಕೂಡು – ಕುಳಿತುಕೊ |

## 7. ವಚನಗಳು – ಜೇಡರ ದಾಸಿಮಯ್ಯ

**ಕೃತಿಕಾರರ ಪರಿಚಯ :**

- **ಜೇಡರ ದಾಸಿಮಯ್ಯ** ಆದ್ಯ ವಚನಕಾರರು. ಇವರು ಕ್ರಿ.ಶ. 1040 ರಲ್ಲಿ ಯಾದಗಿರಿ ಸಮೀಪದ ಮುದೇನೂರು ಎಂಬಲ್ಲಿ ಜನಿಸಿದರು.
- ಇವರು ವಚನಗಳನ್ನು ರಚಿಸಿದ್ದಾರೆ. ಇವರ ವಚನಗಳ ಅಂಕಿತ 'ರಾಮನಾಥ'
- ಪ್ರಸ್ತುತ ವಚನಗಳನ್ನು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು ಇವರು ಪ್ರಕಟಿಸಿರುವ 'ಸಂಕೀರ್ಣ ವಚನ ಸಂಪುಟ–2' ಎಂಬ ಕೃತಿಯಿಂದ ಆರಿಸಿದೆ.

**ಅಭ್ಯಾಸ**

**I. ಪದಗಳ ಅರ್ಥ :**

| | |
|---|---|
| **ಅಗ್ನಿ** – ಬೆಂಕಿ | **ಅರಘಳಿಗೆ** – ಸ್ವಲ್ಪ ಹೊತ್ತು |
| **ಒಡಲು** – ಶರೀರ; ದೇಹ; ಕಾಯ. | **ಒಲ್ಲೆ** – ಬೇಡ |
| **ಕಂಪು** – ಸುವಾಸನೆ | **ಕಡೆಗೀಲು** – ಕಡಾಣಿ; ಕಠಾಣಿ. |
| **ಕರಿ** – ಆನೆ | **ಗಡಣ** – ಸಮೂಹ; ಗುಂಪು. |
| **ದರ್ಪ** – ಅಹಂಕಾರ; ಹಮ್ಮು. | **ನಚ್ಚು** – ನಂಬು |
| **ಬೆರಗು** – ಆಶ್ಚರ್ಯ | **ಬೆರಸು** – ಒಂದು ಗೂಡಿಸು |
| **ಮಂದಾಗ್ನಿ** – ಹೆಚ್ಚು ಉರಿಯಿಲ್ಲದ ಬೆಂಕಿ. | **ಮಾಬುದೇ** – ಬಿಡುವುದೇ |
| **ಮೃಡ** – ಶಿವ | **ಸಿರಿ** – ಐಶ್ವರ್ಯ; ಸಂಪತ್ತು. |
| **ಸೊಳ್ನುಡಿ** – ಒಳ್ಳೆಯ ಮಾತು; ತಿರುಳುಳ್ಳ ನುಡಿ. | **ಹೊಡೆಗೆಡೆ** – ಮಗುಚಿ ಬೀಳು |

**2. ಪ್ರಶ್ನೆಗಳು :**

**ಅ) ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಕರಿಯನಿತ್ತಡೆ ಒಲ್ಲೆ, **ಸಿರಿಯನಿತ್ತಡೆ** ಒಲ್ಲೆ.
2. ಮೃಡಭಕ್ತರ **ನುಡಿಗಡಣವೆ** ಕಡೆಗೀಲು ಕಾಣಾ! ರಾಮನಾಥ.
3. ನೀ **ಬೆರೆಸುವ** ಭೇದಕ್ಕೆ ಬೆರಗಾದೆನಯ್ಯ! ರಾಮನಾಥ.
4. ಬರುಸರಗನ ಭಕ್ತಿ **ದಿಟವೆಂದು** ನಚ್ಚಲು ಬೇಡ.

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

1. ಜೇಡರ ದಾಸಿಮಯ್ಯ ಅವರ ಅಂಕಿತನಾಮವೇನು?

ಜೇಡರ ದಾಸಿಮಯ್ಯ ಅವರ ಅಂಕಿತನಾಮ ರಾಮನಾಥ.
2. ಬಂಡಿಗೆ ಆಧಾರ ಯಾವುದು?
ಬಂಡಿಗೆ ಆಧಾರ ಕಡೆಗೀಲು.
3. ಒಡಲೆಂಬ ಬಂಡಿಗೆ ಯಾವುದು ಕಡೆಗೀಲು?
ಒಡಲೆಂಬ ಬಂಡಿಗೆ ಮೃಡಭಕ್ತರ ನುಡಿಗಡಣವೆ ಕಡೆಗೀಲು.
4. ಯಾರ ಭಕ್ತಿಯನ್ನು ನಿಜವೆಂದು ನಂಬಬಾರದು?
ಬರುಸಠಗನ ಭಕ್ತಿಯನ್ನು ನಿಜವೆಂದು ನಂಬಬಾರದು.

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**
1. ಭಗವಂತನು ಮಾನವನ ಶರೀರದೊಳಗೆ ಆತ್ಮವನ್ನು ಯಾವ ರೀತಿ ಬೆರಸಿದ್ದಾನೆ?
ಭಗವಂತನು ಮರದಲ್ಲಿ ಮಂದಾಗ್ನಿಯನ್ನು ಉರಿಯದಂತಿರಿಸಿದ್ದಾನೆ.ಅದೇ ರೀತಿ ನೊರೆ ಹಾಲಿನೊಳಗೆ ತುಪ್ಪವಿದ್ದರೂ ಅದರ ಕಂಪು ಇಲ್ಲದಂತೆ ಇರಿಸಿದ್ದಾನೆ. ನಮ್ಮ ಶರೀರದಲ್ಲಿ ಆತ್ಮ ನೆಲೆಸಿದ್ದರೂ ಅದು ಕಾಣದಂತೆ ಇರಿಸಿದ್ದಾನೆ. ದೇವರು ಸೃಷ್ಟಿಸಿರುವ ಎಲ್ಲಾ ವೈಚಿತ್ರ್ಯಗಳನ್ನು ಕಂಡು ದಾಸಿಮಯ್ಯ ಅವರು ಬೆರಗಾಗಿದ್ದಾರೆ.
2. ಕಡುದರ್ಪವೇರಿದ ಒಡಲು ಎಂದರೇನು? ಅದನ್ನು ಯಾವುದಕ್ಕೆ ಹೋಲಿಸಲಾಗಿದೆ?
ಕಡುದರ್ಪವೇರಿದ ಒಡಲು ಎಂದರೆ ಅಹಂಕಾರದಿಂದ ಕೂಡಿದ ದೇಹ ಎಂದರ್ಥ. ಅಂತೆಯೇ ಕಡುದರ್ಪವೇರಿದ ನಮ್ಮ ಶರೀರವೆಂಬ ಬಂಡಿಗೆ ಶಿವಭಕ್ತರ ಹಿತನುಡಿಗಳೇ ಕಡೆಗೀಲು ಇದ್ದಂತೆ. ಇಂತಹ ಕಡುದರ್ಪವೇರಿದ ಒಡಲನ್ನು ಕಡೆಗೀಲಿಗೆ ಹೋಲಿಸಲಾಗಿದೆ. ನಮ್ಮ ಶರೀರವೆಂಬ ಬಂಡಿ ಆಚೆ ಹೋಗದಂತೆ, ದಾರಿತಪ್ಪದಂತೆ ಕಡೆಗೀಲು ಹಿಡಿದಿಡುತ್ತದೆ ಎಂದು ದಾಸಿಮಯ್ಯನವರು ಹೇಳುತ್ತಾರೆ.
3. ಜೇಡರ ದಾಸಿಮಯ್ಯನು ಭಗವಂತನ ಯಾವ ಭೇದಕ್ಕೆ ಬೆರಗಾಗಿದ್ದಾನೆ?
ಮರದಲ್ಲಿ ಮಂದಾಗ್ನಿಯನ್ನು ಇರಿಸಿದ್ದರೂ ಅದು ಉರಿಯದಂತೆ ಇಟ್ಟಿರುವೆ. ಅದೇ ರೀತಿ ನೊರೆ ಹಾಲಿನೊಳಗೆ ತುಪ್ಪವಿದ್ದರೂ ಅದರ ಕಂಪು ಇಲ್ಲದಂತೆ ಇಟ್ಟಿರುವೆ. ನಮ್ಮ ಶರೀರದಲ್ಲಿ ಆತ್ಮ ನೆಲೆಸಿದ್ದರೂ ಅದು ಕಾಣದಂತೆ ಇರಿಟ್ಟಿರುವೆ. ನೀ ಬೆರೆಸುವ ಭೇದಕ್ಕೆ ಬೆರಗಾದೆನಯ್ಯ ರಾಮನಾಥ ಎಂದು ದಾಸಿಮಯ್ಯನವರು ಹೇಳುತ್ತಾರೆ.

**ಈ) ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**
1. ಜೇಡರ ದಾಸಿಮಯ್ಯನವರು ಮೊದಲ ಎರಡು ವಚನಗಳಲ್ಲಿ ಶರಣರ ಸೂಳ್ನುಡಿಯ ಮಹತ್ವವನ್ನು ಯಾವರೀತಿ ವರ್ಣಿಸಿದ್ದಾರೆ?
ಆನೆಯನ್ನು ಕೊಟ್ಟರೂ ಬೇಡ, ಸಿರಿ ಸಂಪತ್ತುಗಳನ್ನು ನೀಡಿದರೂ ಬೇಡ, ವಿಸ್ತಾರವಾದ ರಾಜ್ಯವನ್ನು ನನಗೆ ನೀಡಿದರೂ ಅವು ಯಾವುದೂ ಬೇಡವೆಂದು ದಾಸಿಮಯ್ಯನವರು ನಿರಾಕರಿಸುತ್ತಾರೆ. ಒಂದು ಬಾರಿ ನಿಮ್ಮ ಶಿವಶರಣರ ಅನುಭವದ ಮಾತನ್ನು ಒಂದರ್ಧ ಘಳಿಗೆ ಕೇಳುವಂತೆ ಮಾಡಿದರೆ ಸಾಕು. ಶಿವನೇ ಸಿಕ್ಕಂತೆ ಸಂತೋಷ ಪಡುತ್ತೇನೆ.

ಬಂಡಿಯ ಚಕ್ರಕ್ಕೆ ಕಡಾಣಿಯೇ ಆಧಾರ. ಅಂತೆಯೇ ಕಡುದರ್ಪವೇರಿದ ನಮ್ಮ ಶರೀರವೇಂಬ ಬಂಡಿಗೆ ಶಿವಭಕ್ತರ ಹಿತನುಡಿಗಳೇ ಕಡೆಗೀಲು ಇದ್ದಂತೆ. ನಮ್ಮ ಶರೀರವೆಂಬ ಬಂಡಿ ಆಚೆ ಹೋಗದಂತೆ, ದಾರಿ ತಪ್ಪದಂತೆ, ಹಿಡಿದಿಡುತ್ತದೆ ಎಂದು ದಾಸಿಮಯ್ಯನವರು ಹೇಳುತ್ತಾರೆ.
2. ಜೇಡರ ದಾಸಿಮಯ್ಯ ಡಾಂಭಿಕ ಭಕ್ತಿಯನ್ನು ಯಾವ ರೀತಿ ಖಂಡಿಸಿದ್ದಾರೆ?
ಡಾಂಭಿಕನ ತೋರಿಕೆಯ ಭಕ್ತಿಯನ್ನು ನಿಜವೇಂದು ನಂಬಬಾರದು. ಮರದಲ್ಲಿ ಭಕ್ತಿ, ದಯೆ, ಶಾಂತಿ, ಅಹಿಂಸೆಯ ವಾತಾವರಣದಲ್ಲಿಯೇ ಬೆಳೆದ ಬೆಕ್ಕು ಇಲಿಯನ್ನು ಕಂಡ ಕೂಡಲೇ ಹಾರಿ ನೆಗೆದು ಅದನ್ನು ಹಿಡಿಯಲು ಪ್ರಯತ್ನಿಸುವಂತೆ, ಡಾಂಭಿಕ ಭಕ್ತಿಯೂ ಸಹ ಸಮಯ ಬಂದಾಗ ತನ್ನ ನಿಜ ಸ್ವರೂಪವನ್ನು ತೋರುತ್ತದೆ. ಆದುದರಿಂಧ ಇಂತವರ ಕುರಿತು ಎಚ್ಚರದಿಂದ ಇರಬೇಕೆಂದು ದಾಸಿಮಯ್ಯನವರು ಹೇಳುತ್ತಾರೆ.
3. 12 ನೇ ಶತಮಾನದ ವಚನ ಸಾಹಿತ್ಯದ ವೈಶಿಷ್ಟ್ಯತೆ ಏನು?
ಹನ್ನೆರಡನೆಯ ಶತಮಾನ ಕರ್ನಾಟಕದ ಇತಿಹಾಸದಲ್ಲಿ ಒಂದು ಪರ್ವಕಾಲ. ವಚನ ಸಾಹಿತ್ಯವು ಸಾಮಾಜಿಕ, ಧಾರ್ಮಿಕ, ನೈತಿಕ, ಸಾಹಿತ್ಯಿಕ ಪರಿವರ್ತನೆಗೆ ಪ್ರಯತ್ನಿಸಿದ ಕಾಲಘಟ್ಟವಾಗಿತ್ತು. ಮಾನವೀಯತೆ, ಜಾತಿ ಭೇದಗಳನ್ನು ಮೀರಿ ದೀನದಲಿತರ ಸ್ವಾತಂತ್ರ್ಯ ಮತ್ತು ಹಕ್ಕಿಗಾಗಿ ಹೋರಾಟದ ಕಾಲವಾಗಿತ್ತು. ಲಿಂಗ ತಾರತಮ್ಯವನ್ನು ಮೀರಿ ಸ್ತ್ರೀ ಹಾಗೂ ಪುರುಷರಿಬ್ಬರಿಗೂ ಸಮಾನ ಅಧಿಕಾರ, ಅವಕಾಶಗಳನ್ನು ನೀಡಲಾಯಿತು. ಮಾನವೀಯತೆ, ಉದಾರತೆ, ಪ್ರಾಮಾಣಿಕತೆ, ವಿಶ್ವಪ್ರೇಮ, ಜಾತ್ಯಾತೀತತೆಯನ್ನು ವಚನ ಸಾಹಿತ್ಯದಲ್ಲಿ ಕಾಣಬಹುದಾಗಿದೆ. ಕಾಯಕ ನಿಷ್ಠೆ, ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ ಮೌಲ್ಯಗಳನ್ನು ವಚನ ಸಾಹಿತ್ಯವು ಸಮಾಜಕ್ಕೆ ಕೊಡುಗೆಯಾಗಿ ನೀಡಿದೆ.

**ಉ) ಸಂದರ್ಭದೊಂದಿಗೆ ಈ ವಾಕ್ಯಗಳ ಅರ್ಥವನ್ನು ಸ್ಪಷ್ಟೀಕರಿಸಿರಿ.**
1. ಮೃಡಭಕ್ತರ ನುಡಿಗಡಣವೆ ಕಡೆಗೀಲು ಕಾಣಾ ರಾಮನಾಥ.

ಈ ವಾಕ್ಯವನ್ನು **ಜೇಡರ ದಾಸಿಮಯ್ಯ** ಅವರು ಬರೆದಿರುವ 'ಸಂಕೀರ್ಣ ವಚನ ಸಂಪುಟ-2' ಎಂಬ ಕೃತಿಯಿಂದ ಆಯ್ದ **ವಚನಗಳು** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಈ ಮಾತನ್ನು ಕವಿ ಹೇಳುತ್ತಾರೆ. ಬಂಡಿಯ ಚಕ್ರಕ್ಕೆ ಕಡಾಣಿಯೇ ಆಧಾರ. ಅಂತೆಯೇ ಕಡುದರ್ಪವೇರಿದ ನಮ್ಮ ಶರೀರವೆಂಬ ಬಂಡಿಗೆ ಶಿವಭಕ್ತರ ಹಿತನುಡಿಗಳೇ ಕಡೆಗೀಲು ಇದ್ದಂತೆ. ಎಂದು ಹೇಳುವಾಗ ಈ ಮಾತು ವ್ಯಕ್ತವಾಗಿದೆ.

2. ಮಠದೊಳಗಣ ಬೆಕ್ಕು ಇಲಿಯ ಕಂಡು ಪುಟನೆಗೆದಂತಾಯಿತ್ತು.
ಈ ವಾಕ್ಯವನ್ನು **ಜೇಡರ ದಾಸಿಮಯ್ಯ** ಅವರು ಬರೆದಿರುವ 'ಸಂಕೀರ್ಣ ವಚನ ಸಂಪುಟ-2' ಎಂಬ ಕೃತಿಯಿಂದ ಆಯ್ದ **ವಚನಗಳು** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಈ ಮಾತನ್ನು ಕವಿ ಹೇಳುತ್ತಾರೆ. ಡಾಂಭಿಕನ ತೋರಿಕೆಯ ಭಕ್ತಿಯನ್ನು ನಿಜವೆಂದು ನಂಬಬಾರದು. ಡಾಂಭಿಕ ಭಕ್ತಿಯೂ ಸಹ ಸಮಯ ಬಂದಾಗ ತನ್ನ ನಿಜ ಸ್ವರೂಪವನ್ನು ತೋರುತ್ತದೆ. ಆದುದರಿಂದ ಇಂತವರ ಕುರಿತು ಎಚ್ಚರದಿಂದ ಇರಬೇಕೆಂದು ಹೇಳುವಾಗ ಈ ಮಾತು ಬಂದಿದೆ.

3. ನೊರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ.
ಈ ವಾಕ್ಯವನ್ನು **ಜೇಡರ ದಾಸಿಮಯ್ಯ** ಅವರು ಬರೆದಿರುವ 'ಸಂಕೀರ್ಣ ವಚನ ಸಂಪುಟ-2' ಎಂಬ ಕೃತಿಯಿಂದ ಆಯ್ದ **ವಚನಗಳು** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಈ ಮಾತನ್ನು ಕವಿ ಹೇಳುತ್ತಾರೆ. ಮರದಲ್ಲಿ ಮಂದಾಗ್ನಿಯನ್ನು ಇರಿಸಿದ್ದರೂ ಅದು ಉರಿಯದಂತೆ ಇಟ್ಟಿರುವೆ. ಅದೇ ರೀತಿ ನೊರೆ ಹಾಲಿನೊಳಗೆ ತುಪ್ಪವಿದ್ದರೂ ಅದರ ಕಂಪು ಇಲ್ಲದಂತೆ ಇಟ್ಟಿರುವೆ. ನಮ್ಮ ಶರೀರದಲ್ಲಿ ಆತ್ಮ ನೆಲೆಸಿದ್ದರೂ ಅದು ಕಾಣದಂತೆ ಇರಿಟ್ಟಿರುವೆ. ನೀ ಬೆರೆಸುವ ಭೇದಕ್ಕೆ ಬೆರಗಾದೆನಯ್ಯ ರಾಮನಾಥ ಎಂದು ಹೇಳುವಾಗ ಈ ಮಾತು ಬಂದಿದೆ.

**3. ಭಾಷಾಭ್ಯಾಸ :**

**ಅ) ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ.**

1. ಕರಿ, ಕರ, ಆನೆ, ಗಜ. = ಕರ
2. ದರ್ಪ, ಸೊಕ್ಕು, ಹಮ್ಮು, ವಿನಯ. = ವಿನಯ

**ಆ) ಕೆಳಗೆ ನೀಡಿರುವ ಪದಗಳಿಗೆ ವಿರುದ್ಧಾರ್ಥಕ ಬರೆಯಿರಿ.**

ಹಿರಿದು x ಕಿರಿದು, ಆಧಾರ x ನಿರಾಧಾರ, ಶಕ್ತ x ಅಶಕ್ತ, ಭಕ್ತ x ಡಾಂಭಿಕ.

**ಇ) ಕೆಳಗಿನ ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿರಿ.**

1. ಒಲ್ಲೆ : ದಾಸಿಮಯ್ಯನವರು ಸಿರಿಯನ್ನು ಕೊಟ್ಟರೂ ಒಲ್ಲೆ ಎಂದಿದ್ದಾರೆ.
2. ಆಧಾರ : ಕಡೆಗೀಲು ಬಂಡಿಗೆ ಆಧಾರವಾಗಿರುತ್ತದೆ.
3. ಇರಿಸು : ದೇವರು ಶರೀರದೊಳಗೆ ಆತ್ಮವನ್ನು ಕಾಣದಂತೆ ಇರಿಸಿದ್ದಾನೆ.
4. ಬೆರಗಾಗು : ನಮ್ಮ ಮನೆಗೆ ನೆಂಟರು ಬಂದು ನನ್ನನ್ನು ಬೆರಗಾಗುವಂತೆ ಮಾಡಿದರು.
5. ಸೂಳ್ನುಡಿ : ಶರಣರ ಸೂಳ್ನುಡಿ ಕೇಳಲು ಹಿತವಾಗಿರುತ್ತದೆ.

**ಈ) ಕೆಳಗಿನ ಪದಗಳನ್ನು ಮಾದರಿಯಂತೆ ಬಿಡಿಸಿ ಬರೆಯಿರಿ.**

**ಮಾದರಿ:** ಹಿರಿದಪ್ಪ – ಹಿರಿದು + ಅಪ್ಪ
ಸಿರಿಯನಿತ್ತಡೆ = ಸಿರಿಯನ್ನು + ಇತ್ತಡೆ
ಕಡೆಗೀಲು = ಕಡೆ + ಕೀಲು
ಮಂದಾಗ್ನಿ = ಮಂದ + ಅಗ್ನಿ

**ಉ) ಕೆಳಗಿನ ಪದಗಳಿಗೆ ತತ್ಸಮ-ತದ್ಭವಗಳನ್ನು ಬರೆಯಿರಿ.**

ಸಿರಿ – ಶ್ರೀ, ಭಕ್ತ ಬಕುತ, ಅಗ್ನಿ – ಅಗ್ಗಿ.

-

# 8. ಆಚಾರವಿಲ್ಲದ ನಾಲಗೆ – ಪುರಂದರದಾಸರು

**ಕೃತಿಕಾರರ ಪರಿಚಯ :**

* **ಪುರಂದರದಾಸರ** ಮೊದಲಿನ **ಪುರಂದರದಾಸರು** ಶ್ರೀನಿವಾಸನಾಯಕ. ಇವರು ಕ್ರಿ.ಶ. 1484 ರಿಂದ 1564 ರ ನಡುವಿನ ಕಾಲಾವಧಿಯಲ್ಲಿ ಬದುಕಿದ್ದರು. ಇವರ ಸ್ಥಳ ಪುರಂದರಗಡ.

* ಪುರಂದರದಾಸರು 'ಪುರಂದರವಿಠಲ' ಅಂಕಿತದಿಂದ ಸಾವಿರಾರು ಕೀರ್ತನೆ, ಸುಳಾದಿ, ಉಗಾಭೋಗಗಳನ್ನು ರಚಿಸಿದ್ದಾರೆ. ಇವರಿಗೆ **'ಕರ್ನಾಟಕ ಸಂಗೀತ ಪಿತಾಮಹ'** ಎಂಬ ಬಿರುದು ಇದೆ.

*ಪ್ರಸ್ತುತ ಕೀರ್ತನೆಯನ್ನು ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗವು ಪ್ರಕಟಿಸಿರುವ ಡಾ. ಟಿ.ಎನ್.ನಾಗರತ್ನ ಅವರ **'ದಾಸ ಸಾಹಿತ್ಯ ಸೌರಭ'** ಕೃತಿಯಿಂದ ಆರಿಸಿದೆ.

**ಟಿಪ್ಪಣಿಗಳು :**

**1. ಕೀರ್ತನೆ :** ಹರಿ ಮಹಿಮೆಯನ್ನು ಕೀರ್ತಿಸುವುದೇ ಕೀರ್ತನೆಗಳು. ಕೀರ್ತನೆಗಳು ಪಲ್ಲವಿ, ಅನುಪಲ್ಲವಿ ಹಾಗೂ ಚರಣಗಳಿಂದ ಕೂಡಿ ರಾಗಯುಕ್ತವಾಗಿ, ತಾಳಬದ್ಧವಾಗಿರುತ್ತವೆ. ಸುಳಾದಿಗಳಿಗಿಂತ ಸರಳವಾಗಿಯೂ, ಉಗಾಭೋಗಗಳಿಗಿಂತ ಬಿಗಿಯಾಗಿಯೂ ಇರುತ್ತವೆ. ಕೊನೆಯ ಚರಣದಲ್ಲಿ ಕೀರ್ತನೆ ರಚಿಸಿದ ಹರಿದಾಸರ ಇಷ್ಟದೈವದ ಅಂಕಿತವಿರುತ್ತದೆ.

**2. ಸುಳಾದಿ :** ಸುಳಾದಿ ಹರಿದಾಸ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ. ತಾಳ ಪ್ರಧಾನವಾದ ಗೇಯ ರಚನೆ. ಉಗಾಭೋಗಗಳಿಗಿಂತ ಬಿಗಿಯಾದ ಬಂಧವೇ ಸುಳಾದಿ. ಸಂಗೀತದ ಹಿನ್ನೆಲೆ, ತಾಳಗಳ ಪಟ್ಟು, ಸಾಹಿತ್ಯದ ಚೌಕಟ್ಟಿನಲ್ಲಿ ತತ್ತ್ವಗಳ ನಿರೂಪಣೆಯೇ ಸುಳಾದಿಯ ಲಕ್ಷಣವಾಗಿದೆ. ಧ್ರುವ, ಮಠ್ಯ, ತ್ರಿಪುಟ, ಝಂಪೆ, ರೂಪಕ, ಅಟ್ಟ ಹಾಗೂ ಏಕತಾಳ ಇವೇ ಸುಳಾದಿಯ ತಾಳಗಳು.

**3. ಉಗಾಭೋಗ :** ಇದು ಹರಿದಾಸ ಸಾಹಿತ್ಯದ ಇನ್ನೊಂದು ವಿಶಿಷ್ಟ ಗೇಯ ಪ್ರಕಾರ. ಉಗಾಭೋಗವೆಂಬ ಮಾತು ಕ್ರಿ.ಶ.ಸುಮಾರು 13 ನೆಯ ಶತಮಾನದಲ್ಲಿದ್ದ ಶಾರ್ಙ್ಗದೇವನ ಕಾಲದಿಂದ ಬಳಕೆಯಲ್ಲಿ ಬಂದಂತೆ ಕಾಣುತ್ತದೆ. ನಂತರ ಹರಿದಾಸರಲ್ಲಿ ಇದು ಹೆಚ್ಚಾಗಿ ಬಳಕೆಯಾಗಿದೆ. ಇದು ರಾಗ ಪ್ರಧಾನ ರಚನೆ, ತಾಳದ ಪಟ್ಟಿಲ್ಲ. ಸಾಮಾನ್ಯವಾಗಿ ದ್ವಿತೀಯ ಪ್ರಾಸವಿರುತ್ತದೆ. ಅಂತ್ಯ ಪ್ರಾಸವಿರುವುದೂ ಉಂಟು. ಕೊನೆಯಲ್ಲಿ ಆಯಾ ದಾಸರ ಅಂಕಿತ ಬರುತ್ತದೆ.

## ಅಭ್ಯಾಸ

**1.ಪದಗಳ ಅರ್ಥ :**

**ಅಮೃತ** – ಸುಧೆ; ಹಾಲು.
**ಕಡುಚತುರ** – ಅತೀ ಬುದ್ಧಿವಂತಿಕೆ ಉಳ್ಳವನು.
**ನೀಚ** – ಕೆಟ್ಟ; ಕೀಳಾದ.
**ಸಿರಿವರ** – ಸಮೃದ್ಧಿ ಹೊಂದಿದ; ಸಂಪದ್ಭರಿತ.
**ಆಚಾರ** – ಆಚರಣೆ; ಸಂಪ್ರದಾಯ; ಕಟ್ಟುಪಾಡು.
**ಗತಿ** – ಆಧಾರ; ಚಲನಶೀಲ ಸ್ಥಿತಿ.
**ಲಜ್ಜೆ** – ನಾಚಿಕೆ; ಸಿಗ್ಗು.
**ಹುಸಿ** – ಸುಳ್ಳು

**2. ಪ್ರಶ್ನೆಗಳು :**

**ಅ) ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಪುರಂದರದಾಸರ ಪೂರ್ವದ ಹೆಸರು: ಶ್ರೀನಿವಾಸನಾಯಕ
2. ಪುರಂದರದಾಸರ ಗುರುಗಳ ಹೆಸರು: ವ್ಯಾಸರಾಯರು
3. ದಾಸ ಸಾಹಿತ್ಯವು ಶ್ರೀಪಾದರಾಜರು ಅವರಿಂದ ಆರಂಭಗೊಂಡಿತು.
4. ಪುರಂದರ ದಾಸರ ಇಷ್ಟದೈವ ಪುರಂದರವಿಠಲರಾಯ

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

1. ಪುರಂದರದಾಸರ ಅಂಕಿತನಾಮವೇನು?
ಪುರಂದರದಾಸರ ಅಂಕಿತನಾಮ ಪುರಂದರ ವಿಠಲ.
2. ಪುರಂದರದಾಸರಿಗೆ ಯಾವ ಬಿರುದು ಇದೆ?
ಪುರಂದರದಾಸರಿಗೆ 'ಕರ್ನಾಟಕ ಸಂಗೀತ ಪಿತಾಮಹ' ಎಂಬ ಬಿರುದು ಇದೆ.

3. ಆಚಾರವಿಲ್ಲದ ನಾಲಗೆ ಮಾನವನ ಯಾವ ವರ್ತನೆಗಳನ್ನು ಸೂಚಿಸುತ್ತದೆ?
ಆಚಾರವಿಲ್ಲದ ನಾಲಗೆ ಮಾನವನ ರೀತಿ–ನೀತಿ, ಆಚಾರ ವಿಚಾರ ಹಾಗೂ ಗುಣ ನಡತೆಗಳನ್ನು ಸೂಚಿಸುತ್ತದೆ.
4. ಪುರಂದರದಾಸರು ನಮ್ಮ ನಡೆನುಡಿಗಳಲ್ಲಿ ಯಾರ ಸ್ಮರಣೆ ಇರಬೇಕೆಂದು ಹೇಳುತ್ತಾರೆ?
ಪುರಂದರದಾಸರು ನಮ್ಮ ನಡೆನುಡಿಗಳಲ್ಲಿ ಹರಿನಾಮ ಸ್ಮರಣೆ ಇರಬೇಕೆಂದು ಹೇಳುತ್ತಾರೆ.
5. ಪುರಂದರದಾಸರು ಬಡವರ ಪಾಲಿಗೆ ನಮ್ಮ ನುಡಿ ಹೇಗಿರಬೇಕೆಂದು ಹೇಳುತ್ತಾರೆ?
ಪುರಂದರದಾಸರು ಬಡವರ ಪಾಲಿಗೆ ನಮ್ಮ ನುಡಿಯು ಅವರ ಮನಸ್ಸನ್ನು ನೋಯಿಸುವಂತಿರಬಾರದು ಎಂದು ಹೇಳುತ್ತಾರೆ.

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**
1. ನಾಲಗೆಯು ಬುದ್ಧಿಯ ಹಿಡಿತದಲ್ಲಿರಬೇಕು ಎಂಬುದನ್ನು ಪುರಂದರದಾಸರು ಯಾವ ರೀತಿ ಹೇಳಿದ್ದಾರೆ?
ಯಾವುದೇ ಸಮಯದಲ್ಲೂ ಇದ್ದಂತ ಸತ್ಯವನ್ನು ನುಡಿಯಬೇಕು. ಸತ್ಯವನ್ನು ನುಡಿಯುವುದರಿಂದ ಯಾವುದೇ ತೊಂದರೆಗಳಿಲ್ಲದೆ ಸುಖ ಸಂತೋಷದಿಂದ ಇರಬಹುದು. ಅಂದರೆ ಹಾಲು ಅಮೃತದಂತಹ ಸವಿಯನ್ನು ಉಣ್ಣಬಹುದು. ಹಾಗಾಗಿ ನಾಲಗೆಯು ಬುದ್ಧಿಯ ಹಿಡಿತದಲ್ಲಿರಬೇಕೆಂದು ಪುರಂದರದಾಸರು ಹೇಳುತ್ತಾರೆ.
2. ಪುರಂದರದಾಸರು ಹುಸಿ ನುಡಿಯಬಾರದು ಎಂಬುದನ್ನು ಯಾವ ರೀತಿ ಹೇಳಿದ್ದಾರೆ?
ಯಾವುದೇ ಸಮಯದಲ್ಲೂ ಇದ್ದದ್ದನ್ನು ಇದ್ದಂತೆ ನುಡಿಯಬೇಕು. ಹಿಡಿದು ಒದ್ದು ನಮ್ಮನ್ನು ಹಿಂಸಿಸಿದರೂ ಸಹ ಸುಳ್ಳನ್ನು ಹೇಳಬಾರದು. ಸತ್ಯವನ್ನು ನುಡಿಯುವುದರಿಂದ ಯಾವುದೇ ತೊಂದರೆಗಳಿಲ್ಲದೆ ಸುಖ ಸಂತೋಷದಿಂದ ಇರಬಹುದು. ಆದ್ದರಿಂದ ಹುಸಿಯನ್ನು ನುಡಿಯಬಾರದೆಂದು ಪುರಂದರದಾಸರು ಹೇಳಿದ್ದಾರೆ.
3. ಪುರಂದರದಾಸರು ಮಾತಿನಲ್ಲಿ ಹರಿಯನ್ನು ಹೇಗೆ ಕಾಣಬೇಕೆಂದು ಬಯಸಿದ್ದಾರೆ?
ನಾವು ಸದಾ ಕಾಲ ಕೆಟ್ಟದ್ದನ್ನೇ ನುಡಿಯುತ್ತಿದ್ದರೆ ಯಮಭಟರು ನಮ್ಮನ್ನು ಹಿಡಿದುಕೊಂಡೊಯ್ಯುತ್ತಾರೆ. ಆದುದರಿಂದ ಮುಕ್ತಿ ಮಾರ್ಗಕ್ಕೆ ಕೊಂಡೊಯ್ಯುವ ಹರಿನಾಮವನ್ನೇ ಸ್ಮರಿಸುತ್ತಿರಬೇಕು. ಹರಿಪಾದವೇ ಪರಮ ಗತಿಯೆಂದು ತಿಳಿಯಬೇಕೆಂದು ಪುರಂದರದಾಸರು ಹೇಳಿದ್ದಾರೆ.
4. ಪುರಂದರದಾಸರು ಪರರ ಚಿಂತೆಯನ್ನು ಬಿಡು ಎಂದು ಏಕೆ ಹೇಳಿದ್ದಾರೆ?
ಹರಿಪಾದವೇ ಪರಮ ಗತಿಯೆಂದು ತಿಳಿದು ಸದಾ ಕಾಲವು ಪರರ ಚಿಂತೆಯನ್ನು ಬಿಡಬೇಕು. ಅನ್ಯರ ಚಿಂತೆಯಲ್ಲಿ ಕಾಲಹರಣ ಮಾಡದೆ, ಸಿರಿ ಸಂಪತ್ತನ್ನು ನೀಡುವ ಪುರಂದರವಿಠಲರಾಯನನ್ನು ಮರೆಯದೇ ಧ್ಯಾನ ಮಾಡಬೇಕೆಂದು ಪುರಂದರದಾಸರು ಹೇಳಿದ್ದಾರೆ.

**ಈ) ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ.**
1. ಪುರಂದರದಾಸರು ಮಾನವನ ನಡೆನುಡಿಯ ಮಹತ್ವವನ್ನು ಹೇಗೆ ವರ್ಣಿಸಿದ್ದಾರೆ?
ಆಚಾರ ವಿಚಾರ, ರೀತಿ ನೀತಿ, ನಡವಳಿಕೆಯನ್ನು ಅರಿಯದ ನಾಲಗೆಯೇ ನಿನ್ನ ಕೆಟ್ಟ ಬುದ್ಧಿಯನ್ನು ಬಿಡು. ನಾಚಿಕೆ, ಲಜ್ಜೆಗಳನ್ನು ಅರಿಯದೆ ಎಲ್ಲಾ ಸಂದರ್ಭದಲ್ಲೂ ಮಾತನಾಡಲು ಮುಂದೆ ಚಾಚಿಕೊಳ್ಳುವ ನಾಲಗೆಯೇ ನಿನ್ನ ಕೆಟ್ಟ ತನವನ್ನು ಬಿಡು ಎಂದು ಪುರಂದರದಾಸರು ಹೇಳುತ್ತಾರೆ.

ಮನುಷ್ಯ ಆಡಂಬರ ಹಾಗೂ ಡಂಭಾಚಾರದ ಬದುಕನ್ನು ಬಿಡಬೇಕು. ದ್ವೇಷ,ಅಸೂಯೆ, ಕೋಪ, ತಾಪಗಳನ್ನು ಬಿಟ್ಟು ಧರ್ಮದ ಹಾದಿಯಲ್ಲಿ ನಡೆಯಬೇಕು. ನಮ್ಮ ನಡೆ ನುಡಿ, ತನು ಮನ. ಅಂತರಂಗ ಬಹಿರಂಗಗಳು ಪರಿಶುದ್ಧವಾಗಿರಬೇಕು. 'ನಾಲಗೆ ಶುದ್ಧವಾದರೆ ನಾಡೆಲ್ಲಾ ನೆಂಟರು' ಎನ್ನುವಂತೆ ಬದುಕಬೇಕೆಂದು ಪುರಂದರದಾಸರು ಹೇಳಿದ್ದಾರೆ.
2. ನಾಲಗೆ ಬುದ್ಧಿಯ ಹಿಡಿತದಲ್ಲಿರುವುದರಿಂದ ಆಗುವ ಪ್ರಯೋಜನಗಳೇನು?
ನಾಲಗೆ ಯಾವಾಗಲೂ ಸತ್ಯವನ್ನು ನುಡಿಯುವುದರಿಂದ ಯಾವುದೇ ತೊಂದರೆಗಳಿಲ್ಲದೆ ಸುಖ ಸಂತೋಷದಿಂದ ಇರಬಹುದು. ಅಂದರೆ ಹಾಲು ಅಮೃತದಂತಹ ಸವಿಯನ್ನು ಉಣ್ಣಬಹುದು. ಮನುಷ್ಯ ಆಡಂಬರ ಹಾಗೂ ಡಂಭಾಚಾರದ ಬದುಕನ್ನು ಬಿಡಬೇಕು. ದ್ವೇಷ,ಅಸೂಯೆ, ಕೋಪ, ತಾಪಗಳನ್ನು ಬಿಟ್ಟು ಧರ್ಮದ ಹಾದಿಯಲ್ಲಿ ನಡೆಯಬೇಕು. ನಾಲಗೆಯ ಯಜಮಾನರಾದ ನಾವು ನಾಲಗೆಯನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳಬೇಕು. ಆಗ ನಮ್ಮಿಂದ ಆಗುವ ತಪ್ಪುಗಳು ಕಡಿಮೆಯಾಗುತ್ತವೆ ಎಂದು ಪುರಂದರದಾಸರು ಹೇಳಿದ್ದಾರೆ.

**ಉ) ಸಂದರ್ಭದೊಡನೆ ವಿವರಿಸಿರಿ.**
1. ಪರರ ಚಿಂತೆಯ ಬಿಡು ನಾಲಗೆ
ಈ ವಾಕ್ಯವನ್ನು **ಪುರಂದರದಾಸರು** ಅವರು ಬರೆದಿರುವ **ಆಚಾರವಿಲ್ಲದ ನಾಲಗೆ** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಪುರಂದರದಾಸರು ಹೇಳುತ್ತಾರೆ. ಹರಿಪಾದವೇ ಪರಮ ಗತಿಯೆಂದು ತಿಳಿದು ಸದಾ ಕಾಲವು ಪರರ ಚಿಂತೆಯನ್ನು ಬಿಡಬೇಕು.ಅನ್ಯರ ಚಿಂತೆಯಲ್ಲಿ ಕಾಲಹರಣ ಮಾಡದೆ, ಸಿರಿ ಸಂಪತ್ತನ್ನು ನೀಡುವ ಪುರಂದರವಿಠಲನನ್ನು ಮರೆಯದೇ ಧ್ಯಾನ ಮಾಡಬೇಕೆಂದು ಪುರಂದರದಾಸರು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

2. ಬುದ್ಧಿಯಲಿರು ಕಂಡ್ಯ ನಾಲಗೆ

ಈ ವಾಕ್ಯವನ್ನು **ಪುರಂದರದಾಸರು** ಅವರು ಬರೆದಿರುವ **ಆಚಾರವಿಲ್ಲದ ನಾಲಗೆ** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಪುರಂದರದಾಸರು ಹೇಳುತ್ತಾರೆ. ಯಾವುದೇ ಸಮಯದಲ್ಲೂ ಇದ್ದದ್ದನ್ನು ಇದ್ದಂತೆ ನುಡಿಯಬೇಕು. ಹಿಡಿದು ಒದ್ದು ನಮ್ಮನ್ನು ಹಿಂಸಿಸಿದರೂ ಸಹ ಸುಳ್ಳನ್ನು ಹೇಳಬಾರದು. ಸತ್ಯವನ್ನು ನುಡಿಯುವುದರಿಂದ ಯಾವುದೇ ತೊಂದರೆಗಳಿಲ್ಲದೆ ಸುಖ ಸಂತೋಷದಿಂದ ಇರಬಹುದು ಎಂದು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

3. ಕಡುಚತುರ ನುಡಿಯದಿರು ನಾಲಗೆ

ಈ ವಾಕ್ಯವನ್ನು **ಪುರಂದರದಾಸರು** ಅವರು ಬರೆದಿರುವ **ಆಚಾರವಿಲ್ಲದ ನಾಲಗೆ** ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

ಈ ಮಾತನ್ನು ಪುರಂದರದಾಸರು ಹೇಳುತ್ತಾರೆ. ಬಡವರಿಗೆ, ನೊಂದವರಿಗೆ ನಾವು ಅತೀ ಬುದ್ಧಿವಂತಿಕೆಯ ನುಡಿಗಳನ್ನಾಡಿ ಅವರನ್ನು ನೋಯಿಸಬಾರದು. ಅವರನ್ನು ಜರಿದು ಹಂಗಿಸಬಾರದು. ಬಡವರ ಮಾತಿಗೆ ನಾವು ಕಡುಚತುರ ನುಡಿಗಳನ್ನು ನುಡಿಯಬಾರದು ಎಂದು ಹೇಳುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

**3. ಭಾಷಾಭ್ಯಾಸ :**

**ಅ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.**

1. ಆಚಾರ : ನಾವು ಒಳ್ಳೆಯ ಆಚಾರವಂತರಾಗಬೇಕು.
2. ನೀಚಗುಣ : ನೀಚಗುಣ ಹೊಂದಿದವರ ಗೆಳೆತನ ಮಾಡಬಾರದು.
3. ಕಡುಚತುರ : ಈಗಿನ ಮಕ್ಕಳು ಕಡುಚತುರರಾಗಿರುತಾರೆ.

4 ಪರರಚಿಂತೆ : ನಾವು ಪರರಚಿಂತೆ ಬಿಟ್ಟು ದೇವರ ಸ್ಮರಣೆ ಮಾಡಬೇಕು.

**ಆ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಬರೆಯಿರಿ.**

ಆಚಾರ x ಅನಾಚಾರ, ನೀಚಗುಣ x ಶ್ರೇಷ್ಠಗುಣ, ಲಜ್ಜೆ x ನಿರ್ಲಜ್ಜೆ, ಬೇಡ x ಬೇಕು.

**ಇ) ಕೆಳಗಿನ ಪದಗಳಿಗೆ ತತ್ಸಮ-ತದ್ಭವ ರೂಪ ಬರೆಯಿರಿ.**

ಅಮೃತ – ಅಮರ್ದು, ಯಮ – ಜಮ, ಸಿರಿ – ಶ್ರೀ, ಚತುರ – ಚದುರ.

**ಈ) ಕೆಳಗಿನ ಪದಗಳನ್ನು ಬಿಡಿಸಿ, ಸಂಧಿಯ ಹೆಸರು ಬರೆಯಿರಿ.**

1.ಆಚಾರವಿಲ್ಲದ = ಆಚಾರ + ಇಲ್ಲದ – ಆಗಮಸಂಧಿ
ಮಾತನಾಡು = ಮಾತನು + ಆಡು – ಲೋಪಸಂಧಿ
ನುಡಿಯದೆ = ನುಡಿ + ಅದೆ – ಆಗಮಸಂಧಿ
ಹರಿಯೆಂದು = ಹರಿ + ಎಂದು – ಆಗಮಸಂಧಿ

**ಉ) ಕೆಳಗಿನ ವಾಕ್ಯಗಳಲ್ಲಿ ಗೆರೆ ಎಳೆದಿರುವ ಪದಗಳ ವಿಭಕ್ತಿ ಪ್ರತ್ಯಯಗಳ ಹೆಸರನ್ನು ಬರೆಯಿರಿ.**

1. ಪುರಂದರದಾಸರು **ಹರಿಯನ್ನು** ಪ್ರಾರ್ಥಿಸಿದರು= ಅನ್ನು – ದ್ವಿತೀಯ ವಿಭಕ್ತಿ ಪ್ರತ್ಯಯ
2. **ಹಣ್ಣಿಗೆ** ಒಂದು ಆಕಾರವಿರುತ್ತದೆ = ಗೆ – ಚತುರ್ಥಿ ವಿಭಕ್ತಿ ಪ್ರತ್ಯಯ
3. **ಶಿಕ್ಷಣದಿಂದ** ಜ್ಞಾನ ವೃದ್ಧಿಸುತ್ತದೆ = ಇಂದ – ತೃತೀಯ ವಿಭಕ್ತಿ ಪ್ರತ್ಯಯ
4. ಉಳುವವನೇ **ಭೂಮಿಯ** ಒಡೆಯ= ಅ – ಷಷ್ಠೀ ವಿಭಕ್ತಿ ಪ್ರತ್ಯಯ

ಪೂರಕ ಓದು:

# 1. ಕುವೆಂಪು ಅವರ ವಿಶ್ವಮಾನವ ಸಂದೇಶ

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.**

1.ವಿಶ್ವಮಾನವನಾಗಿ ಹುಟ್ಟುವ ಮಗು ಯಾವ ಯಾವ ಬಂಧನಗಳಿಗೆ ಒಳಪಡುತ್ತದೆ?

ಹುಟ್ಟುವಾಗ 'ವಿಶ್ವಮಾನವ'ನಾಗಿಯೇ ಹುಟ್ಟಿದ ಮಗು, ನಾವು ದೇಶ, ಭಾಷೆ, ಮತ, ಜಾತಿ, ಜನಾಂಗ, ವರ್ಣ ಇತ್ಯಾದಿ ಬಂಧನಗಳಿಗೆ ಒಳಡುತ್ತದೆ.

2. ಸ್ವಾಮಿ ವಿವೇಕಾನಂದರ ಪ್ರಕಾರ ಈ ಜಗತ್ತಿನಲ್ಲಿ ಎಷ್ಟು ಧರ್ಮಗಳಿವೆ?

"ಹುಟ್ಟುವಾಗಲೇ ಯಾರೂ ಯಾವ ಮತಕ್ಕೂ ಸೇರಿರುವುದಿಲ್ಲ. ಪ್ರತಿಯೊಬ್ಬ ಮಾನವನ ಹೃದಯದಲ್ಲೂ ಅವನದೇ ಆದ ಧರ್ಮವಿದೆ. ಈ ಜಗತ್ತಿನಲ್ಲಿ ಎಷ್ಟು ಜನ ಮಾನವರಿದ್ದಾರೆಯೋ ಅಷ್ಟು ಧರ್ಮಗಳಿರಲಿ." ಎಂದು **ಸ್ವಾಮಿ ವಿವೇಕಾನಂದರು** ಹೇಳಿದ್ದಾರೆ.

3. ಕುವೆಂಪು ಅವರ ಪ್ರಕಾರ ವಿದ್ಯೆಯ ಕರ್ತವ್ಯವೇನು?

ಪ್ರತಿಯೊಂದು ಮಗುವೂ ಹುಟ್ಟುತ್ತಲೇ ವಿಶ್ವಮಾನವ. ಬೆಳೆಯುತ್ತಾ ನಾವು ಅದನ್ನು 'ಅಲ್ಪ ಮಾನವ'ನನ್ನಾಗಿ ಮಾಡುತ್ತೇವೆ. ಮತ್ತೆ ಅವನನ್ನು 'ವಿಶ್ವಮಾನವ'ನನ್ನಾಗಿ ಮಾಡುವುದೇ ವಿದ್ಯೆಯ ಕರ್ತವ್ಯವಾಗಬೇಕು ಎಂದು ಕುವೆಂಪುರವರು ಹೇಳಿದ್ದಾರೆ.

4. ಧರ್ಮಗಳು ಹುಟ್ಟಿಕೊಂಡದ್ದು ಹೇಗೆ?

ಮಾನವ ವಿಕಾಸದ ಹಾದಿಯಲ್ಲಿ ಆಯಾ ಕಾಲದ ಅಗತ್ಯವನ್ನು ಪೂರೈಸಲು ಮಹಾಪುರುಷರು ಸಂಭವಿಸಿ ಹೋಗಿದ್ದಾರೆ. ಅವರಲ್ಲಿ ಕೆಲವರ ವಾಣಿ ವಿಶಿಷ್ಟ ಧರ್ಮವಾಗಿ ರೂಪುಗೊಂಡಿದೆ.

5. ಧರ್ಮಗಳು ಉಂಟುಮಾಡಿರುವ ತೊಂದರೆಗಳೇನು?

ಮಾನವರನ್ನು ಕೂಡಿಸಿ ಬಾಳಿಸಬೇಕೆಂಬ ಸದುದ್ದೇಶದಿಂದ ಹುಟ್ಟಿಕೊಂಡ ಮಹಾತ್ಮರ ವಾಣಿ ಮತವಾಗಿ ಮಾದಕವಾಯಿತು. ಒಂದು ಯುಗಕ್ಕೆ ಅಗತ್ಯವೆನಿಸಿದ ಧರ್ಮ ಕಾಲಾನುಕಾಲಕ್ಕೆ ಮತವಾಗಿ ನಿರುಪಯುಕ್ತವೆನಿಸಿ ಮತ್ತೊಂದು ಹೊಸ ಧರ್ಮಕ್ಕೆ ಎಡೆಗೊಟ್ಟುದ್ದೂ ಉಂಟು. ಹೀಗಾಗಿ ಅನೇಕ ಧರ್ಮಗಳು ಮತಗಳಾಗಿ ಜನತೆಯನ್ನು ಗುಂಪು ಗುಂಪಾಗಿ ಒಡೆದಿವೆ. ಯುದ್ಧಗಳನ್ನು ಹೊತ್ತಿಸಿವೆ.

6. ವಿನೋಭಾಭಾವೆಯವರು ಮತಧರ್ಮದ ಬಗ್ಗೆ ಏನು ಹೇಳಿದ್ದಾರೆ?

ವಿನೋಬಾಭಾವೆಯವರು ಹಿಂದೆ ಹೇಳಿದಂತೆ 'ಮತ ಮತ್ತು ರಾಜಕೀಯದ ಕಾಲ ಆಗಿ ಹೋಯಿತು. ಇನ್ನೇನಿದ್ದರೂ ಅಧ್ಯಾತ್ಮ ಮತ್ತು ವಿಜ್ಞಾನದ ಕಾಲ ಬರಬೇಕಾಗಿದೆ'.

7. ಕುವೆಂಪು ಅವರ ಪಂಚ ಮಂತ್ರಗಳಾವುವು?

ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ–ಈ ಪಂಚಮಂತ್ರ ಇವು ಕುವೆಂಪುರವರ ಪಂಚ ಮಂತ್ರಗಳಾಗಿವೆ.

8. ಕುವೆಂಪು ಅವರ ವಿಶ್ವಮಾನವ ಸಂದೇಶದ ಸಾರವೇನು?

ಯಾವ ಭಾವನೆಗಳು ಜಗತ್ತಿನಲ್ಲಿ ಎಲ್ಲ ಮಾನವರಿಗೂ ಅನ್ವಯವಾಗಬಹುದೊ ಅಂತಹ ಭಾವನೆ, ಅಂತಹ ದೃಷ್ಟಿ, ಬರಿಯ ಯಾವುದೊ ಒಂದು ಜಾತಿಗೆ, ಮತಕ್ಕೆ, ಗುಂಪಿಗೆ, ಒಂದು ದೇಶಕ್ಕೆ ಮಾತ್ರ ಅನ್ವಯವಾಗುವುದಿಲ್ಲ; ಸರ್ವ ಕಾಲಕ್ಕೂ ಅನ್ವಯವಾಗುವ ಇವು ಮೂಲ ಮೌಲ್ಯಗಳು. ಈ ಮೌಲ್ಯಗಳು ಮಾನವರನ್ನು ಕೂಡಿಸಿ ಬಾಳಿಸುವತ್ತ ನಡೆದಾವು. ಗುಂಪುಗಾರಿಕೆಗೆಂದೂ ಇವು ತೊಡಗುವುದಿಲ್ಲ; ಅದೇನಿದ್ದರೂ ರಾಜಕೀಯದ ಕರ್ಮ; ವ್ಯಕ್ತಿ ಸ್ವಾತಂತ್ರ್ಯವನ್ನು ನೀಡಿಯೂ ಸಮಷ್ಟಿಯ ಉದ್ಧಾರದ ದೃಷ್ಟಿ ಇದರದು. ಈ ದೃಷ್ಟಿಗೆ ವ್ಯಕ್ತಿಗಳೆಷ್ಟೋ ಅಷ್ಟೂ ಸಂಖ್ಯೆಯ ಮತಗಳಿರುವುದು ಸಾಧ್ಯ: ಅಷ್ಟೂ ವ್ಯಕ್ತಿಗಳು ಸಮಷ್ಟಿಯ ವಿಕಾಸಕ್ಕೆ ಸಾಧಕವಾಗುವುದೂ ಸಾಧ್ಯ. ಈ 'ದರ್ಶನ'ವನ್ನೇ 'ವಿಶ್ವಮಾನವ ಗೀತೆ' ಸಾರುತ್ತದೆ.

9. ವಿಶ್ವಮಾನವರಾಗಲು ನಾವು ಅನುಸರಿಸಬೇಕಾದ ಸಪ್ತ ಸೂತ್ರಗಳಾವುವು?

**ವಿಶ್ವಮಾನವರಾಗಲು ನಾವು ಸಾಧಿಸಬೇಕಾದ ಮೂಲಭೂತ ಸ್ವರೂಪದ ಸಪ್ತ ಸೂತ್ರಗಳು.**

1. "ಮನುಷ್ಯಜಾತಿ ತಾನೊಂದೆ ವಲಂ" ಎಂಬುದನ್ನು ನಿರುಪಾಧಿಕವಾಗಿ ಸ್ವೀಕರಿಸಬೇಕು.
2. ವರ್ಣಾಶ್ರಮವನ್ನು ತಿದ್ದುವುದಲ್ಲ, ಅದನ್ನು ಸಂಪೂರ್ಣವಾಗಿ ತೊಲಗಿಸಬೇಕು. ಅಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ, ಅಂತ್ಯಜ, ಷಿಯಾ, ಸುನ್ನಿ, ಕ್ಯಾಥೊಲಿಕ್, ಪ್ರಾಟಿಸ್ಟೆಂಟ್, ಸಿಖ್, ನಿರಂಕಾರಿ, ಇತ್ಯಾದಿ ಇತ್ಯಾದಿ ವಿಭಜನೆಯನ್ನು ನಿರ್ನಾಮ ಮಾಡಬೇಕು.
3. ಎಲ್ಲ ದೇಶಗಳಲ್ಲಿ ಮತ್ತು ಎಲ್ಲ ಮತಗಳಲ್ಲಿರುವ ಜಾತಿ ಪದ್ಧತಿಯನ್ನು ಸಂಪೂರ್ಣವಾಗಿ ನಿರಾಕರಿಸಿ ವಿನಾಶಗೊಳಿಸಬೇಕು.
4. 'ಮತ' ತೊಲಗಿ 'ಅಧ್ಯಾತ್ಮ' ಮಾತ್ರ ವೈಜ್ಞಾನಿಕ ತತ್ತ್ವವಾಗಿ ಮಾನ್ಯತೆ ಪಡೆಯಬೇಕು.
5. ಮತ 'ಮನುಜಮತ' ಆಗಬೇಕು. ಪಥ 'ವಿಶ್ವಪಥ' ಆಗಬೇಕು; ಮನುಷ್ಯ 'ವಿಶ್ವಮಾನವ' ಆಗಬೇಕು.
6. ಮತ ಗುಂಪು ಕಟ್ಟುವ ವಿಷಯವಾಗಬಾರದು. ಯಾರೂ ಯಾವ ಮತಕ್ಕೂ ಸೇರದೆ,

ಪ್ರತಿಯೊಬ್ಬನೂ ತಾನು ಕಂಡುಕೊಳ್ಳುವ 'ತನ್ನ' ಮತಕ್ಕೆ ಮಾತ್ರ ಸೇರಬೇಕು. ಅಂದರೆ ಜಗತ್ತಿನಲ್ಲಿ ಎಷ್ಟು ವ್ಯಕ್ತಿಗಳಿದ್ದಾರೋ ಅಷ್ಟೇ ಸಂಖ್ಯೆಯ ಮತಗಳಿರುವಂತಾಗುತ್ತದೆ. ಯಾರೊಬ್ಬರೂ ಇನ್ನೊಬ್ಬರ ಮತಕ್ಕೆ ಸೇರಿ ಗುಂಪುಕಟ್ಟಿ ಜಗಳ ಹಚ್ಚುವಂತಾಗಬಾರದು.

7. ಯಾವ ಒಂದು ಗ್ರಂಥವೂ 'ಏಕೈಕ ಪರಮಪೂಜ್ಯ' ಧರ್ಮ ಗ್ರಂಥವಾಗಬಾರದು. ಪ್ರತಿಯೊಬ್ಬ ವ್ಯಕ್ತಿಯೂ ತನಗೆ ಸಾಧ್ಯವಾದುವುಗಳನೆಲ್ಲ ಓದಿ ತಿಳಿದು ತನ್ನ 'ದರ್ಶನ'ವನ್ನು ತಾನೆ ನಿರ್ಣಯಿಸಿ ಕಟ್ಟಿಕೊಳ್ಳಬೇಕು.

## 2. ನೀರಿನ ಮಹತ್ವ ಮತ್ತು ಮಾಲಿನ್ಯ

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.**

1.ಜೀವಗಳ ಜೀವನಾಧಾರ ಯಾವುದು?
ಜೀವಗಳ ಜೀವನಾಧಾರ ನೀರು.

2. ನಾಗರಿಕತೆಗಳು ಎಲ್ಲಿ ಪ್ರವರ್ಧಮಾನಕ್ಕೆ ಬಂದವು?
ಎಲ್ಲ ನಾಗರೀಕತೆಗಳು ನದಿಯ ದಂಡೆಯಲ್ಲಿಯೇ ಪ್ರವರ್ಧಮಾನಕ್ಕೆ ಬಂದವು.

3. ಭೂಮಿಯ ಮೇಲೆ ನೀರಿನ ಪ್ರಮಾಣವೆಷ್ಟು?
ಭೂಮಿಯ ಮೇಲೆ ನೀರಿನ ಪ್ರಮಾಣ 79% ರಷ್ಟು ಇದೆ.

4. ನೀರಿನ ಮೂಲಗಳನ್ನು ಪಟ್ಟಿಮಾಡಿ.
ನೀರಿನ ಮೂಲಗಳೆಂದರೆ ಕೆರೆ, ಕಾಲುವೆ ಮತ್ತು ಬಾವಿಗಳು.

5. ನೀರು ಹೇಗೆ ಮಲಿನವಾಗುತ್ತದೆ?
ಸಂಸ್ಕರಿಸದ ಹಾಗೂ ಶುದ್ಧೀಕರಿಸದ ಕಸವು ನೀರಿಗೆ ಸೇರುವುದು. ನಗರ ಪಟ್ಟಣಗಳಿಂದ ಹೊರಬರುವ ಚರಂಡಿ ಮತ್ತು ಶೌಚಾಲಯಗಳ ಹೊಲಸು ನೀರು ಸೇರುವುದು. ರಾಸಾಯನಿಕ, ಕಬ್ಬಿಣದ ಉಕ್ಕು ಕಾರ್ಖಾನೆ ಹಾಗೂ ಚರ್ಮ ಕೈಗಾರಿಕೆಗಳಿಂದ ಹೊರಬರುವ ವಿಷಯುಕ್ತ ಪದಾರ್ಥಗಳು ನೀರಿನ ಮೂಲಗಳನ್ನು ಸೇರುವುದು. ರಸಗೊಬ್ಬರಗಳ ಕಾರ್ಖಾನೆ ಹಾಗೂ ಅವುಗಳ ಬಳಕೆಯಿಂದಾಗಿ ನೈಟ್ರೇಟ್, ಪಾಸ್ಫೇಟ್‌ಗಳು ಭೂಮಿಗೆ ಬಿದ್ದು ಹರಿಯುವ ಮಳೆಯೊಂದಿಗೆ ಬೆರೆತು ನದಿ, ಕಾಲುವೆ, ಕೆರೆಗಳಿಗೆ ಸೇರುತ್ತವೆ. ಸಮುದ್ರದಲ್ಲಿ ಹಡಗು ಮತ್ತು ಅನಿಲ ದುರಂತಗಳಿಂದಾಗಿ ಪೆಟ್ರೋಲಿಯಂ ಉತ್ಪನ್ನಗಳು ನೀರನ್ನು ಸೇರಿ ಮಲಿನಗೊಳಿಸುತ್ತವೆ.

6. ಮಲಿನ ನೀರನ್ನು ಬಳಸಿದಾಗ ಉಂಟಾಗುವ ದುಷ್ಪರಿಣಾಮಗಳನ್ನು ತಿಳಿಸಿ.
ಮೂತ್ರಪಿಂಡದ ವೈಫಲ್ಯ, ಚರ್ಮ ಕಾಯಿಲೆ, ಮೂಳೆಗೆ ಸಂಬಂಧಿಸಿದ ರೋಗಗಳು. ರಾಸಾಯನಿಕ ಗೊಬ್ಬರದಂಶಗಳು ನೀರಿಗೆ ಸೇರಿದರೆ ನೀರಿನ ಮೇಲ್ಪದರದಲ್ಲಿ ಪಾಚಿ ಬೆಳೆದು ಸೂರ್ಯ ಕಿರಣಗಳು ನೀರಿನ ಮೇಲೆ ಬೀಳುವುದಿಲ್ಲ ಹಾಗೂ ಅವು ನೀರಿನಲ್ಲಿರುವ ಆಮ್ಲಜನಕದ ಪ್ರಮಾಣವನ್ನು ಕಡಿಮೆ ಮಾಡುತ್ತವೆ. ಇದರಿಂದ ಆಮ್ಲಜನಕದ ಕೊರತೆಯಿಂದಾಗಿ ಜಲಚರಗಳು ನಾಶವಾಗುತ್ತವೆ. ಕೊಳಚೆ ಪ್ರದೇಶದ ನೀರು ಬಳಸಿ ಬೆಳೆಯುವ ತರಕಾರಿ, ಹಣ್ಣು ವಿಷಯುಕ್ತವಾಗುತ್ತವೆ. ಕೈಗಾರಿಕಾ ಕಶ್ಮಲಗಳಲ್ಲಿರುವ ಸೀಸ, ಕ್ಯಾಡ್ಮಿಯಂ, ಡಿ.ಡಿ.ಟಿ. ಇವುಗಳು ಮೀನು ಹಾಗೂ ಇನ್ನಿತರ ಜಲಚರಗಳಲ್ಲಿ ಸೇರಿ ನಾಶವಾಗುತ್ತವೆ ಹಾಗೂ ಅವುಗಳನ್ನು ಬಳಸುವ ಮಾನವನಿಗೆ ತೊಂದರೆಯುಂಟಾಗುತ್ತದೆ.

7. ನಿಮ್ಮ ಗ್ರಾಮ / ಪ್ರದೇಶದಲ್ಲಿ ಆಗುತ್ತಿರುವ ಜಲಮಾಲಿನ್ಯ ಕುರಿತು ಬರೆಯಿರಿ.
ಕೆರೆಯಲ್ಲಿ ದನಕರುಗಳನ್ನು ಸ್ನಾನ ಮಾಡಿಸುವುದು, ಬಟ್ಟೆ ತೊಳೆಯುವುದು, ಸಂಸ್ಕರಿಸದ ಹಾಗೂ ಶುದ್ಧೀಕರಿಸದ ಕಸವು ಕೆರೆ ನೀರಿಗೆ ಸೇರುವುದು. ನಗರ, ಊರಿನಿಂದ ಹೊರಬರುವ ಚರಂಡಿ ಮತ್ತು ಶೌಚಾಲಯಗಳ ಹೊಲಸು ನೀರು ಕೆರೆ ಸೇರುವುದು. ರಸಗೊಬ್ಬರಗಳ ಕಾರ್ಖಾನೆ ಹಾಗೂ ಅವುಗಳ ಬಳಕೆಯಿಂದಾಗಿ ನೈಟ್ರೇಟ್, ಪಾಸ್ಫೇಟ್‌ಗಳು ಭೂಮಿಗೆ ಬಿದ್ದು ಹರಿಯುವ ಮಳೆಯೊಂದಿಗೆ ಬೆರೆತು ನದಿ, ಕಾಲುವೆ, ಕೆರೆಗಳಿಗೆ ಸೇರುತ್ತವೆ.

8. ಜಲ ಮಾಲಿನ್ಯ ತಡೆಗಟ್ಟಲು ಅನುಸರಿಸಬೇಕಾದ ಕ್ರಮಗಳೇನು?
ಇಷ್ಟು ತೀವ್ರತೊಂದರೆ ಉಂಟುಮಾಡುವ ಜಲಮಾಲಿನ್ಯವನ್ನು ತಡೆಯಲು ಈ ಕ್ರಮಗಳನ್ನು ಕೈಗೊಳ್ಳಬೇಕು. ಕಾರ್ಖಾನೆಗಳಿಂದ ಬರುವ ಕಲ್ಮಶಗಳನ್ನು ಶುದ್ಧೀಕರಿಸಿ ಬಿಡಬೇಕು. ನಗರ ಪಟ್ಟಣಗಳಿಂದ ಹೊರಬರುವ ಕೊಳಚೆ ನೀರನ್ನು ಶುದ್ಧೀಕರಣ ಮಾಡಿ ಮರು ಬಳಸಬೇಕು. ಮಳೆ ನೀರು ಸಂಗ್ರಹ ಮತ್ತು ಇಂಗುವಿಕೆಗೆ ಕ್ರಮ ಕೈಗೊಳ್ಳಬೇಕು. ನೀರನ್ನು ಮಿತವಾಗಿ ಬಳಸಬೇಕು. ನೀರಿನ ಮೂಲಗಳನ್ನು ಉಳಿಸಬೇಕು. ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ ಗಿಡ, ಮರ, ಬೆಳೆಸಬೇಕು. ಹೀಗೆ ನಾವು ನೀರನ್ನು ಸಂರಕ್ಷಿಸದಿದ್ದರೆ ಈಗ ಪೆಟ್ರೋಲ್, ಡೀಸಲ್ ಕೊಳ್ಳುವ ಹಾಗೆ ಬಂಕ್‌ಗಳಲ್ಲಿ ನೀರನ್ನು ಕೊಳ್ಳಬೇಕಾಗಬಹುದು. ಪ್ರತಿ ವರ್ಷ ಮಾರ್ಚ್ 22 ರಂದು 'ವಿಶ್ವ ಜಲ ದಿನಾಚರಣೆ' ಆಚರಿಸಿ ನೀರಿನ ಮಹತ್ವ ಎಲ್ಲರಿಗೂ ತಿಳಿಯುವಂತೆ ಮಾಡಬೇಕು.

**"ನೀರು ಉಳಿಸಿ, ಜೀವವನ್ನು ರಕ್ಷಿಸಿ"**

9. ನೀರನ್ನು ನೀವು ಹೇಗೆ ಉಳಿತಾಯ ಮಾಡುವಿರಿ?

ನೀರಿನ ಲಭ್ಯತೆ, ಮಿತಬಳಕೆ, ನೀರಿನ ಆಕರಗಳನ್ನು ಸಂರಕ್ಷಿಸುವುದು. ನೀರಿನ ಅಪವ್ಯಯವನ್ನು ತಪ್ಪಿಸುವುದು. ಕಲುಷಿತ ನೀರನ್ನು ಶುದ್ದೀಕರಿಸಿ ಪುನರ್ಬಳಕೆ ಮಾಡುವುದು ಬಹಳ ಮುಖ್ಯ. ಮಳೆ ನೀರು ಇಂಗಲು ಅಲ್ಲಲ್ಲಿ ಇಂಗು ಗುಂಡಿಗಳನ್ನು ನಿರ್ಮಿಸುವುದು. ಮನೆ ಸ್ವಚ್ಛತೆಗೆ ಬಳಸಿದ ನೀರನ್ನು ಸುತ್ತಲಿನ ಗಿಡಗಂಟಿಗಳಿಗೆ ಬಿಡುವುದು. ಬಳಸಿದ ನಂತರ ನಲ್ಲಿಗಳನ್ನು ಬಂದ್ ಮಾಡುವುದು.ಪ್ರತಿ ವರ್ಷ ಮಾರ್ಚ್ 22 ರಂದು 'ವಿಶ್ವ ಜಲ ದಿನಾಚರಣೆ' ಆಚರಿಸಿ ನೀರಿನ ಮಹತ್ವ ಎಲ್ಲರಿಗೂ ತಿಳಿಯುವಂತೆ ಮಾಡವುದು. ಇನ್ನೂ ಮುಂತಾದ ರೂಪದಲ್ಲಿ ನೀರನ್ನು ಉಳಿತಾಯ ಮಾಡಬಹುದು.
**"ನೀರು ಉಳಿಸಿ, ಜೀವವನ್ನು ರಕ್ಷಿಸಿ"**

## 3. ಸರ್ ಎಂ. ವಿಶ್ವೇಶ್ವರಯ್ಯ

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ :**

1.ವಿಶ್ವೇಶ್ವರಯ್ಯನವರು ಯಾವಾಗ ಜನಿಸಿದರು?
ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು 1860 ರ ಸೆಪ್ಟೆಂಬರ್ ತಿಂಗಳ 15 ರಂದು ಜನಿಸಿದರು.
2. ವಿಶ್ವೇಶ್ವರಯ್ಯನವರ ಜನ್ಮಸ್ಥಳ ಯಾವುದು?
ವಿಶ್ವೇಶ್ವರಯ್ಯನವರ ಜನ್ಮಸ್ಥಳ ಚಿಕ್ಕಬಳ್ಳಾಪುರ ಜಿಲ್ಲೆಯ ಮುದ್ದೇನಹಳ್ಳಿ ಗ್ರಾಮ.
3. ವಿಶ್ವೇಶ್ವರಯ್ಯನವರ ತಂದೆ–ತಾಯಿಯ ಹೆಸರೇನು?
ವಿಶ್ವೇಶ್ವರಯ್ಯನವರ ತಂದೆ ಶ್ರೀನಿವಾಸ ಶಾಸ್ತ್ರಿ, ತಾಯಿ ವೆಂಕಟಲಕ್ಷ್ಮಮ್ಮ.
4. ವಿಶ್ವೇಶ್ವರಯ್ಯನವರ ಗುರುಭಕ್ತಿಯನ್ನು ಮೆಚ್ಚುತ್ತಿದ್ದ ಗುರುಗಳು ಯಾರು?
ವಿಶ್ವೇಶ್ವರಯ್ಯನವರ ಗುರುಭಕ್ತಿಯನ್ನು ಮೆಚ್ಚುತ್ತಿದ್ದ ಗುರುಗಳು ಕೃಷ್ಣಗಿರಿ ರಾಘವೇಂದ್ರರಾಯರು.
5. ಭಾರತ ಸರ್ಕಾರ ವಿಶ್ವೇಶ್ವರಯ್ಯನವರಿಗೆ ಕೊಡಮಾಡಿದ ಅತ್ಯುನ್ನತ ಪ್ರಶಸ್ತಿ ಯಾವುದು?
ಭಾರತ ಸರ್ಕಾರ ವಿಶ್ವೇಶ್ವರಯ್ಯನವರಿಗೆ ಕೊಡಮಾಡಿದ ಅತ್ಯುನ್ನತ ಪ್ರಶಸ್ತಿ 'ಭಾರತ ರತ್ನ',
6. ವಿಶ್ವೇಶ್ವರಯ್ಯನವರ ವ್ಯಕ್ತಿತ್ವದ ವಿಶೇಷತೆಗಳೇನು?
ವಿಶ್ವೇಶ್ವರಯ್ಯನವರು ಹುಟ್ಟಿನಿಂದ ಬಡವರು, ಮನೆತನದಿಂದ ಸಭ್ಯರು, ಬೆಳವಣಿಗೆಯಿಂದ ಸಂಯಮಿ, ಸ್ವಭಾವದಿಂದ ಸಜ್ಜನರು. ಅಜಾತಶತ್ರು, ಪರೋಪಕಾರಿ, ವೃತ್ತಿಯಿಂದ ಎಂಜಿನಿಯರ್, ಸಂದರ್ಭದಿಂದ ದಿವಾನ್, ಮನೋಧರ್ಮದಿಂದ ವಿಜ್ಞಾನಿ, ಶ್ರದ್ಧೆಯಿಂದ ಉದ್ಯಮಿ. ಅವರು ಕೈಗೊಂಡಿದ್ದುದು ಕಠೋರ ವ್ರತ. ಅದನ್ನು ತಪ್ಪದೆ ನಡೆಸುವ ಧೈರ್ಯ, ಸ್ಥೈರ್ಯ, ಸಾಮರ್ಥ್ಯ ಅವರಲ್ಲಿದ್ದುವು.
7. 1860 ರಲ್ಲಿ ಜನಿಸಿದ ಮಹಾಪುರುಷರನ್ನು ಪಟ್ಟಿಮಾಡಿ.
1860ನೇ ವರ್ಷದಲ್ಲಿ ಭಾರತದ ಮಹಾಪುರುಷರಾದ ಜವಾಹರಲಾಲರ ತಂದೆ ಮೋತಿಲಾಲ್ ನೆಹರೂ, ಬನಾರಸ್ ವಿಶ್ವವಿದ್ಯಾಲಯದ ಸ್ಥಾಪಕ ಪಂಡಿತ ಮದನಮೋಹನ ಮಾಲವೀಯ, ನೊಬೆಲ್ ಪ್ರಶಸ್ತಿ ವಿಜೇತ, ಕವಿ ಸಾರ್ವಭೌಮ ರವೀಂದ್ರನಾಥ ಠಾಕೂರರು ಜನ್ಮತಾಳಿದ್ದು ಗಮನಾರ್ಹ.
8. ವಿಶ್ವೇಶ್ವರಯ್ಯನವರು ಜನತೆಗೆ ನೀಡಿದ ಸಂದೇಶವೇನು?
ದುಡಿದರೆ ಉದ್ಧಾರ, ದುಡಿಯದಿದ್ದರೆ ವಿನಾಶ, ಎಂಬ ಸಂದೇಶವನ್ನು ಜನತೆಗೆ ನೀಡಿದರು.

## ಗಾದೆಗಳ ವಿಸ್ತರಣೆ

**1) ಹಾಸಿಗೆ ಇದ್ದಷ್ಟು ಕಾಲು ಚಾಚು**

**ಪೀಠಿಕೆ:** ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ, ಗಾದೆ ಮಾತುಗಳು ಸರ್ವಕಾಲಿಕ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಭವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ಅರ್ಥದಿಂದ ಕೂಡಿರುತ್ತವೆ.

**ವಿವರಣೆ** – ನಾವು ನಮ್ಮ ಅರ್ಹತೆಗೆ ತಕ್ಕ ಗುರಿಯನ್ನು, ಆಸೆಯನ್ನು ಹೊಂದಿರಬೇಕು. ಇಲ್ಲದಿದ್ದರೆ ತಿರುಕ ಕಂಡ ಕನಸಿನಂತೆ ಕನಸು ಕನಸಾಗಿಯೇ ಉಳಿಯುತ್ತದೆ. ಮುಂದೆ ಪಡಬಾರದ ಕಷ್ಟವನ್ನು ಪಡಬೇಕಾಗುತ್ತದೆ. ಆದ್ದರಿಂದ ಹಣವನ್ನು ದುಂದುವೆಚ್ಚ ಮಾಡಬಾರದು. ನ್ಯಾಯಯುತವಾಗಿ ಸಂಪಾದಿಸಿದ ಸಂಪಾದನೆಯಲ್ಲಿಯೇ ಜೀವನ ನಡೆಸಬೇಕು ಎಂಬುದು ಮೇಲಿನ ಗಾದೆ ಮಾತಿನ ಅರ್ಥವಾಗಿದೆ.

**2) ಅತಿ ಆಸೆ ಗತಿಗೇಡು**

**ಪೀಠಿಕೆ** :ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ, ಗಾದೆ ಮಾತುಗಳು ಸರ್ವಕಾಲಿಕ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಭವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ಅರ್ಥದಿಂದ ಕೂಡಿರುತ್ತವೆ.

**ವಿವರಣೆ:** ಮನುಷ್ಯನಿಗೆ ಆಸೆ ಇರಬೇಕು, ಆದರೆ ದುರಾಸೆ ಇರಬಾರದು. ಅತಿಯಾದ ಅಸೆ ದುಃಖಕ್ಕೆ ಕಾರಣವಾಗಿ ಇರುವುದನ್ನು ಕಳೆದುಕೊಂಡು ಗತಿಹೀನರನ್ನಾಗಿ ಮಾಡುತ್ತದೆ. ಉದಾ – ಊಟ ಬಹಳ ರುಚಿಯಾಗಿದೆ ಎಂದು ಹೆಚ್ಚು ತಿಂದರೆ ಅಜೀರ್ಣವಾಗುತ್ತದೆ. ಖ್ಯಾತ ಕವಿ ಡಿ.ವಿ.ಜಿ ಅವರು ಹೇಳುವಂತೆ ಜೀವನದಲ್ಲಿ ಅತಿ ಎಂಬುದು ಎಲ್ಲಿಯೂ ಇಲ್ಲದಿದ್ದರೆ ನೆಮ್ಮದಿಯ ಜೀವನ ನಮ್ಮದಾಗುತ್ತದೆ. ಆದ್ದರಿಂದ ಅತಿ ಆಸೆ ಹೊಂದದೆ ಇದ್ದುದರಲ್ಲಿಯೇ ತೃಪ್ತರಾಗಿರಬೇಕು ಎಂಬುದು ಈ ಗಾದೆಯ ಅರ್ಥ ಹಾಗೂ ಉದ್ದೇಶವಾಗಿದೆ.

**3) ಕೈ ಕೆಸರಾದರೆ ಬಾಯಿ ಮೊಸರು.**
**ಪೀಠಿಕೆ:** ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ, ಗಾದೆ ಮಾತುಗಳು ಸರ್ವಕಾಲಿಕ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಬಭವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ಅರ್ಥದಿಂದ ಕೂಡಿರುತ್ತವೆ.
**ವಿವರಣೆ:** ಕೈ ಕೆಸರಾದರೆ ಬಾಯಿ ಮೊಸರು ಎಂದರೆ ಕಷ್ಟ ಪಟ್ಟು ದುಡಿದರೆ ದುಡಿಮೆಗೆ ತಕ್ಕ ಪ್ರತಿಫಲ ಸಿಗುತ್ತದೆ. ಎಂಬುದು ಈ ಮೇಲಿನ ಗಾದೆ ಮಾತಿನ ಅರ್ಥವಾಗಿದೆ. ಉದಾಹರಣೆಗೆ ರೈತರು ಸರಿಯಾದ ಸಮಯದಲ್ಲಿ ಹೊಲದಲ್ಲಿ ಉತ್ತಿ ಬಿತ್ತಿ ಬೆಳೆ ಬೆಳೆದರೆ ಮುಂದೆ ಫಸಲು ಸಮೃದ್ಧವಾಗಿ ಸಿಗುತ್ತದೆ. ಆಳಾಗಿ ದುಡಿ ಅರಸನಾಗಿ ಉಣ್ಣು, ಎಂಬ ಗಾದೆಮಾತಿಗೆ ಸಮಾನವಾದ ಗಾದೆಯಾಗಿದೆ. ಇದರಲ್ಲಿ ಕಾಯಕದ ಮಹತ್ವ ಅಡಗಿದೆ.

**4) ದೇಶ ಸುತ್ತಿ ನೋಡು; ಕೋಶ ಓದಿ ನೋಡು**
**ಪೀಠಿಕೆ:** ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ, ಗಾದೆ ಮಾತುಗಳು ಸರ್ವಕಾಲಿಕ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಭವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ಅರ್ಥದಿಂದ ಕೂಡಿರುತ್ತವೆ.
**ವಿವರಣೆ:** ದೇಶ ಸುತ್ತಿ ನೋಡು, ಕೋಶ ಓದಿ ನೋಡು.' ಇದೊಂದು ಪ್ರಚಲಿತದಲ್ಲಿರುವ ಗಾದೆಮಾತಾಗಿದೆ. ಜ್ಞಾನ ಸಂಪಾದನೆಯು ಪ್ರವಾಸ ಮಾಡುವುದರಿಂದ ಇಲ್ಲವೇ ಪುಸ್ತಕ ಓದುವುದರಿಂದ ಸಾಧ್ಯವಾಗುತ್ತದೆ ಎಂಬುದು ಈ ಗಾದೆಮಾತಿನ ಅರ್ಥವಾಗಿದೆ. ಪ್ರವಾಸ ಮಾಡುವುದು ಎಲ್ಲರಿಂದಲೂ ಸಾಧ್ಯವಿಲ್ಲ. ಆದರೆ ಜ್ಞಾನ ಭಂಡಾರದ ಕೀಲಿಕೈಯಂತಿರುವ ಪುಸ್ತಕವನ್ನು ಓದುವುದು ಎಲ್ಲರಿಂದಲೂ ಸಾಧ್ಯ ಎಂಬುದು ಈ ಗಾದೆ ಮಾತಿನ ವೈಶಿಷ್ಟ್ಯವಾಗಿದೆ.

**5) ಬೆಳೆಯುವ ಸಿರಿ ಮೊಳಕೆಯಲ್ಲಿ.**
**ಪೀಠಿಕೆ:** ವೇದ ಸುಳ್ಳಾದರು ಗಾದೆ ಸುಳ್ಳಾಗದು ಎನ್ನುವಂತೆ, ಗಾದೆ ಮಾತುಗಳು ಸರ್ವಕಾಲಿ ಸತ್ಯವನ್ನು ತಿಳಿಸುವ ಮಾತುಗಳಾಗಿವೆ. ಇವು ಹಿರಿಯರ ಅನುಭವಜನ್ಯದಿಂದ ಬಂದಿವೆ. ಮೇಲ್ನೋಟದ ಅರ್ಥಕ್ಕಿಂತ ಭಿನ್ನವಾದ ಅರ್ಥದಿಂದ ಕೂಡಿರುತ್ತವೆ.
**ವಿವರಣೆ–** ಮುಂದೆ ಬೆಳೆಯಬಹುದಾದ ಪೈರಿನ ಗುಣವನ್ನು ಅದು ಮೊಳಕೆಯಲ್ಲಿ ಇದ್ದಾಗಲೇ ಕಂಡುಬರುತ್ತದೆ. ಒಬ್ಬ ಸಾಧಕನ ಸಾಧನೆಯ ಗುಣ ಆತನ ಬಾಲ್ಯದಲ್ಲಿಯೇ ಕಂಡು ಬರುತ್ತದೆ. ಎಂಬುದು ಈ ಗಾದೆ ಮಾತಿನ ಅರ್ಥವಾಗಿದೆ.ಪಂಡಿತ ಪುಟ್ಟರಾಜ ಗವಾಯಿಗಳ ಸಾಧನೆ ಇದಕ್ಕೆ ಉತ್ತಮ ಉದಾಹರಣೆಯಾಗಿದೆ.

## ಪ್ರಬಂಧಗಳು

**1) ಪರಿಸರ ಸಂರಕ್ಷಣೆಯ ಇಂದಿನ ಅಗತ್ಯ:**
**ಪೀಠಿಕೆ:** – ಮನುಷ್ಯ ಪರಿಸರದ ಕೂಸು ಎಂಬುದು ಪ್ರಸಿದ್ಧವಾದ ಮಾತು. ಪರಿಸರ ಎಂಬುದು ಮನುಷ್ಯನಿಗೆ ಮಾತ್ರವಲ್ಲ, ಪ್ರತಿಯೊಂದು ಜೀವಿಗೂ ತಾಯಿಯ ಸಮಾನ. ಆದರೆ ಇಂದು ಮಾನವ ಪರಿಸರದ ಮೇಲೆ ಬಲತ್ಕಾರ ಮಾಡುತ್ತಿದ್ದಾನೆ. ಇದರಿಂದ ಪರಿಸರ ನಾಶವಾಗುತ್ತಿದೆ.
**ವಿಷಯ ನಿರೂಪಣೆ:** – ಮಾನವನು ತನ್ನ ಸ್ವಾರ್ಥಕ್ಕಾಗಿ ಪರಿಸರವನ್ನು ವಿವಿಧ ರೀತಿಯಲ್ಲಿ ಹಾಳು ಮಾಡುತ್ತಿದ್ದಾನೆ. ಇದಕ್ಕೆಪ್ರತಿಯಾಗಿ ಪ್ರಕೃತಿಯು ನೆರೆ ಹಾವಳಿ, ಭೂಕಂಪ, ಅತಿವೃಷ್ಟಿ,ಅನಾವೃಷ್ಟಿ, ಅಕಾಲವೃಷ್ಟಿ, ಚಂಡಮಾರುತ, ಸಾಂಕ್ರಾಮಿಕರೋಗಗಳ ಮೂಲಕ ಪ್ರತಿಭಟನೆಯನ್ನು ನಡೆಸಿದೆ. ಇದನ್ನು ಅರಿತು ಪರಿಸರ ಸಂರಕ್ಷಣೆ ಮಾಡುವುದು ಇಂದಿನ ಅಗತ್ಯವಾಗಿದೆ. ಪರಿಸರ ಮಾಲಿನ್ಯಕ್ಕೆ ಅತಿಕ್ರಮಣ ಸಾಗುವಳಿ, ಅರಣ್ಯನಾಶ, ರಾಸಾಯನಿಕ ಗೊಬ್ಬರಗಳ ಬಳಕೆ,ಗಣಿಗಾರಿಕೆ ಮುಂತಾದವು ಕಾರಣಗಳಾಗಿವೆ. ದಿನದಿಂದ ದಿನಕ್ಕೆ ಅಂತರ್ಜಲದ ಮಟ್ಟ ಕುಸಿಯುತ್ತಿದೆ. ಎಷ್ಟೋ ಜೀವಸಂಕುಲಗಳು ಅಳಿವಿನಂಚಿನಲ್ಲಿವೆ. ಪರಿಸರದಲ್ಲಿ ಒಂದು ಅಂಶವು ಅಳಿದು ಹೋದರೆ ಸಮತೋಲನ ತಪ್ಪುತ್ತದೆ.
**ಉಪಸಂಹಾರ** :– ಪರಿಸರ ದಿನದಿಂದ ದಿನಕ್ಕೆ ನಾಶವಾಗುತಾ_ ಸಾಗಿದರೆ ನಮ್ಮ ಮುಂದಿನ ಪೀಳಿಗೆಗೆ ಶುದ್ಧ ನೀರು,ಗಾಳಿ, ಆಹಾರ ಸಿಗದೇ ಹೋಗಬಹುದು. ಆದ್ದರಿಂದ ಇದನ್ನರಿತು ಪರಿಸರ ಸಂರಕ್ಷಣೆ ಮಾಡುವುದು ಇಂದಿನ ಅಗತ್ಯವಾಗಿದೆ.

**2) ಕ್ರೀಡೆಗಳ ಮಹತ್ವ:**

**ಪೀಠಿಕೆ:**– ಆರೋಗ್ಯವೇ ಭಾಗ್ಯ ಎಂಬ ನಾಣ್ನುಡಿಯಂತೆ ಕ್ರೀಡೆಗಳು ಆಧುನಿಕತೆಯಲ್ಲಿ ಬಹಳ ಪ್ರಾಮುಖ್ಯತೆ ಪಡೆದುಕೊಂಡಿವೆ. ಸದೃಢ ದೇಹದಲ್ಲಿ ಸದೃಢ ಮನಸ್ಸು ರೂಪಗೊಳ್ಳುತ್ತದೆ. ಆದ್ದರಿಂದ ಪಾಠದ ಜೊತೆಗೆ ಆಟವು ಬೇಕಾಗಿದೆ.

**ವಿಷಯ ನಿರೂಪಣೆ:**– ಇಂದು ಮಾನವನ ಬದುಕು ಯಾಂತ್ರಿಕ ಬದುಕಾಗಿದೆ. ಜೀವನದಲ್ಲಿ ಉತ್ಸಾಹ ತುಂಬಲು ಮಕ್ಕಳಿಂದ ಹಿಡಿದು ವೃದ್ದರೆಲ್ಲರಿಗೂ ಕ್ರೀಡೆಗಳು ಅವಶ್ಯಕವಾಗಿವೆ. ನಮಗೆ ಇಷ್ಟವಾದ ಕ್ರೀಡೆಯನ್ನು ಆಯ್ಕೆಮಾಡಿಕೊಂಡು ಸತತವಾಗಿ ಪ್ರಯತ್ನಮಾಡಿದರೆ ರಾಜ್ಯ ಹಾಗೂ ರಾಷ್ಟ್ರಮಟ್ಟದಲ್ಲಿ ಹೆಸರು ಗಳಿಸಬಹುದು. ಇದಕ್ಕೆ ಉತ್ತಮ ಉದಾಹರಣೆಯಾಗಿ ರಾಹುಲ್ ದ್ರಾವಿಡ್, ಅನಿಲ್ ಕುಂಬ್ಳೆ ಮುಂತಾದವರು ನಮ್ಮ ಕಣ್ಮುಂದೆ ಇದ್ದಾರೆ. ಮಗು ಕ್ರೀಡೆಯಲ್ಲಿ ಭಾಗಿಯಾಗುವುದರಿಂದ ಏಕಾಗ್ರತೆ, ಚುರುಕುತನ, ತತಕ್ಷಣದಲ್ಲಿ ಪ್ರತಿಕ್ರಿಯಿಸುವ ಮನೋಭಾವ ಹಾಗೂ ನಾಯಕತ್ವದ ಗುಣಗಳು ಬೆಳೆದು ಪರಿಪೂರ್ಣ ವ್ಯಕ್ತಿತ್ವ ಹೊಂದಲು ಸಾಧ್ಯವಾಗುತ್ತದೆ.

**ಉಪಸಂಹಾರ:**– ಒಟ್ಟಾರೆಯಾಗಿ ಕ್ರೀಡೆಗಳು ಮಾನವನ ಬದುಕಿನ ಒಂದು ಅಂಗವಾಗಿವೆ. ನಮ್ಮ ಪೂರ್ವಜರಿಂದ ಬಳುವಳಿಯಾಗಿ ಬಂದಿರುವ ಜನಪದ ಕ್ರೀಡೆಗಳನ್ನು ಉಳಿಸಿ ಬೆಳೆಸುವ ಹೊಣೆ ನಮ್ಮದಾಗಬೇಕಿದೆ.

**3) ಸಂಪರ್ಕ ಮಾಧ್ಯಮಗಳಲ್ಲಿ ದೂರದರ್ಶನದ ಪಾತ್ರ:**

**ಪೀಠಿಕೆ :**– ಸಂಪರ್ಕ ಮಾಧ್ಯಮಗಳಲ್ಲಿ ಅತೀ ಹೆಚ್ಚು ಬಳಕೆಯಲ್ಲಿರುವ ಮಾಧ್ಯಮ ದೂರದರ್ಶನವಾಗಿದೆ. ಹೆಸರೇ ಹೇಳುವಂತೆ ದೂರದಲ್ಲಿರುವುದನ್ನು ಕುಳಿತಲ್ಲಿಯೇ ದರ್ಶನ ಮಾಡಿಸುವುದು ದೂರದರ್ಶನವಾಗಿದೆ.

**ವಿಷಯ ನಿರೂಪಣೆ :**– ದೂರದರ್ಶನ ಜನಜೀವನದ ಒಂದು ಅವಿಭಾಜ್ಯ ಅಂಗವಾಗಿದೆ. ಇದು ಮಕ್ಕಳಾದಿಯಾಗಿ ವಯೋವೃದ್ದರವರೆಗೂ ಎಲರನ್ನು ಆಕರ್ಷಿಸುವ ಮಾಧ್ಯಮವಾಗಿದೆ. ಸಮಾಜದ ನಾನಾ ವೃತ್ತಿಗಳಲ್ಲಿ ತೊಡಗಿರುವ ಎಲ್ಲಾ ಜನರಿಗೂ ಉಪಯುಕ್ತ ಮಾಹಿತಿಯನ್ನು ಒದಗಿಸುವುದರೊಂದಿಗೆ ಮನೋರಂಜನಾ ಮಾಧ್ಯಮವಾಗಿಯೂ ಕಾರ್ಯನಿರ್ವಹಿತ್ತಿದೆ. ಉದಾಹರಣಗೆ ರೈತರಿಗೆ  ಕೃಷಿ ಮಾಹಿತಿಯನ್ನು, ವರ್ತಕರಿಗೆ ಮಾರುಕಟ್ಟೆಯ ವಿವರವನ್ನು, ಕರಾವಳಿ ತೀರದವರಿಗೆ ಹವಾಮಾನ ಹಾಗೂ ವಾಯುಗುಣದ ಎಚ್ಚರಿಕೆಯನ್ನು ಕುಳಿತಲ್ಲೇ ಏಕಕಾಲಕ್ಕೆ ಎಲ್ಲರಿಗೂ ತಿಳಿಸುತ್ತದೆ. ವಿದ್ಯಾರ್ಥಿಗಳಿಗೆ ಪರೀಕ್ಷಾ ಸಿದ್ಧತೆಗಾಗಿ ವಿಜ್ಞಾನ, ಗಣಿತ ವಿಷಯಗಳ ಪಾಠಮಾಲಿಕೆ ಪ್ರಸಾರವಾಗುತ್ತಿವೆ. ಕ್ರೀಡೆ, ಸಂಗೀತ, ವಿಜ್ಞಾನ, ಚಲನಚಿತ್ರ, ವಿವಿಧ ಕ್ಷೇತ್ರಗಳ ಮಾಹಿತಿ ನೀಡುವುದರೊಂದಿಗೆ ಇದೊಂದು ಜ್ಞಾನಾಭಿವೃದ್ಧಿಯನ್ನು ಉಂಟು ಮಾಡುವ ಮಾಧ್ಯಮವಾಗಿದೆ.

**ಉಪಸಂಹಾರ:**– ಆಧುನಿಕತೆಯಲ್ಲಿ ದೂರದರ್ಶನದ ಪಾತ್ರ ಪ್ರಮುಖವಾದದ್ದು. ವಿದ್ಯಾರ್ಥಿಗಳು ಇದರ ಸಾಧಕ ಭಾದಕಗಳನ್ನು ಅರಿತು ಉಪಯೋಗಿಸಿಕೊಳ್ಳಬೇಕು.

**4) ರಾಷ್ಟ್ರೀಯ ಹಬ್ಬಗಳು**

**ಪೀಠಿಕೆ:**– ರಾಷ್ಟ್ರೀಯ ಹಬ್ಬಗಳು ಆಯಾ ದೇಶದ ನಾಗರಿಕತೆ, ಸಂಸ್ಕೃತಿ ಹಾಗೂ ಇತಿಹಾಸವನ್ನು ಬಿಂಬಿಸುವ ಪ್ರತೀಕಗಳಾಗಿವೆ. ಎಳೆಯರಲ್ಲಿ ದೇಶಾಭಿಮಾನ ಮೂಡಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

**ವಿಷಯ ನಿರೂಪಣೆ :**– ದೇಶದ ಎಲ್ಲ ಜನರು ತಮ್ಮ ಜಾತಿ, ಧರ್ಮವನ್ನು ಮರೆತು ನಾವೆಲ್ಲರೂ ಒಂದು, ನಾವೂ ಭಾರತೀಯರು ಎಂಬ ಭಾವನೆಯನ್ನು ಹೊಂದಿ ಏಕಕಾಲಕ್ಕೆ ಎಲ್ಲರೂ ಕೂಡಿ ಆಚರಿಸುವ ಹಬ್ಬಗಳೇ ರಾಷ್ಟ್ರೀಯ ಹಬ್ಬಗಳು. ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿದ ಭವ್ಯ ಭಾರತದ ಪ್ರಮುಖ ರಾಷ್ಟ್ರೀಯ ಹಬ್ಬಗಳೆಂದರೆ ಸ್ವಾತಂತ್ರ್ಯೋತ್ಸವ ಹಾಗೂ ಗಣರಾಜ್ಯೋತ್ಸವ. ಸ್ವಾತಂತ್ರ್ಯೋತ್ಸವವನ್ನು ಅಗಸ್ಟ 15 ರಂದು ಗಣರಾಜ್ಯೋತ್ಸವವನ್ನು ಜನೇವರಿ 26ರಂದು ಆಚರಿಸುತ್ತೇವೆ. ಭಾರತ ಸ್ವತಂತ್ರ ಹೊಂದಿದ ಇತಿಹಾಸವನ್ನು ಸ್ವಾತಂತ್ರ್ಯೋತ್ಸವ ಬಿಂಬಿಸಿದರೆ, ಗಣರಾಜ್ಯೋತ್ಸವ ದೇಶ ಏಕರೂಪದ ಆಡಳಿತ ಹಾಗೂ ಕಾನೂನು ವ್ಯವಸ್ಥೆಗೆ ಒಳಪಟ್ಟ ಇತಿಹಾಸವನ್ನು ಬಿಂಬಿಸುತ್ತದೆ.

**ಉಪಸಂಹಾರ:**– ದೇಶದ ಎಲ್ಲ ಜನರು ಶಾಲೆ, ಕಾಲೇಜು, ಕಛೇರಿ, ಸಾರ್ವಜನಿಕ ಸ್ಥಳಗಳಲ್ಲಿ ರಾಷ್ಟ್ರ ಧ್ವಜಾರೋಹಣ ಮಾಡಿ, ದೇಶಕ್ಕೆ ಗೌರವ ಸೂಚಿಸುವುದು ಹಾಗೂ ಯುವಕರಲ್ಲಿ ದೇಶಾಭಿಮಾನ ಮೂಡಿಸುವಲ್ಲಿ ರಾಷ್ಟ್ರೀಯ ಹಬ್ಬಗಳು ಪ್ರಮುಖ ಪಾತ್ರವಹಿಸುತ್ತವೆ.

**5) ಸ್ವಚ್ಛ ಭಾರತ ಅಭಿಯಾನ**

**ಪೀಠಿಕೆ:** – ಸ್ವಚ್ಛತೆಯು ಉತ್ತಮ ನಾಗರಿಕತ್ವದ ಲಕ್ಷಣವಾಗಿದೆ. ಮಾನವನ ನೆಮ್ಮದಿಯ ಬದುಕಿನ ಒಂದು ಅಂಶವಾಗಿದೆ. ನವ ಭಾರತದ ಕನಸನ್ನು ಹೊತ್ತ ದೇಶದ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರು 02.10.2014 ರಲ್ಲಿ ಈ ಯೋಜನೆಯನ್ನು ಜಾರಿಗೆ ತಂದರು.

**ವಿಷಯ ನಿರೂಪಣೆ:** – ಪ್ರಧಾನ ಮಂತ್ರಿಗಳು ದೆಹಲಿಯ ರಾಜಘಾಟದಲ್ಲಿ ಮಹಾತ್ಮಾ ಗಾಂಧೀಜಿಯವರ ದೇಶದ ಅಭಿವೃದ್ಧಿಯ ಮಾತುಗಳನ್ನು ನೆನಪಿಸಿಕೊಳ್ಳುತ್ತಾ ತಾವೇ ಸ್ವತಃ ರಸ್ತೆ ಸ್ವಚ್ಛಗೊಳಿಸುವುದರ ಮೂಲಕ ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿ ದೇಶದ ನಾಗರಿಕರಿಗೆ ಮಾದರಿಯಾದರು. ದೇಶದ ಸರಕಾರಿ ಮತ್ತು ಸರಕಾರೇತರ ಸಂಘ ಸಂಸ್ಥೆಗಳ

ಹಾಗೂ ಶಾಲಾ ಕಾಲೇಜು ವಿದ್ಯಾರ್ಥಿಗಳ ಸಹಭಾಗಿತ್ವದಲ್ಲಿ ಯೋಜನೆಯನ್ನು ಯಶಸ್ವಿಗೊಳಿಸಲು ಯೋಜಿಸಲಾಯಿತು. 2019 ಅಕ್ಟೋಬರ್2 ಒಳಗಾಗಿ ದೇಶವನ್ನು ಬಯಲು ಶೌಚದಿಂದ ಮುಕ್ತಗೊಳಿಸುವುದು ಇದರ ಮುಖ್ಯ ಉದ್ದೇಶವಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಜನರಿಗೆ ಶೌಚಾಲಯ ಕಟ್ಟಿಕೊಳ್ಳಲು ಅನೇಕ ಸರಕಾರ ಹಾಗೂ ಸಹಕಾರಿ ಸಂಘಗಳು ಸಹಾಯಧನ ನೀಡುತ್ತಿವೆ. ಈ ಯೋಜನೆಯ ಧ್ಯೇಯ ವಾಕ್ಯ 'ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ' ಎಂಬುದಾಗಿದೆ.
**ಉಪಸಂಹಾರ:** ದೇಶದ ಅಭಿವೃದ್ಧಿ ಆ ದೇಶದ ಸ್ವಚ್ಛತೆ ಮತ್ತು ಅದರ ಕಾರ್ಯ ವೈಖರಿಯನ್ನು ಅವಲಂಬಿಸಿರುತ್ತದೆ.ಎಲ್ಲರೂ ಮುಕ್ತ ಮನಸ್ಸಿನಿಂದ ಕಾರ್ಯ ನಿರ್ವಹಿಸಿದಲ್ಲಿ ಈ ಯೋಜನೆ ಯಶಸ್ವಿಯಾಗುವುದರಲ್ಲಿ ಎರಡು ಮಾತಿಲ್ಲ.

**6) ಕಂಪ್ಯೂಟರ್‌ನ ಉಪಯೋಗಗಳು**
**ಪೀಠಿಕೆ:–** ಕಂಪ್ಯೂಟರ್ ಈ ಪದದ ಅರ್ಥವು ಕನ್ನಡದಲ್ಲಿ ಗಣಕಯಂತ್ರ ಎಂದಾಗುತ್ತದೆ. ಆಧುನಿಕತೆಯಲ್ಲಿ ಇದರ ಪ್ರಾಮುಖ್ಯತೆ ಬಹಳಷ್ಟಿದೆ. ಇಂದು ಪ್ರತಿಯೊಂದು ಶಾಲಾ ಕಾಲೇಜು, ವಿವಿಧ ಕಛೇರಿಗಳಲ್ಲಿಯೂ ಕಂಪ್ಯೂಟರ್‌ನ ಬಳಕೆಯಿದೆ. ವಿಜ್ಞಾನ ಮುಂದುವರೆದಂತೆ ಇದರಲ್ಲಿ ಅನೇಕ ವಿಧಗಳನ್ನು ನೋಡುತ್ತಿದ್ದೇವೆ.
**ವಿಷಯ ನಿರೂಪಣೆ :–**ಕಂಪ್ಯೂಟರ್ ಎಂಬ ಈ ಮಾಯ ಪೆಟ್ಟಿಗೆಯ ಬಳಕೆಯಿಂದ ಮಾನವನು ಕೈಯಾರೆ ಮಾಡುವ ಮುನ್ನಾಲ್ಕು ದಿನದ ಕೆಲಸವನ್ನು ಈ ಕಂಪ್ಯೂಟರ್‌ನ ಸಹಾಯದಿಂದ ಕೆಲವೇ ಗಂಟೆಗಳಲ್ಲಿ ಮಾಡಬಹುದಾಗಿದೆ. ಗಣಿತ, ವಿಜ್ಞಾನ,ಸಾಮಾನ್ಯ ಜ್ಞಾನ, ಸಾಹಿತ್ಯ, ಸಂಸ್ಕೃತಿ ಜಗತ್ತಿನ ಅನುಭವ ಪರಿಧಿಯು ನಮಗೆ ಅಂಗೈಯಲ್ಲಿ ಕಾಣುವಂತಾಗಿದೆ. ಮಾನವನು ತನಗೆ ಅವಶ್ಯವಿರುವ ದಾಖಲೆಗಳನ್ನು ಇದರಲ್ಲಿ ಸಂಗ್ರಹಿಸಿ, ಬೇಕೆಂದಾಗ ತಕ್ಷಣದಲ್ಲಿ ಪಡೆಯಬಹುದಾಗಿದೆ.
***ಉಪಸಂಹಾರ* :–** ಒಟ್ಟಾರೆಯಾಗಿ ಕಂಪ್ಯೂಟ್‌ರನ ಬಳಕೆ ಆಧುನಿಕ ಯುಗದಲ್ಲಿ ಬಹಳ ಮಹತ್ವ ಪಡೆದುಕೊಂಡಿದೆ. ವೈಜ್ಞಾನಿಕ ಜಗತ್ತಿನ ವಿಶಿಷ್ಟ ಕೊಡುಗೆಯಿಂದ ಕಂಪ್ಯೂಟರ್ ವಿಶಿಷ್ಟ ಸಂಪತ್ತಾಗಿದೆ.

**7).ಬಾಲ್ಯವಿವಾಹ – ಒಂದು ಸಾಮಾಜಿಕ ಪಿಡುಗು :**
**ಪೀಠಿಕೆ :–** ಯಾವುದೇ ಸಮಾಜವು ಸಮೃದ್ಧಿಯಿಂದ ಇರಬೇಕು ಎಂದಾಗ ಅದಕ್ಕೆ ಹಲವಾರು ಅಡೆತಡೆಗಳು ಉಂಟಾಗುತ್ತದೆ. ಹೀಗೆ ಸಮಾಜದ ಸ್ವಾಸ್ತ್ಯವನ್ನು ಹಾಳುಗೆಡವುವ ಕೆಲವು ಆಚರಣೆಯನ್ನು ಸಾಮಾಜಿಕ ಪಿಡುಗುಗಳು ಎನ್ನುವರು ಅವುಗಳಲ್ಲಿ ಬಾಲ್ಯ ವಿವಾಹವೂ ಒಂದು.
**ವಿಷಯ ನಿರೂಪಣೆ :** ಸಮಾಜವು ಸದೃಡವಾಗಿ, ಸ್ವಾಸ್ತ್ಯದಿಂದ ಇರುವಲ್ಲಿ ಸಮಾಜಿಕ ಮೌಲ್ಯಗಳು ಬಹಳ ಮುಖ್ಯ. ಆ ಮೌಲ್ಯಗಳು ಅಪಮೌಲ್ಯವಾದಾಗ ಸಮಾಜದ ಸ್ವಾಸ್ತ್ಯ ಹಾಳಾಗುತ್ತದೆ.ಗಂಡಿಗೆ 21 ವರ್ಷ, ಹೆಣ್ಣಿಗೆ 18 ವರ್ಷತುಂಬದ ಪ್ರಾಪ್ತ ವಯಸ್ಸಿಗೆ ಬರದ ಗಂಡು ಅಥವಾ ಹೆಣ್ಣು ಮಕ್ಕಳನ್ನು ವಿವಾಹ ಮಾಡುವುದರಿಂದ ಅವರು ಅನಾರೋಗ್ಯಕ್ಕೆ ತುತ್ತಾಗುತ್ತಾರೆ. ಅವರ ಮುಂದಿನ ಪೀಳಿಗೆಯು ಕೂಡ ಅನಾರೋಗ್ಯದಿಂದ ಹುಟ್ಟುತ್ತವೆ. ಅಲ್ಲದೆ ಇವರು ಸ್ವತಂತ್ರವಾಗಿ ಬದುಕು ಸಾಗಿಸಲು ಸಾಧ್ಯವಾಗದೆ ಆರ್ಥಿಕ ಮುಗ್ಗಟ್ಟಿಗೆ ಸಿಲುಕಿ ಇಡೀ ಜೀವನ ಪರಿತಪಿಸುತ್ತಾರೆ. ಇಂತಹ ದುಷ್ಟ ಪದ್ಧತಿಯು ಒಂದು ಸಾಮಾಜಿಕ ಪಿಡುಗಾಗಿದೆ.
**ಉಪಸಂಹಾರ :**
ಬಾಲ್ಯವಿವಾಹವು ನಡೆಯದಂತೆ ತಡೆಗಟ್ಟುವ ಮಾರ್ಗದಲ್ಲಿ ಪೋಷಕರು, ಮಕ್ಕಳು, ಸಮಾಜದ ಇತರ ವ್ಯಕ್ತಿಗಳಿಗೆಲ್ಲಾ ಜಾಗೃತಿ ಮೂಡಿಸಿ ಇಡೀ ಸಮಾಜವನ್ನು ಇಂತಹ ಪಿಡುಗುಗಳಿಂದ ಮುಕ್ತಮಾಡುವುದು ಎಲ್ಲಾ ಪ್ರಜೆಗಳ ಕರ್ತವ್ಯವಾಗಿದೆ

**ಪತ್ರಲೇಖನ** **ಖಾಸಗಿ ಪತ್ರ / ವೈಯಕ್ತಿಕ ಪತ್ರ**

1) ನಿಮ್ಮನ್ನು ಶ್ರೀರಂಗಪಟ್ಟಣದ ಸರ್ಕಾರಿ ಪ್ರೌಢಶಾಲೆಯ ಕೀರ್ತಿಕುಮಾರ್ ಎಂದು ಭಾವಿಸಿಕೊಂಡು ಹಾಸನದಲ್ಲಿರುವ ನಿಮ್ಮ ತಂದೆಗೆ ಶಾಲಾ ಶುಲ್ಕ ಕಟ್ಟಲು 150/- ರೂಪಾಯಿಗಳನ್ನು ಕೋರಿ ಒಂದು ಪತ್ರ ಬರೆಯಿರಿ.

ಇವರಿಂದ: ದಿನಾಂಕ : 05.06.2020

**ಕೀರ್ತಿಕುಮಾರ,**
ಒಂಬತ್ತನೆಯ ತರಗತಿ,
ಸರ್ಕಾರಿ ಪ್ರೌಢಶಾಲೆ,
**ಶ್ರೀರಂಗಪಟ್ಟಣ** - 571438.

ತೀರ್ಥರೂಪರವರಿಗೆ ನಿಮ್ಮ ಮಗನು ಮಾಡುವ ಸಾಷ್ಟಾಂಗ ನಮಸ್ಕಾರಗಳು. ಇಲ್ಲಿ ನಾನು ಆರೋಗ್ಯವಾಗಿದ್ದೇನೆ. ಅಲ್ಲಿ ನಿಮ್ಮ ಮತ್ತು ಅಮ್ಮನ ಆರೋಗ್ಯ ಹೇಗಿದೆ? ಯಾವುದಕ್ಕೂ ಪತ್ರ ಬರೆಯಿರಿ. ಇಲ್ಲಿ ನಾನು ಚೆನ್ನಾಗಿ ವಿದ್ಯಾಭ್ಯಾಸ ಮಾಡುತ್ತಿದ್ದೇನೆ. ನಿಮ್ಮ ಅಪೇಕ್ಷೆಯಂತೆ ಪ್ರಥಮ ಸ್ಥಾನದಲ್ಲಿ ಉತ್ತೀರ್ಣನಾಗಲು ಪ್ರಯತ್ನಿಸುತ್ತಿದ್ದೇನೆ. ಪತ್ರದ ಮುಖ್ಯ ವಿಚಾರವೇನೆಂದರೆ, ಜೂನ್ 10 ನೇ ತಾರೀಖಿನ ಒಳಗಾಗಿ ವಾರ್ಷಿಕ ಪರೀಕ್ಷೆಯ ಶುಲ್ಕ 150/- (ನೂರ ಐವತ್ತು ಮಾತ್ರ) ರೂಪಾಯಿಗಳನ್ನು ಕಟ್ಟಬೇಕಾಗಿದೆ. ತಾವು ಆದಷ್ಟು ಬೇಗ ಅಂಚೆ ಮೂಲಕ ಹಣ ಕಳುಹಿಸಿ ಕೊಡಿ ಎಂದು ಕೇಳಿಕೊಳ್ಳುತ್ತೇನೆ. ಮನೆಯವರಿಗೆಲ್ಲ ನನ್ನ ನಮಸ್ಕಾರಗಳನ್ನು ತಿಳಿಸಿ. ಉಳಿದ ವಿಷಯವನ್ನು ಊರಿಗೆ ಬಂದಾಗ ಮಾತನಾಡುತ್ತೇನೆ.

ನಮಸ್ಕಾರಗಳೊಂದಿಗೆ,

ನಿಮ್ಮ ಪ್ರೀತಿಯ ಮಗ
ಕೀರ್ತಿಕುಮಾರ

ಇವರಿಗೆ:
**ಶ್ರೀ ಸಿದ್ದಪ್ಪ,**
ಮನೆ ಸಂಖ್ಯೆ 54, 1ನೆಯ ಮುಖ್ಯರಸ್ತೆ,
ಕುವೆಂಪುನಗರ, **ಹಾಸನ** - 573 201

2) ನಿಮ್ಮನ್ನು ಗೌರಿಬಿದನೂರಿನ ವಿನಾಯಕ ಪ್ರೌಢಶಾಲೆಯ ಮಮತ ಕೆ.ಎಲ್. ಎಂದು ಭಾವಸಿಕೊಡು ತುಮಕೂರಿನಲ್ಲಿರುವ ನಿಮ್ಮ ತಂದೆಗೆ ನಿಮ್ಮ ವಿದ್ಯಾಭ್ಯಾಸದ ಪ್ರಗತಿಯನ್ನು ಕುರಿತು ಒಂದು ಪತ್ರ ಬರೆಯಿರಿ.

ಇವರಿಂದ, ದಿನಾಂಕ 25-02-2020

ಮಮತ ಕೆ. ಎಲ್.
10 ನೇ ತರಗತಿ, 'ಬಿ' ವಿಭಾಗ,
ವಿನಾಯಕ ಪ್ರೌಢಶಾಲೆ, ಗೌರಿಬಿದನೂರು.

ತೀರ್ಥರೂಪರವರಿಗೆ ನಿಮ್ಮ ಮಗಳು ಮಾಡುವ ನಮಸ್ಕಾರಗಳು.
ನಾನು ಇಲ್ಲಿ ಆರೋಗ್ಯವಾಗಿದ್ದೇನೆ. ನಿಮ್ಮ ಯೋಗಕ್ಷೇಮದ ವಿಚಾರವಾಗಿ ಪತ್ರವನ್ನು ಬರೆಯಿರಿ.ಇಲ್ಲಿ ನಮ್ಮ ನಿತ್ಯದ ಶಾಲಾ ಚಟುವಟಿಕೆಗಳು ಯಾವ ತೊಂದರೆಯೂ ಇಲ್ಲದಂತೆ ನಡೆಯುತ್ತಿವೆ. ಕಳೆದ ವಾರ ಮಾಸಿಕ ಪರೀಕ್ಷೆಗಳು ನಡೆದಿದ್ದವು. ಆ ಪರೀಕ್ಷೆಯಲ್ಲಿ ನಾನು ತರಗತಿಗೆ ದ್ವಿತೀಯ ಸ್ಥಾನವನ್ನು ಪಡೆದಿದ್ದೇನೆ. ಮಂದಿನ ಪರೀಕ್ಷೆಯಲ್ಲಿ ಇನ್ನು ಸ್ವಲ್ಪ ಪ್ರಯತ್ನ ಮಾಡಿದಲ್ಲಿ ನೀನು ಪ್ರಥಮ ಸ್ಥಾನವನ್ನು ಪಡೆದೇ ಪಡೆಯುತ್ತೀಯ ಎಂದು ನನ್ನ ಗುರುಗಳು ಹೇಳಿದರು. ನಾನು ಅವರ ಮಾರ್ಗದರ್ಶನದಂತೆ ವ್ಯಾಸಂಗವನ್ನು ಮಾಡಿ, ಶಾಲೆಗೆ ಹಾಗೂ ನಿಮಗೆ ಕೀರ್ತಿಯನ್ನು ತರುತ್ತೇನೆ. 10 ನೇ ತರಗತಿಯ ಫಲಿತಾಂಶ ನಮ್ಮ ಮುಂದಿನ ವ್ಯಾಸಂಗಕ್ಕೆ ದಾರಿದೀಪವಾಗುವುದರಿಂದ ಶಾಲಾ ಶಿಕ್ಷಕರು ತುಂಬಾ ಕಾಳಜಿವಹಿಸಿ ಪಾಠಗಳನ್ನು ಮಾಡುತ್ತಿದ್ದಾರೆ. ನಾವೂ ಕೂಡ ಶ್ರದ್ಧೆವಹಿಸಿ ಕಲಿಯುತ್ತಿದ್ದೇವೆ. ಒಳ್ಳೆಯ ಶಾಲೆ ಹಾಗೂ ಗುರುಗಳನ್ನು ಪಡೆದ ನಾವು ನಿಜಕ್ಕೂ ಧನ್ಯರು. ಮನೆಯಲ್ಲಿ ನನ್ನ ಪ್ರೀತಿಯ ಅಮ್ಮ ಮತ್ತು ಅಣ್ಣನಿಗೆ ನನ್ನ ನಮಸ್ಕಾರಗಳನ್ನು ತಿಳಿಸಿರಿ.

ನಮಸ್ಕಾರಗಳೊಂದಿಗೆ,

ನಿಮ್ಮ ಪ್ರೀತಿಯ
(ಮಮತ ಕೆ.ಎಲ್.)

**ಇವರಿಗೆ,**
ಶ್ರೀ ಬಸವರಾಜ ಕೆ. ಎಲ್.
ಮನೆ ನಂ - 1199, ಬನಶಂಕರಿ ನಿಲಯ,
ರಾಜಕುಮಾರ್ ರಸ್ತೆ, ತುಮಕೂರು.

3.ನಿಮ್ಮ ಶಾಲೆಯಲ್ಲಿ ನಡೆದ 'ಶಾಲಾ ವಾರ್ಷಿಕೋತ್ಸವ'ವನ್ನು ಕುರಿತು ನಿಮ್ಮ ಗೆಳೆಯ/ ಗೆಳತಿಗೆ ಒಂದು ಪತ್ರವನ್ನು ಬರೆಯಿರಿ.

ಇಂದ: ದಿನಾಂಕ:12:03:2020

ಸಲ್ಮಾ /ಸಲ್ಮಾನ್
10 ನೇ ತರಗತಿ
ಸರ್ಕಾರಿ ಉರ್ದು ಪ್ರೌಢಶಾಲೆ(ಆರ್.ಎಂ.ಎಸ್.ಎ.)
ಅರಳಿಹಳ್ಳಿ, ಭದ್ರಾವತಿ ತಾಲ್ಲೂಕು

ಪ್ರೀಯ ಗೆಳೆಯ/ಗೆಳತಿ ಯಾದ ಸುಧಾ/ಸುಧಾಕರ ಳಿಗೆ/ನಿಗೆ ನಿನ್ನ ಗೆಳೆಯ/ಗೆಳತಿ ಮಾಡುವ ವಂದನೆಗಳು. ನಮ್ಮ ಶಾಲೆಯಲ್ಲಿ ದಿನಾಂಕ 7ನೇ ಫೆಬ್ರವರಿ 2020 ರಂದು 'ಶಾಲಾ ವಾರ್ಷಿಕೋತ್ಸವ'ವನ್ನು ಹಮ್ಮಿಕೊಂಡಿದ್ದೆವು. ನಮ್ಮ ಮುಖ್ಯೋಪಾಧ್ಯಾಯರ ಮುಂದಾಳತ್ವದಲ್ಲಿ ಎಲ್ಲಾ ಶಿಕ್ಷಕರು,ವಿದ್ಯಾರ್ಥಿಗಳು 'ಶಾಲಾ ವಾರ್ಷಿಕೋತ್ಸವ' ಕಾರ್ಯಕ್ರಮದಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದರು. ವಾರ್ಷಿಕೋತ್ಸವದ ಅಂಗವಾಗಿ ವಾರ್ಷಿಕ ಕ್ರೀಡಾಕೂಟ,ರಸಪ್ರಶ್ನೆ,ಪ್ರಬಂಧ,ಭಾಷಣ ಸ್ಪರ್ಧೆಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದರು.ಕೆಲವು ಸ್ಪರ್ಧೆಗಳಲ್ಲಿ ನಾನು ಸಹ ಭಾಗವಹಿಸಿ ಬಹುಮಾನಗಳನ್ನು ಪಡೆದಿದ್ದೇನೆ ಎಂದು ಹೇಳಲು ನನಗೆ ಹೆಮ್ಮೆ ಎನಿಸುತ್ತದೆ. ಹಾಗೆಯೇ ನನ್ನ ವಿದ್ಯಾಭ್ಯಾಸದ ಕಡೆಗೂ ಗಮನ ನೀಡುತ್ತಿದ್ದೇನೆ. ಈ ಪತ್ರ ತಲುಪಿದ ತಕ್ಷಣ ಪತ್ರ ಬರೆಯುತ್ತೀಯ ಎಂದು ನಂಬಿರುತ್ತೇನೆ.
ಈ ಎಲ್ಲ ವಿಷಯವನ್ನು ನಿನ್ನ ಮಾತೃಶ್ರೀಯವರಿಗೂ ಹೇಳಿ,ನನ್ನ ನಮಸ್ಕಾರಗಳನ್ನು ತಿಳಿಸು..

ವಂದನೆಗಳೊಂದಿಗೆ, ಇತಿ ನಿನ್ನ ಪ್ರೀತಿಯ ಗೆಳೆಯ/ಗೆಳತಿ
ಸಲ್ಮಾ / ಸಲ್ಮಾನ್

ಗೆ,
ಸುಧಾ/ಸುಧಾಕರ
ಸರ್ಕಾರಿ ಪ್ರೌಢಶಾಲೆ,ನೆಹರೂ ನಗರ,
ಶಿವಮೊಗ್ಗ–577421

## ವ್ಯವಹಾರಿಕ ಪತ್ರ ಅಥವಾ ಮನವಿ ಪತ್ರ

4) ನಿಮ್ಮನ್ನು ವಿಜಯಪುರದ ಸಂಗಮೇಶ ಎಂದು ಭಾವಿಸಿಕೊಂಡು ನಿಮ್ಮ ಊರಿನ ಕೋಟೆ ಬೀದಿಗೆ ನೀರಿನ ಸೌಲಭ್ಯ ಒದಗಿಸಿಕೊಡುವಂತೆ ಕೋರಿ, ನಿಮ್ಮ ಜಿಲ್ಲೆಯ ಜಿಲ್ಲಾಧಿಕಾರಿಯವರಿಗೆ ಒಂದು ಪತ್ರ ಬರೆಯಿರಿ.

**ಇವರಿಂದ,** ದಿನಾಂಕ : 05.05.2020

ಶ್ರೀ ಸಂಗಮೇಶ,
ಕೋಟೆ ಬೀದಿ,
ಬಿಜಾಪುರ – 586101.
**ಇವರಿಗೆ,**
ಜಿಲ್ಲಾಧಿಕಾರಿಗಳು,
ವಿಜಯಪುರ – 586101,
ವಿಜಯಪುರ ಜಿಲ್ಲೆ.
ಮಾನ್ಯರೇ,

**ವಿಷಯ :** ಕೋಟೆ ಬೀದಿಗೆ ನೀರಿನ ಸೌಲಭ್ಯ ಒದಗಿಸುವಂತೆ ಕೋರಿ.
ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ನಮ್ಮ ಕೋಟೆ ಬೀದಿಯಲ್ಲಿ ಸುಮಾರು 60 ಮನೆಗಳಿದ್ದು ಕೊಳಾಯಿಯ ವ್ಯವಸ್ಥೆ ಇಲ್ಲದೆ ಕುಡಿಯುವ ನೀರಿಗೆ ತುಂಬಾ ತೊಂದರೆಯಾಗಿದೆ. ಜನಪರ ಕಾಳಜಿ ಇರುವ ತಾವು ದಯಮಾಡಿ ಕೋಟೆ ಬೀದಿಗೆ ಬೋರ್‌ವೆಲ್ ಹಾಕಿಸಿ, ನಳದ ಮೂಲಕ ಕುಡಿಯುವ ನೀರಿನ ಸೌಲಭ್ಯ ಒದಗಿಸಿಕೊಡಬೇಕೆಂದು ತಮ್ಮಲ್ಲಿ ವಿನಯಪೂರ್ವಕವಾಗಿ ಕೋರುತ್ತೇನೆ.
ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,
(ಸಂಗಮೇಶ)

ಸ್ಥಳ : ಬಿಜಾಪುರ

5) ನಿಮ್ಮನ್ನು ಧಾರವಾಡದ ಜವಾಹರ ನವೋದಯ ಶಾಲೆಯ ಚಿನ್ಮಯ ಜಿ.ಎಂ. ಎಂದು ಭಾವಿಸಿಕೊಂಡು ಎರಡು ದಿನ ರಜೆ ಕೋರಿ ನಿಮ್ಮ ಶಾಲೆಯ ತರಗತಿ ಶಿಕ್ಷಕರಿಗೆ ಒಂದು ರಜಾ ಅರ್ಜಿ ಬರೆಯಿರಿ.

ಇವರಿಂದ, ದಿನಾಂಕ 20–04–2020

**ಚಿನ್ಮಯ್ ಜಿ.ಎಂ.**
8 ನೇ ತರಗತಿ, 'ಎ' ವಿಭಾಗ,
ಜವಾಹರ ನವೋದಯ ಶಾಲೆ
ಧಾರವಾಡ.

ಇವರಿಗೆ,
**ತರಗತಿ ಅಧ್ಯಾಪಕರು**
ಜವಾಹರ ನವೋದಯ ಶಾಲೆ
ಧಾರವಾಡ.

ಮಾನ್ಯರೆ,

**ವಿಷಯ :** ಎರಡು ದಿನ ರಜೆ ನೀಡುವಂತೆ ಕೋರಿ

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ನನ್ನ ಅಕ್ಕನ ಮದುವೆಯು ದಿನಾಂಕ 22–04–2020 ಹಾಗೂ 23–04–2020 ರಂದು ಬೆಳಗಾವಿಯಲ್ಲಿ ನೆರವೇರುತ್ತಿದೆ. ಈ ಸಂಭ್ರಮದಲ್ಲಿ ನಾನೂ ಅಗತ್ಯವಾಗಿ ಪಾಲ್ಗೊಳ್ಳಬೇಕಾಗಿದೆ. ಆದುದರಿಂದ ದಯವಿಟ್ಟು ಮೇಲ್ಕಾಣಿಸಿದ ಎರಡು ದಿನಗಳಿಗೆ ರಜೆಯನ್ನು ನೀಡಬೇಕೆಂದು ವಿನಂತಿಸುತ್ತೇನೆ.

ನಮಸ್ಕಾರಗಳೊಂದಿಗೆ,

ತಮ್ಮ ವಿಧೇಯ ವಿದ್ಯಾರ್ಥಿ
ಸಹಿ
(ಚಿನ್ಮಯ್ ಜಿ.ಎಂ.)

**6) ನಿಮ್ಮನ್ನು** ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನ ಗುಬ್ಬಿಹಳ್ಳಿಯ ಸರ್ಕಾರಿ ಪ್ರೌಢಶಾಲೆಯ ತನುಜ ಎಸ್. ಎಂ. ಎಂದು ಭಾವಿಸಿಕೊಡು ನಿಮ್ಮ ಊರಿನ ಬೀದಿ ದೀಪಗಳನ್ನು ಸರಿಪಡಿಸುವಂತೆ ಕೋರಿ ನಿಮ್ಮ ಗ್ರಾಮಪಂಚಾಯಿತಿ ಅಧ್ಯಕ್ಷರಿಗೆ ಒಂದು ಪತ್ರ ಬರೆಯಿರಿ.

**ಇವರಿಂದ,** ದಿನಾಂಕ 10–01–2020

ತನುಜ ಎಸ್. ಎಂ.
10 ನೇ ತರಗತಿ,
ಸರ್ಕಾರಿ ಪ್ರೌಢಶಾಲೆ,
ಗುಬ್ಬಿಹಳ್ಳಿ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

**ಇವರಿಗೆ,**
ಅಧ್ಯಕ್ಷರು,
ಗ್ರಾಮ ಪಂಚಾಯಿತಿ, ಗುಬ್ಬಿಹಳ್ಳಿ.
ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.

**ಮಾನ್ಯರೇ,**

**ವಿಷಯ:** ನಮ್ಮ ಊರಿನ ಬೀದಿ ದೀಪಗಳನ್ನು ಸರಿಪಡಿಸುವಂತೆ ಕೋರಿ.

ವಿಷಯಕ್ಕೆ ಸಂಬಂಧಿಸಿದಂತೆ, ತಮ್ಮ ಗಮನಕ್ಕೆ ತರಬಯಸುವುದೇನೆಂದರೆ, ನಮ್ಮ ಊರಿನ ಬೀದಿ ದೀಪಗಳು ಕೆಲವು ದಿನಗಳಿಂದ ಕೆಟ್ಟುಹೋಗಿವೆ. ಇದರಿಂದ ರಸ್ತೆಯಲ್ಲಿ ರಾತ್ರಿ ಹೊತ್ತು ಮುದುಕರು, ಹೆಣ್ಣುಮಕ್ಕಳು ಹಾಗೂ ಮಕ್ಕಳು ಏಕಾಂಗಿಯಾಗಿ ಸಂಚರಿಸಲು ಭಯಪಡುವಂತಾಗಿದೆ. ಹೀಗಾಗಿ, ಜನಪರ ಕಾಳಜಿ ಹೊಂದಿರುವ ತಾವು ಈ ಕೂಡಲೇ ನಮ್ಮ ಗ್ರಾಮದ ಬೀದಿ ದೀಪಗಳನ್ನು ಸರಿಪಡಿಸಿ ಜನರಿಗಾಗುತ್ತಿರುವ ತೊಂದರೆಗಳನ್ನು ನಿವಾರಿಸಬೇಕೆಂದು ಗ್ರಾಮಸ್ಥರ ಪರವಾಗಿ ಮನವಿ ಮಾಡಿಕೊಳ್ಳುತ್ತೇನೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ತನುಜ ಎಸ್. ಎಂ.)

# ಅಪರಿಚಿತ ಗದ್ಯ

**ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1)ಸಿ.ವಿ. ರಾಮನ್ ಶಿಷ್ಯನನ್ನು ಆರಿಸಿಕೊಂಡ ಮೇಲೆ ಅವನಿಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟು ಅವನನ್ನು ಮಗನಿಗಿಂತ ಹೆಚ್ಚಾಗಿ ನೋಡಿಕೊಳ್ಳುತ್ತಿದ್ದರು. ತಮ್ಮ ಶಿಷ್ಯರೂ ತಮ್ಮಂತೆಯೇ ವಿಜ್ಞಾನದ ಅಭ್ಯಾಸಿಗಳು, ತಮ್ಮ ನಡುವೆ ಮೇಲು ಕೀಳೆಂಬ ತಾರತಮ್ಯವಿರಕೂಡದು. ವಿಜ್ಞಾನದ ಅನ್ವೇಷಣಾ ಕಾರ್ಯದಲ್ಲಿ ನಾವೆಲ್ಲಾ ಸರಿಸಮಾನರಾದ ಕೆಲಸಗಾರರು ಎಂದು ಭಾವಿಸಿದ್ದರು. ಅದರಂತೆಯೇ ನಡೆದುಕೊಳ್ಳುತ್ತಿದ್ದರು. ಶಿಷ್ಯರು ನಡೆಸುವ ಸಂಶೋಧನೆ ಅತ್ಯುತ್ತಮ ವರ್ಗದ್ದಾಗಿರಬೇಕು. ಇತರರನ್ನು ಸುಮ್ಮನೆ ಅನುಸರಿಸುವುದು ಸರ್ವಥಾ ಕೂಡದು. ಸ್ವಂತಿಕೆ ಇರಬೇಕು. ಹೊಸ ದಾರಿಯನ್ನು ಗುರುತಿಸಿ ಮುಂದುವರಿಯಬೇಕು ಎಂದು ಒತ್ತಿ ಒತ್ತಿ ಹೇಳುತ್ತಿದ್ದರು. ಬೆಳಗ್ಗೆ ಪ್ರಯೋಗಾಲಯಕ್ಕೆ ಬಂದ ಕೂಡಲೇ ಒಂದು ಸುತ್ತು ಹೊರಟು ಎಲ್ಲಾ ಭಾಗಗಳಿಗೂ ಭೇಟಿಯಿತ್ತು, ಪ್ರತಿಯೊಬ್ಬ ಶಿಷ್ಯನೂ ಏನು ಮಾಡುತ್ತಿದ್ದಾನೆ, ಅವನ ಪ್ರಗತಿ ಎಷ್ಟು ಎಂದು ವಿಚಾರಿಸುತ್ತಿದ್ದರು. ಮುಂದೆ ಏನು ಮಾಡಬೇಕೆನ್ನುವ ವಿಷಯವಾಗಿ ಸಲಹೆಗಳನ್ನು ಕೊಡುತ್ತಿದ್ದರು. ಶಿಷ್ಯರೇನಾದರೂ ಹೊಸ ವಿಷಯವೊಂದನ್ನು ಬಯಲಿಗೆ ತಂದಿದ್ದನೆಂದರೆ, ಬೆನ್ನು ತಟ್ಟಿ ಅವನನ್ನು ಎಲ್ಲರ ಎದುರಿಗೂ ಹೊಗಳಿ ಅಟ್ಟಕ್ಕೇರಿಸುತ್ತಿದ್ದರು.ಶಿಷ್ಯರು ಗುರುವಿನ ಕೊಂಡಾಟದಿಂದ ಉಬ್ಬಿ ಹೋಗುತ್ತಿದ್ದರು. ಸಂಶೋಧನೆಗಳನ್ನು ಮತ್ತಷ್ಟು ಹುರುಪಿನಿಂದ ಮುಂದುವರೆಸುತ್ತಿದ್ದರು.

ಪ್ರಶ್ನೆಗಳು:

1ಅ) ಶಿಷ್ಯರನ್ನು ಕುರಿತು ರಾಮನ್ ಅವರ ಮನೋಭಾವ ಏನಾಗಿತ್ತು?

1ಆ) ಶಿಷ್ಯರನ್ನು ಹುರಿದುಂಬಿಸುವ ರಾಮನ್ ಅವರ ದೈನಂದಿನ ಕಾರ್ಯವನ್ನು ತಿಳಿಸಿ.

2)ಹನ್ನೆರಡನೆಯ ಶತಮಾನಕ್ಕಿಂತ ಮುಂಚೆ ಸಮಾಜದಲ್ಲಿದ್ದ ಶೋಷಣೆ, ಅಸತ್ಯ, ಅಧರ್ಮ, ಜಾತೀಯತೆ,ಮೇಲು ಕೀಳೆಂಬ ಸಾಮಾಜಿಕ ಕಟ್ಟು ಪಾಡುಗಳು ಜೀವಂತವಾಗಿದ್ದವು. ಅಸ್ಪೃಶ್ಯತೆ ತಾಂಡವಾಡುತ್ತಿತ್ತು. ಇದನ್ನು ತಪ್ಪಿಸಿ ಬಸವಣ್ಣನವರು ತಮ್ಮ ವಚನಗಳಲ್ಲಿ ಸತ್ಯ, ಧರ್ಮ, ನ್ಯಾಯ ಒದಗಿಸಿ ಜೀವನ ಮೌಲ್ಯಗಳನ್ನು ಕಟ್ಟಿಕೊಟ್ಟರು. ಸಮಾಜದ ಅಸಮಾನತೆಯನ್ನು ತೊಡೆದು ಸಮಾನತೆಯನ್ನು ಬಿತ್ತಿದ ಮಹಾಪುರುಷರಲ್ಲಿ ಬಸವಣ್ಣನವರು ಅಗ್ರಮಾನ್ಯರು. ವ್ಯಕ್ತಿ ಶುದ್ಧವಾಗದೆ ಸಮಾಜ ಶುದ್ಧವಾಗುವುದಿಲ್ಲ. ನಮ್ಮ ಅಂತರಂಗ ಬಹಿರಂಗಗಳೆರಡೂ ಶುದ್ಧಿಯಾಗಿರಬೇಕು. ಆಡಂಬರದ ಬದುಕನ್ನು ಕೂಡಲ ಸಂಗಮ ದೇವ ಮೆಚ್ಚುವುದಿಲ್ಲ.

ಪ್ರಶ್ನೆಗಳು:
2ಅ) ಬಸವಣ್ಣನವರು ಹೇಳಿದ ಜೀವನ ಮೌಲ್ಯಗಳನ್ನು ತಿಳಿಸಿ.
2ಆ) ವ್ಯಕ್ತಿ ಸಮಾಜವನ್ನು ಕುರಿತು ಬಸವಣ್ಣನವರು ಹೇಳಿದ ವಿಚಾರಗಳನ್ನು ಬರೆಯಿರಿ.

# ಗ್ರಂಥಋಣ


| ಕ್ರ ಸಂ | ಪುಸ್ತಕದ ಹೆಸರು | ಲೇಖಕರ ಹೆಸರು |
|---|---|---|
| 1 | 9ನೆಯ ತರಗತಿಯ ತಿಳಿ ಕನ್ನಡ ದ್ವಿತೀಯ ಭಾಷಾ ಕನ್ನಡ ಪಠ್ಯಪುಸ್ತಕ. | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ) ಬೆಂಗಳೂರು |
| 2 | 8 ಮತ್ತು 10ನೆಯ ತರಗತಿಯ ತಿಳಿ ಕನ್ನಡ ದ್ವಿತೀಯ ಭಾಷಾ ಕನ್ನಡ ಪಠ್ಯಪುಸ್ತಕ. | ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ(ರಿ) ಬೆಂಗಳೂರು |
| 3 | ವಿದ್ಯಾರ್ಥಿ ಮಾರ್ಗದರ್ಶಿ | ಕನ್ನಡ ಶಿಕ್ಷಕರ ವೇದಿಕೆ, ಬೆಂಗಳೂರು. |
| 4 | ಕನ್ನಡ ಸಾಹಿತ್ಯ ಸಂಪದ ಪಲ್ಲವ | ಎಂ.ಸಿ.ಸಿ ಪಬ್ಲಿಕೇಷನ್ಸ್, ಬೆಂಗಳೂರು. |
| 5 | ಡೈಮಂಡ್ ತಿಳಿ ಕನ್ನಡ | ಶ್ರೀಲತಾ ಜಿ.ಎನ್. ಎಂ.ಇ.ಎಸ್. ಕಿಶೋರ ಕೇಂದ್ರ ಪ್ರೌಢಶಾಲೆ, ಬೆಂಗಳೂರು |
| 6 | ಕನ್ನಡ ಮಧ್ಯಮ ವ್ಯಾಕರಣ | ತೀ.ನಂ.ಶ್ರೀಕಂಠಯ್ಯ |


ಪರಶುರಾಮ್ ಎನ್